ಬೆಂಗಳೂರು
ಭಾನುವಾರ, 21 ಜೂನ್ 2026
ಸಂಪುಟ 33, ಸಂಚಿಕೆ 231, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಇಂದು ವಿಶ್ವ ಯೋಗ ದಿನ

ಇಂದು ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ

• **ಬೆಳಗಾವಿ:** ನಗರದ ಸಂಘ ಸದನ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಶ್ರೀ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಭಾನುವಾರ ಅದ್ದೂರಿಯಾಗಿ ಲೋಕಾರ್ಪಣೆಗೊಳ್ಳಲಿದೆ.

ಕಾರ್ಯಕ್ರಮಕ್ಕೆ ಪ.ಪೂ. ಶ್ರೀ ಮ.ನಿ.ಪ್ರ.ಗುರುಸಿದ್ಧ ಮಹಾಸ್ವಾಮಿಗಳು, ಕಾರಂಜಿಮಠದ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ



ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನೇತೃತ್ವದಲ್ಲಿ ಸ್ಮಾರಕ ಭವನವನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತಸಂಘಚಾಲಕರಾದ ಬಸವರಾಜ ಡಂಬಳ ವಹಿಸಲಿದ್ದು, ಜನ ಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಅವರು ಸರ್ವ ಜನತೆಗೆ ಆತ್ಮೀಯ ಸ್ವಾಗತ ಕೋರಿದ್ದಾರೆ.

ಲೋಕಾರ್ಪಣೆ ಸಮಾರಂಭದ ಹಿನ್ನೆಲೆಯಲ್ಲಿ ಸ್ಮಾರಕ ಭವನವನ್ನು ಮಧುವಣಗಿತ್ತಿಯಂತೆ ಅಲಂಕರಿಸಲಾಗಿದ್ದು, ಇಡೀ ಪ್ರದೇಶ ಹಬ್ಬದ ವಾತಾವರಣವನ್ನು ಪಡೆದುಕೊಂಡಿದೆ. ಸಂಘ ಪರಿವಾರದ ಪದಾಧಿಕಾರಿಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಜನರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ನಗರದ ಪ್ರಮುಖ ಕಾರ್ಯಕ್ರಮವಾಗಿ ಗಮನ ಸೆಳೆದಿರುವ ಈ ಲೋಕಾರ್ಪಣೆ ಸಮಾರಂಭಕ್ಕೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ.

ಡಿಕೆಶಿ ಪೂಜೆ



ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಮುಂಬೈನ ಪ್ರಸಿದ್ಧ ಸಿದ್ಧಿ ವಿನಾಯಕ ದೇಗುಲಕ್ಕೆ ಶನಿವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ತಿಂಗಳಲ್ಲಿ ಕಾಮಗಾರಿ ಮುಗಿಸಿ: ಖಂಡ್ರೆ

• **ಬೆಂಗಳೂರು:** ಗ್ರಾಮೀಣ ಪ್ರದೇಶಗಳಲ್ಲಿ ಅಪೂರ್ಣವಾಗಿರುವ ಸಮುದಾಯ ಶೌಚಾಲಯಗಳ ಕಾಮಗಾರಿಯನ್ನು 1 ತಿಂಗಳಲ್ಲಿ ಪೂರ್ಣಗೊಳಿಸುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೆಆರ್‌ಐಡಿಎಲ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಶನಿವಾರ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಪ್ರಗತಿ ಪರಿಶೀಲನೆ ನಡೆಸಿದ ಅವರು, ಶೌಚಾಲಯ ನಿರ್ಮಾಣ ಕಾಮಗಾರಿಯಲ್ಲಿ ಅನಗತ್ಯ ವಿಳಂಬಕ್ಕೆ ಅವಕಾಶ ನೀಡದಂತೆ ಸೂಚಿಸಿದರು. ಕೆಆರ್‌ಐಡಿಎಲ್ ಕೈಗೊಳ್ಳುವ ಕಾರ್ಯದಲ್ಲಿ ಸೇವೆ, ನಿಷ್ಠೆ ಮತ್ತು ದಕ್ಷತೆಯನ್ನು ಕಾಪಾಡಿಕೊಳ್ಳಿ ಎಂದ ಅವರು, ವಿದ್ಯಾರ್ಥಿ ನಿಲಯ, ಸೇತುವೆ, ರಸ್ತೆ, ಚರಂಡಿ, ಸಮುದಾಯ ಭವನ, ಕ್ರೀಡಾಂಗಣ, ಬಸ್ ನಿಲ್ದಾಣ ಮೊದಲಾದ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು, ದೀರ್ಘಕಾಲ ಬಾಳಿಕೆ ಬರಬೇಕು. ಜನ ಮೆಚ್ಚುಗೆಗೆ ಪಾತ್ರವಾಗಬೇಕು ಎಂದರು.

ಅರ್ಧಕ್ಕೆ ನಿಂತ ಕಾಮಗಾರಿ ಪೂರ್ಣಗೊಳಿಸಲು ಸೂಚನೆ: ಈ ನಿಗಮದಿಂದ ಕೈಗೊಳ್ಳುವ ಯಾವುದೇ ಕಾಮಗಾರಿ ಅರ್ಧಕ್ಕೆ ನಿಲ್ಲುವಂತಾಗಬಾರದು. ಆ ಯೋಜನೆಗೆ ಅಗತ್ಯವಾದ ಹಣ, ಅನುಮತಿ ಎಲ್ಲವನ್ನೂ ಖಾತ್ರಿ ಪಡಿಸಿಕೊಂಡು ಕಾಮಗಾರಿ ಆರಂಭಿಸಬೇಕು ಎಂದು ತಿಳಿಸಿದ ಸಚಿವರು, ಇತರ ಇಲಾಖೆಗೆ ಸೇರಿದ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದರೆ ಅವರಿಗೆ ಪತ್ರ ಬರೆದು, ಹಣ ಬಿಡುಗಡೆ ಮಾಡಿಸಿ, ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು. ಕೆಆರ್‌ಐಡಿಎಲ್‌ನಿಂದ ಕೈಗೊಳ್ಳುವ ಎಲ್ಲ ಕಾಮಗಾರಿಗಳ ಗುಣಮಟ್ಟವನ್ನು ಮೂರನೇ ವ್ಯಕ್ತಿಯಿಂದ ಮೌಲ್ಯಮಾಪನ ಮಾಡಿಸಬೇಕು ಎಂದು ತಿಳಿಸಿದರು.

ಖಾಲಿ ಹುದ್ದೆಗಳ ಭರ್ತಿಗೆ ಸೂಚನೆ

ಕೆಆರ್‌ಐಡಿಎಲ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆಯ ಅನುಮೋದನೆ ಪಡೆದು, ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಹಾಗೂ ಮೌಖಿಕ ಸಂದರ್ಶನ ಇರುವ ಹುದ್ದೆಗಳ ನೇಮಕಾತಿಯನ್ನು ಯುಪಿಎಸ್‌ಸಿಗೆ ವಹಿಸುವಂತೆ ಸೂಚಿಸಿದರು.

ಕಿರುಸುದ್ದಿ

ಮಹಿಳಾ ಮೀಸಲಾತಿ ಅಧಿವೇಶನದಲ್ಲಿ ಚರ್ಚೆ

• **ಚಿತ್ರದುರ್ಗ:** ಮುಂಬರುವ ಸಂಸತ್ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಅಧಿಕೃತವಾಗಿ ಅಂಗೀಕಾರಗೊಳ್ಳಲಿದೆ ಎಂದು ಸಂಸದ ಗೋವಿಂದ ಎಂ. ಕಾರಜೋಳ ಈ ವೇಳೆ ವಿಶ್ವಾಸ ವ್ಯಕ್ತಪಡಿಸಿದರು. ನಗರದ ಎಸ್‌ಜೆಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಸಿವಿಲ್ ವಿಭಾಗದ ಸರ್.ಎಂ.ವಿ. ಸೆಮಿನಾರ್ ಹಾಲ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಕ್ರಾಂತಿಕಾರಿ ಕಾಯ್ದೆಯಿಂದಾಗಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ದೊರೆಯಲಿದ್ದು, ಸಂಸತ್ತಿನಲ್ಲಿ ಅವರ ಪ್ರಾತಿನಿಧ್ಯ ಹೆಚ್ಚೂಕಡಿಮೆ ಶೇ.50ರಷ್ಟಕ್ಕೆ ಏರಿಕೆಯಾಗಲಿದೆ. ಇದು ಲಿಂಗಭೇದದ ವಿರುದ್ಧ ಒಗ್ಗಟ್ಟಿನ ಕಾಲದಿಂದಲೂ ನಡೆಯುತ್ತಿರುವ ಸುದೀರ್ಘ ಹೋರಾಟಕ್ಕೆ ಸಿಕ್ಕ ದೊಡ್ಡ ಜಯವಾಗಲಿದೆ ಎಂದು ಬಣ್ಣಿಸಿದರು.

ಲೈಂಗಿಕ ದೌರ್ಜನ್ಯ: ಶಿಕ್ಷಕರ ವಿರುದ್ಧ ದೂರು ದಾಖಲು

• **ಕಲಬುರಗಿ:** ಮಾದರಿ ಅಪ್ರಾಪ್ತ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದ ಮೇಲೆ ಶಾಲೆಯ ಶಿಕ್ಷಕರ ವಿರುದ್ಧ ತಾಲೂಕಿನ ಯಾದಿ ಪೊಲೀಸ್ ಠಾಣೆ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲಾಗಿದೆ. ಸಹ ಶಿಕ್ಷಕ ನಾಗರಾಜಪ್ಪ ಪ್ರಕರಣದ ಮೊದಲ ಆರೋಪಿಯಾಗಿದ್ದು, ಮುಖ್ಯ ಶಿಕ್ಷಕ ಲೋಕೇಶಪ್ಪ ಎರಡನೇ ಆರೋಪಿಯಾಗಿದ್ದಾರೆ. ಶಿಕ್ಷಕ ನಾಗರಾಜಪ್ಪ ಮೂವರು ವಿದ್ಯಾರ್ಥಿನಿಯರ ಬಳಿ ಅಸಭ್ಯವಾಗಿ ವರ್ತಿಸುತ್ತಿದ್ದರೆ ವಿದ್ಯಾರ್ಥಿನಿಯರು ಶಾಲೆಗೆ ಮೊಬೈಲ್ ತರುವಂತೆ ಹೇಳಿ ಅವರ ಮೊಬೈಲ್‌ಗಳಿಗೆ ಅಶ್ಲೀಲ ವಿಡಿಯೋಗಳನ್ನು ಕಳುಹಿಸಿದ್ದಾನೆ. ಒಬ್ಬ ವಿದ್ಯಾರ್ಥಿನಿ ಬಳಿ ಅಶ್ಲೀಲವಾಗಿ ಮಾತುಗಳನ್ನಾಡಿದ್ದಾನೆ. ಈ ಬಗ್ಗೆ ವಿದ್ಯಾರ್ಥಿನಿ ಮುಖ್ಯಗುರುಗಳಿಗೆ ಒಳಗಾದಾಗ ಈ ವಿಷಯವನ್ನು ಯಾರಿಗೂ ಹೇಳದಂತೆ ದೇವರ ಮೇಲೆ ಆಣೆ ಪ್ರಮಾಣ ಮಾಡಿಸಿಕೊಂಡಿದ್ದಾನೆ. ಈ ಘಟನೆಯಿಂದ ವಿದ್ಯಾರ್ಥಿನಿಯರು ಶಾಲೆಗೆ ಹೋಗಲು ಹಿಂದೇಟು ಹಾಕಿದ್ದಾರೆ. ಬಳಿಕ ಪೋಷಕರು ತಮ್ಮ ಮಕ್ಕಳು ಆತಂಕದಲ್ಲಿದ್ದ ಪರಿಸ್ಥಿತಿಯನ್ನು ಗಮನಿಸಿ ವಿಚಾರಿಸಿದಾಗ ಶಿಕ್ಷಕನ ಅಸಭ್ಯ ವರ್ತನೆಯ ವಿಷಯ ಬೆಳಕಿಗೆ ಬಂದಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ತಿಮ್ಮಯ್ಯ ಇಬ್ಬರ ವಿರುದ್ಧ ದೂರು ನೀಡಿದ್ದಾರೆ. ಠಾಣೆಯಲ್ಲಿ ಪ್ರಕರಣ ದಾಖಲಾಗುವ ಹಿನ್ನೆಲೆಯಲ್ಲಿ ಶನಿವಾರ ಡಿವೈಎಸ್ಪಿ ಪರಶುರಾಮಪ್ಪ, ಯಾದಿ ಪಿಎಸ್ಐ ಶಾಹಿದ್ ಅಫ್ರಿದಿ ಹಾಗೂ ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಮಹಜರು ಪ್ರಕ್ರಿಯೆ ನಡೆಸಿ ಇಬ್ಬರು ಆರೋಪಿ ವ್ಯಕ್ತಿಗಳನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಕಾಂಗ್ರೆಸ್‌ನಿಂದ ರಾಜಕೀಯ ಭ್ರಷ್ಟಾಚಾರ: ಬೊಮ್ಮಾಯಿ

• **ಹಾವೇರಿ:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಕ್ರಮತದಾನ ಆಗಿರುವುದು ಅತ್ಯಂತ ಅಘಾತಕಾರಿ ಹಾಗೂ ದುರ್ದೈವದ ಸಂಗತಿ. ಕಾಂಗ್ರೆಸ್ ರಾಜಕೀಯ ಭ್ರಷ್ಟಾಚಾರ ನಡೆಸಿದ್ದು, ಬಹಳ ದೊಡ್ಡ ಪ್ರಮಾಣದ ಹಣ ಖರ್ಚು ಮಾಡಿದ್ದಾರೆ. ಹಣದ ಆಮಿಷಕ್ಕೆ ನಮ್ಮ ಕೆಲವು ಶಾಸಕರು ಬಲಿಯಾಗಿರುವುದು ನಿಜ. ಈ ಕುರಿತು ಪಕ್ಷದ ನೇಮಿಸಿರುವ ಸಮಿತಿ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆಗಬಾರದಿತ್ತು. ಅಡ್ಡ ಮತದಾನದ ಕುರಿತು ತನಿಖೆ ನಡೆಸಿ ಅದರ ವರದಿಯನ್ನು ಹೈಕಮಾಂಡ್‌ಗೆ ಕಳುಹಿಸುವಂತೆ ವಿಜಯೇಂದ್ರ ನಾಯಕರು, ಹಾಗೂ ರಾಜ್ಯಾಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಅದರ ವರದಿ ಬಂದ ಮೇಲೆ ಕುರುಹೊಂದು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿದರು.

ಬಿಡದಿ ಪ್ರದೇಶ ರೆಡ್ ಜೋನ್ ಘೋಷಣೆ: ಶಿವಕುಮಾರ್ ತಿರುಗೇಟು

ಎಚ್ಡಿಕೆ ಟೌನ್‌ಶಿಪ್ ಜನಕ

• **ಬೆಂಗಳೂರು:** ಬಿಡದಿಯ ರೈತರು ಒಳ್ಳೆಯವರು, ಅವರನ್ನು ದಾರಿ ತಪ್ಪಿಸಲಾಗುತ್ತಿದೆ. ಬಿಡದಿ ಟೌನ್‌ಶಿಪ್ ಯೋಜನೆಯ ಪಿತಾಮಹ ಕುಮಾರಸ್ವಾಮಿ ಅವರೇ ಅಲ್ಲವೇ? ಇದನ್ನು ಅವರೇ ಒಪ್ಪಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.



ಸಚಿವ ಸಂಪುಟ ಸಭೆಯ ಬಳಿಕ ಶನಿವಾರ ವಿಧಾನಸೌಧದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಪ್ರತಿಕ್ರಿಯೆ ನೀಡಿದರು. ಈ ಹಿಂದೆ ಕುಮಾರಸ್ವಾಮಿ ಅವರೇ ರೈತರಿಗೆ ಪರಿಹಾರವಾಗಿ ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಶೇ.40 ಕೊಡುತ್ತೇನೆಂದು ಹೇಳಿದ್ದರು. ನಾವು ಶೇ.50 ರಷ್ಟು ಭೂಮಿ ನೀಡುವ ದಾಗಿ ಹೇಳಿದ್ದೇವೆ. ರೈತರಿಗೆ ಒಂದು ಎಕರೆಗೆ 2.50 ಕೋಟಿ ರೂ. ಪರಿಹಾರ ನೀಡುವ ಕೆಲಸ ಶುಕ್ರವಾರ ಆರಂಭವಾಗಿದೆ ಎಂದು ತಿಳಿಸಿದರು.

ಕುಮಾರಸ್ವಾಮಿ ಅವರು ನೋಟಿಫಿಕೇಶನ್ ಮಾಡಿದ್ದರು. ಯಡಿಯೂರಪ್ಪ ಅವರು ಈ ಯೋಜನೆ ಮುಂದುವರೆಸಿದ್ದರು. ಅದನ್ನು ನಾವು ಇಷ್ಟಪಟ್ಟು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆಯೇ ಹೊರತು ಹೊಸದಾಗಿ ನಾವೇನೂ ಮಾಡುತ್ತಿಲ್ಲ.

ಬಿಡದಿ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನ ಮಾಡಿ ದವರು ಯಾರು? ಈಗಿರುವ 9 ಸಾವಿರ ಎಕರೆಯಲ್ಲಿ 1 ಸಾವಿರ ಎಕರೆಯನ್ನು ಬಿಜೆಪಿಯ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಸ್ವಾಧೀನ ಮಾಡಿಕೊಡ ಲಿಲ್ಲವೇ? ಎಂದು ಪ್ರಶ್ನಿಸಿದರು.

ನಾನು ಜೈಲಿಗೆ ಹೋಗಲು ಸಿದ್ಧನಿಲ್ಲ: ಪ್ರತಿಪಕ್ಷದವರು ರಾಜಕೀಯಕ್ಕಾಗಿ ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧ ಮಾಡುತ್ತಿದ್ದಾರೆ. ಹೊಸ ಕೈಗಾರಿಕೆಗಳು ಬರಬೇಕು ಎಂದು ಹೇಳುತ್ತಾರೆ.

ಕೇಂದ್ರ ಬೃಹತ್ ಕೈಗಾರಿಕಾ ಸಚಿವರೇ ಎಲ್ಲಿಂದ ಜಮೀನು ತೆಗೆದುಕೊಡಲಿ ಎಂದು ಹೇಳಿದ್ದಾರೆ. ಹೀಗಿರುವಾಗ ಬಿಡದಿ ಜಮೀನನ್ನು ಡಿನೋಟಿಫಿಕೇಶನ್ ಮಾಡಿ ಜೈಲಿಗೆ ಹೋಗಲು ನಾನು ಸಿದ್ಧನಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು.

ಬಿಡದಿ ಪ್ರದೇಶವನ್ನು ರೆಡ್ ಜೋನ್ ಎಂದು ಕುಮಾರಸ್ವಾಮಿ ಅವರು ಏಕೆ ಘೋಷಣೆ ಮಾಡಿದರು ಎಂದು ಅವರು ಮೊದಲು ತಿಳಿಸಲಿ. ನೋಟಿಫಿಕೇಶನ್ ಏಕೆ ಮಾಡಿದರು ಎಂದು ಉತ್ತರಿಸಲಿ. ಯಡಿಯೂರಪ್ಪ ಅವರು ಈ ಯೋಜನೆ ಮುಂದುವರಿಸಿದರು, ಅವರ ಕಾಲದಲ್ಲೇ ಡಿನೋಟಿಫಿಕೇಶನ್ ಮಾಡಲು ಅವರಿಗೆ ಅವಕಾಶವಿತ್ತಲ್ಲವೇ? ಯಾಕೆ ಮಾಡಲಿಲ್ಲ ಎಂದು ಕೇಳಿದರು.

ಪ್ರತಿಪಕ್ಷದವರು ರಾಜಕೀಯ



ಕುಮಾರಸ್ವಾಮಿ ಅವರು ದೊಡ್ಡವರು. ಬೃಹತ್ ಕೈಗಾರಿಕಾ ಸಚಿವರು. ಅವರಿಗೆ ಕೈಗಾರಿಕೆಗಳನ್ನು ತರಬೇಕು ಎನ್ನುವ ಆಸೆಯಿದೆ. ಎಲ್ಲಿಗೆ ಕೈಗಾರಿಕೆಗಳನ್ನು ತರಬೇಕು, ಹೇಗೆ ತರಬೇಕು, ಯಾರ ಜಮೀನಿನಲ್ಲಿ ತರಬೇಕು ಎಂದು ಅವರೇ ಉತ್ತರ ಹೇಳಬೇಕು.

■ **ಡಿ.ಕೆ. ಶಿವಕುಮಾರ್**, ಸಿಎಂ

ಮಾಡುತ್ತಿದ್ದಾರೆ. ಆದರೆ, ನಾನು ಇದಕ್ಕೆ ಬೇಸರ ಮಾಡಿಕೊಳ್ಳುವುದಿಲ್ಲ. ಶೇ. 80 ರಷ್ಟು ರೈತರು ಭೂಮಿ ನೀಡಲು ಮುಂದೆ ಬಂದಿದ್ದಾರೆ. ಬೇರೆಯವರು ಮುಂದೆ ಬರಲಿಲ್ಲ ಎಂದರೆ ನಾನು ಏನು ಮಾಡಲು ಸಾಧ್ಯವಿಲ್ಲ. ನಾವು ಕಾನೂನಿನ ಪ್ರಕಾರ ಹೋಗುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಆರೋಪ

ಕೇಂದ್ರ ಯೋಜನೆ ಜಾರಿಗೆ ತರಲು ಸರ್ಕಾರ ವಿಫಲ

• **ಉಡುಪಿ:** ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆಯೆಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಗಂಭೀರ ಆರೋಪ ಮಾಡಿದರು.



ಕಡಿಯಾಳಿಯ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಉಜ್ವಲ ಯೋಜನೆಯಡಿ 12 ಕೋಟಿಗೂ ಅಧಿಕ ಅರ್ಹರ ಮನೆಗಳಿಗೆ ಗ್ಯಾಸ್ ಸಂಪರ್ಕ, ಶೌಚಾಲಯ ನಿರ್ಮಾಣ ಹಾಗೂ ಗ್ರಾಮೀಣ ಭಾಗಕ್ಕೆ ಕುಡಿಯುವ ನೀರು ಕಲ್ಪಿಸುವ ಜಲಜೀವನ್ ಮಿಷನ್ ಯೋಜನೆಗೆ 75 ಸಾವಿರ ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ ಎಂದರು. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 12 ಕೋಟಿ ರೈತ ಕುಟುಂಬಗಳ ಖಾತೆಗೆ ವಾರ್ಷಿಕ 6 ಸಾವಿರ ರೂಪಾಯಿಯಂತೆ ಈಗಾಗಲೇ 23 ಕಂತುಗಳಲ್ಲಿ ಒಟ್ಟು 3 ಲಕ್ಷದ 44 ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಆದರೆ, ಈ ಹಿಂದೆ ರಾಜ್ಯ ಸರ್ಕಾರ ನೀಡುತ್ತಿದ್ದ 4 ಸಾವಿರ ರೂಪಾಯಿ ಪ್ರೋತ್ಸಾಹಧನವನ್ನು ಪ್ರಸ್ತುತ ಸಿದ್ದರಾಮಯ್ಯ ಸರ್ಕಾರ ನಿಲ್ಲಿಸುವ ಮೂಲಕ ರೈತರಿಗೆ ದ್ರೋಹ ಬಗೆದಿದೆ ಎಂದು ದೂರಿದರು.

ದೇಶದಲ್ಲಿ ಶೇ. 100 ರಷ್ಟು ರೈಲ್ವೇ ವಿದ್ಯುದೀಕರಣ ಹಾಗೂ ಪ್ರತಿದಿನ ಸರಾಸರಿ 22 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ದೇಶದ 81 ಕೋಟಿ ಜನರಿಗೆ ಉಚಿತ ಪಡಿತರ ನೀಡಲಾಗುತ್ತಿದೆ. ಈ ನಡುವೆ 4 ಕೋಟಿ ಜನರಿಗೆ ಪ್ರತಿ ತಿಂಗಳು 22 ಲಕ್ಷ ಕೆಜಿ ಅಕ್ಕಿಯನ್ನು ಕೇಂದ್ರವೇ ಉಚಿತವಾಗಿ ಸರಬರಾಜು ಮಾಡುತ್ತಿದೆ ಎಂದರು.

ದಸರಾದಲ್ಲಿ ಈ ಬಾರಿ ಕಂಬಳ: ಲಕ್ಷ್ಮೀಕಾಂತ ರೆಡ್ಡಿ

• **ಮೈಸೂರು:** ಇದೇ ಮೊದಲ ಬಾರಿಗೆ ವಿಶ್ವವಿಖ್ಯಾತ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ-2026ರಲ್ಲಿ ಕಂಬಳ ಕಾರ್ಯಕ್ರಮವನ್ನು ವಿಶೇಷ ಆಕರ್ಷಣೆಯಾಗಿ ಆಯೋಜಿಸಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಜಿ. ತಿಳಿಸಿದರು.

ಸಿದ್ಧತಾ ಸಭೆ ನಡೆಸಿ ಮಾತನಾಡಿ, ಕಳೆದ ವರ್ಷವೇ ದಸರಾದಲ್ಲಿ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ ಸೂಕ್ತವಾದ ಸ್ಥಳ ದೊರೆತ ಹಿನ್ನೆಲೆಯಲ್ಲಿ ಸಾಧ್ಯವಾಗಲಿಲ್ಲ ಎಂದರು. ಈ ಬಾರಿ 3 ತಿಂಗಳ ಮೊದಲೇ ಕಂಬಳ ಆಯೋಜಿಸಲು ಮೈಸೂರು ನಗರದ ವಿಜಯನಗರ ಮೂರನೇ ಹಂತ, ವಿಜಯನಗರದ ನಾಲ್ಕನೇ ಹಂತ ಹಾಗೂ ಸಾತಗಳ್ಳಿ ರಿಂಗ್ ರೋಡ್ ರಸ್ತೆಯಲ್ಲಿ ಮೂರು ಸ್ಥಳ ಗುರುತಿಸ ಲಾಗಿದ್ದು, ಒಂದು ಸ್ಥಳವನ್ನು ಅಂತಿಮ ಮಾಡುವುದು ಎಂದರು.

ಕಂಬಳ ಆಯೋಜನೆಗೆ ಕನಿಷ್ಠ ಏಳು ಎಕರೆ ಸ್ಥಳ ಬೇಕಿದ್ದು, ಸ್ಥಳ ಆಯ್ಕೆ ಮಾಡುವಾಗ ಪಾರ್ಕಿಂಗ್ ವ್ಯವಸ್ಥೆ, ವೀಕ್ಷಕರ ಗ್ಯಾಲರಿ, ಕೋಣಗಳು ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಾದ ಸ್ಥಳವನ್ನು ನೋಡಿ ಆಯ್ಕೆ ಮಾಡಿ ಎಂದರು.

ಅಂತಾರಾಷ್ಟ್ರೀಯ ಯೋಗ ದಿನ ಇಂದು

• **ಬೆಂಗಳೂರು:** ರಾಜ್ಯಾದ್ಯಂತ ಈ ಬಾರಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯವಾಕ್ಯದೊಂದಿಗೆ



ಜೂ. 21 ರಂದು ಬೆಳಗ್ಗೆ 7 ಗಂಟೆಗೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗಿದ್ದು, ರಾಜ್ಯಪಾಲ ಥಾವರ ಚಂದ್ ಗೆಹ್ಲೋತ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಶನಿವಾರ ನಗರದ ಆರೋಗ್ಯಸೌಧದ ಸಭಾಂಗಣದಲ್ಲಿ ಮಾತನಾಡಿ, ಸುಮಾರು 2 ಸಾವಿರ ಯೋಗಸಾಧಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, 40 ನಿಮಿಷಗಳ ಯೋಗಾಭ್ಯಾಸ ನಡೆಸಲಿದ್ದಾರೆ.

2016ರಿಂದ ಕೇಂದ್ರ ಸರ್ಕಾರದ 45 ನಿಮಿಷಗಳ ಯೋಗ ಶಿಷ್ಟಾಚಾರದಂತೆ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ಬಾರಿ ಯೋಗವನ್ನು ನಿತ್ಯ ಜೀವನದ ಭಾಗವನ್ನಾಗಿಸುವ ಉದ್ದೇಶದಿಂದ ನಿತ್ಯ ಯೋಗ ಕಾರ್ಯಕ್ರಮಕ್ಕೆ ವಿಶೇಷ ಒತ್ತು ನೀಡಲಾಗಿದೆ ಎಂದು ಖಾದರ್ ಹೇಳಿದರು.

ಗ್ರಾಮೀಣ ಪ್ರದೇಶದ ಜನರು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ಪ್ರತಿದಿನ ಯೋಗಾಭ್ಯಾಸ ಮಾಡುವಂತೆ ಉತ್ತೇಜಿಸಲು ವಿಶೇಷ ಯೋಜನೆಗಳನ್ನು ರೂಪಿಸಲಾಗಿದ್ದು, ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಯೋಗದತ್ತ ಯುವಕರ ಆಕರ್ಷಣೆ: ಈಗಾಗಲೇ 100 ದಿನಗಳ ಕ್ಷಣಗಣನೆ ಕಾರ್ಯಕ್ರಮ ಯಶಸ್ವಿಯಾಗಿ

ಸಾಮಾಜಿಕ ಜಾಲತಾಣಗಳಲ್ಲಿ ಆಯೋಜಿಸಿದ್ದ 12 ವಿಶೇಷ ರಾಷ್ಟ್ರೀಯ ಸ್ಪರ್ಧೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದು, ಸರ್ಕಾರಿ ಶಾಲೆಗಳ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗ ಕ್ವಿಜ್, ರಂಗೋಲಿ, ಪ್ರಬಂಧ, ಚಿತ್ರಕಲೆ ಹಾಗೂ ಪತಂಜಲಿ ಯೋಗ ಸೂತ್ರ ಪಾರಾಯಣ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

■ **ಯು.ಟಿ.ಖಾದರ್**, ಆರೋಗ್ಯ ಸಚಿವ

ಪೂರ್ಣಗೊಂಡಿದ್ದು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು ಸಹಯೋಗದಲ್ಲಿ 12 ರಾಷ್ಟ್ರೀಯ ಮಟ್ಟದ ಯೋಗ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 16 ರಾಜ್ಯಗಳ 100ಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಯುವಜನರನ್ನು ಯೋಗದತ್ತ ಆಕರ್ಷಿಸುವಲ್ಲಿ ಯಶಸ್ಸು ಸಾಧಿಸಲಾಗಿದೆ ಎಂದು ಹೇಳಿದರು.

ಜುಲೈ ಮೊದಲ ವಾರದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನ ಯೋಗ ರಾಷ್ಟ್ರೀಯ ವಿಚಾರ ಸಂಕಿರಣ, ಎರಡನೇ ವಾರದಲ್ಲಿ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಕಾರ್ಡಿಯೋ ಯೋಗ ಹಾಗೂ ಮೂರನೇ ವಾರದಲ್ಲಿ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಯೋಗ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಈ ವೇಳೆ ಆರೋಗ್ಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನ್ ಪಾಂಡೆ, ಆಯುಷ್ ಗುರುದತ್ತ ಹೆಗಡೆ, ಆಯುಷ್ ಇಲಾಖೆ ಆಯುಕ್ತ ಡಾ. ಸುನೀಲ್ ಪನ್ವಾರ್ ಸೇರಿದಂತೆ ಇತರರಿದ್ದರು.

ಆಲಮಟ್ಟಿ ಮಟ್ಟ ಕುಸಿತ



• **ಆಲಮಟ್ಟಿ:** ಸದಾಕಾಲವೂ ನೀರಿನಿಂದ ತುಂಬಿ ತುಳುಕುತ್ತಿದ್ದ ವಿಶಾಲ ಹಿನ್ನೀರಿನಲ್ಲೀಗ ಎಲ್ಲಿನೋಡಿದರೂ ದೊಡ್ಡ ಆಕಳಿಕೆ ಎಂದು ಹೆಗ್ಗಳಿಕೆ ಪಡೆದಿರುವ ಆಲಮಟ್ಟಿ ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರಕ್ಕೆ ಮಳೆಗಾಲ ಪ್ರಾರಂಭವಾಗಿ ತಿಂಗಳು ಕಳೆಯುತ್ತಿದ್ದರೂ ನೀರಿನ ಕೊರತೆ ಕಾಣುತ್ತಿದ್ದು, ಜಲಾಶಯದ ಹಿನ್ನೀರಿನಲ್ಲಿ ಸ್ವಲ್ಪ ನೀರು ಕಂಡರೂ, ಜಲಾಶಯದ ಮುಂಭಾಗವೆಲ್ಲ ಖಾಲಿ-ಖಾಲಿ. 519.60 ಮೀ. ಎತ್ತರದ ಜಲಾಶಯದಲ್ಲಿ ಶನಿವಾರ 508.10 ಮೀ.ದಲ್ಲಿ 21.783 ಟಿಎಂಸಿ ನೀರು ಸಂಗ್ರಹವಿದ್ದರೂ, ಅದರಲ್ಲಿ ಡೆಡ್ ಸ್ಟೋರೇಜ್ ನೀರು 17.62 ಟಿಎಂಸಿ ಇದನ್ನು ಬಿಟ್ಟು ಬಳಕೆ ಯೋಗ್ಯ ನೀರು 4.163 ಟಿಎಂಸಿ ಮಾತ್ರ ಇದೆ. ಕಳೆದ ವರ್ಷ ಇದೇ ದಿನದಂದು 515.55 ಮೀ 68.343 ಟಿಎಂಸಿ. ಒಳಹರಿವು 70,440 ಕ್ಯೂಸೆಕ್ ಇದ್ದರೆ ಹೊರಹರಿವು 70,440 ಕ್ಯೂಸೆಕ್ ಇದ್ದು ಅದನ್ನು ವಿದ್ಯುತ್ ಉತ್ಪಾದನೆ ಮೂಲಕ ಹೊರಬಿಡಲಾಗುತ್ತಿದ್ದು, ಹೀಗಾಗಿ ಜುಲೈ ಅಂತ್ಯದವರೆಗೂ ಕುಡಿಯುವ ನೀರಿಗೆ ಯಾವುದೇ ತೊಂದರೆಯಿಲ್ಲ ಎಂದರು.

ಗೋಲಗುಂಬಜ್ ಎಕ್ಸ್‌ಪ್ರೆಸ್ ಸಂಚಾರಕ್ಕೆ ರೈಲ್ವೆ ಮಂಡಳಿ ಅಸ್ತು

• **ಬೆಂಗಳೂರು:** ಮೈಸೂರು- ಧಾರವಾಡ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ರೈಲನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್‌ಗಳ ಮೂಲಕ ಓಡಿಸಲು ರೈಲ್ವೆ ಮಂಡಳಿ ಶುಕ್ರವಾರ ಒಪ್ಪಿಗೆ ನೀಡಿದ್ದು, ಇದರಿಂದ ವಿಜಯಪುರ, ಬಾಗಲಕೋಟೆ ಭಾಗದ ಜನರ ಬಹುದಿನಗಳ ಬೇಡಿಕೆ ಈಡೇರಿದಂತಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹರ್ಷ ವ್ಯಕ್ತಪಡಿಸಿದ್ದಾರೆ.



ವಿಜಯಪುರ ಕಡೆಗೆ ಚಲಿಸುವ ರೈಲುಗಳನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕ ಓಡಿಸಬೇಕೆಂದು ಈ ಹಿಂದೆಯೇ ಹಲವು ಬಾರಿ ಪತ್ರ ಬರೆದು ಕೋರಿಕೆ ಸಲ್ಲಿಸಲಾಗಿತ್ತು. ಅದಕ್ಕೆ ರೈಲ್ವೆ ಮಂಡಳಿ, ಸಕಾರಾತ್ಮಕವಾಗಿ ಸ್ಪಂದಿಸಿದ್ದು ಹೆಚ್ಚಿನ ಅನುಕೂಲ ಆಗಲಿದೆ. ಇದಕ್ಕಾಗಿ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್, ವಿ. ಸೋಮಣ್ಣ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.


ಇದರಿಂದ ಎರಡೂ ನಗರಗಳ ನಡುವಿನ ಪ್ರಯಾಣಾವಧಿ 55 ನಿಮಿಷ ಕಡಿಮೆ ಆಗಲಿದೆ ಎಂದು ಹೇಳಿದ್ದಾರೆ. ಇದರ ಜತೆಗೆ ಸದ್ಯ ವಿಜಯಪುರ-ಬೆಂಗಳೂರು ನಡುವೆ ವಾರದಲ್ಲಿ 2 ದಿನ ಸಂಚರಿಸುತ್ತಿರುವ ವಿಶೇಷ ರೈಲನ್ನು ಕೂಡ ಕಾಯಂ ಮಾಡಬೇಕು ಎಂದು ಪಾಟೀಲ ಒತ್ತಾಯಿಸಿದ್ದಾರೆ.

ಬೈಪಾಸ್ ಮಾರ್ಗದಲ್ಲಿ ರೈಲು ಸಂಚರಿಸಲು ಸುರುವಾದ ಮೇಲೆ ಗೋಲಗುಂಬಜ್ ಎಕ್ಸ್‌ಪ್ರೆಸ್ ಇನ್ನು ಮುಂದೆ ಹುಬ್ಬಳ್ಳಿ, ಗದಗದಲ್ಲಿ ಎಂಜಿನ್ ಬದಲಾವಣೆಗೆ ಹೋಗುವುದಿಲ್ಲ ಎಂದು ಹೇಳಿದರು.


ವೇಳಾಪಟ್ಟಿ ಬದಲು

ಮೈಸೂರು-ಧಾರವಾಡ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ಬೈಪಾಸ್ ಮಾರ್ಗಗಳಲ್ಲಿ ಓಡಲು ಆರಂಭಿಸಿದ ಬಳಿಕ ಮೈಸೂರಿನಿಂದ ಮಧ್ಯಾಹ್ನ 3.50ಕ್ಕೆ ಹೊರಟು ಮರುದಿನ ಬೆಳಗ್ಗೆ 10.05ಕ್ಕೆ ಧಾರವಾಡ ತಲುಪಲಿದೆ. ಹಾಗೆಯೇ ಧಾರವಾಡದಿಂದ ಬೆಳಗ್ಗೆ ಮಧ್ಯಾಹ್ನ 1.15ಕ್ಕೆ ಹೊರಟು ಮರುದಿನ ಬೆಳಗ್ಗೆ 11.30ಕ್ಕೆ ಮೈಸೂರನ್ನು ತಲುಪಲಿದೆ. ಮೊದಲಿನ ಹೋಲಿಕೆಯಲ್ಲಿ ಪ್ರಯಾಣದಲ್ಲಿ 55 ನಿಮಿಷ ಉಳಿತಾಯವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.


ಓದುಗರಿಗಾಗಿ ಹೊಸ ಪುಸ್ತಕ




ವ್ಯಕ್ತಿತ್ವ ವಿಕಸನ ವಿಚಾರಧಾರೆ
ಯುವಜನಾಂಗದ ಪ್ರಗತಿಗಾಗಿ ಕೃತಿ
ಲೇ: ಜಯಪ್ರಕಾಶ್ ಪುತ್ತೂರು
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 252 ರೂ. 300
ಸಂಪರ್ಕ: 080-40114455




ತೇರು
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಾದಂಬರಿ
ಲೇ: ರಾಘವೇಂದ್ರ ಪಾಟೀಲ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2003
ಪುಟ: 168 ರೂ. 250
ಸಂಪರ್ಕ: 9448110034



ಅವಿಶ್ರಾಂತ ಧ್ಯೇಯಜೀವಿ
ಮೈ.ಚ. ಜಯದೇವ್: ಬದುಕು-ಜೀವನ
ಲೇ: ಬಾಬು ಕೃಷ್ಣಮೂರ್ತಿ, ಬೇಲೂರು ಸುದರ್ಶನ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಮೊದಲ ಮುದ್ರಣ: 2026
ಪುಟ: 262 ರೂ. 200
ಸಂಪರ್ಕ: 8904421965



ಹೇ... ರಾಮ್!
ಕಥೆಗಳು
ಲೇ: ಡಾ|| ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 128 ರೂ. 180
ಸಂಪರ್ಕ: 0836-4252498 / 9448110034



ನೋವು ನಲಿವು
ಕವನ ಸಂಕಲನ
ಲೇ: ಮಹಾದೇವ ಮಾ. ಜಕಾತಿ
ಪ್ರ: ಶಶಿಕಲಾ ಪ್ರಕಾಶನ, ಗುಳೇದಗುಡ್ಡ
ಮೊದಲ ಮುದ್ರಣ: 2026
ಪುಟ: 60 ರೂ. 80
ಸಂಪರ್ಕ: 9341162918

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಜೋಶಿ ಹೇಳಿಕೆ

ಪಡಿತರಕ್ಕೆ ಜಾತಿ ಪ್ರಮಾಣಪತ್ರ ಕಾನೂನು ಬಾಹಿರ

• **ಹೊಸದಿಲ್ಲಿ:** ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರ ಲಿಂಕ್ ಮಾಡುವುದು ಕಾನೂನು ಬಾಹಿರ ಎಂದ ಕ್ರಮವಾಗಿದ್ದು, ಈ ಬಗ್ಗೆ ಮಾಹಿತಿ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಹಾರ ಭದ್ರತೆ ಒದಗಿಸುವಲ್ಲಿ ಯಾವುದೇ ಜಾತಿ ಲಿಂಕ್ ಮಾಡಲು ಸಾಧ್ಯವಿಲ್ಲ ಎಂದಿರುವ ಸಚಿವರು, ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿ ಪಡಿತರ ಪಡೆಯುವ ಫಲಾನುಭವಿಗಳಿಂದ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಕೇಳಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ ಕೇಂದ್ರ ಸಚಿವರು ಆಗಿರುವ ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸು ವಲ್ಲಿ ಬದ್ಧತೆ ತೋರಿದೆ. ಯಾವುದೇ ಜಾತಿ, ಜನಾಂಗದವರ ಗಿರುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪಡಿತರ ಪಡೆಯಲು ರಾಜ್ಯ ಸರ್ಕಾರ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವುದು ನಿಜಕ್ಕೂ ದುರಂತವೇ ಸರಿ ಎಂದು ಸರ್ಕಾರದ ಕ್ರಮವನ್ನು ಖಂಡಿಸಿದ್ದಾರೆ.

ಸಲ್ಲದ ನೀತಿ-ನಿಯಮ ಹೇರುವುದರ ಉದ್ದೇಶವೇನು?: ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ಅವರ ಆರ್ಥಿಕಸ್ಥಿತಿ, ಅರ್ಹತೆ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಆಧಾರ್, ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಗಳ ಯಶಸ್ವಿ ವಿಕೇಂದ್ರೀಕರಣದ ಹೊರತಾಗಿಯೂ ಜಾತಿ ಪ್ರಮಾಣ ಪತ್ರ ಕಡ್ಡಾಯಗೊಳಿಸಲು ಹೊರಟಿರುವುದರ ಹಿಂದಿನ ಉದ್ದೇಶವೇನು ಎಂದು ಪ್ರಶ್ನಿಸಿದ್ದಾರೆ.

ದೇಶದ ಯಾವುದೇ ಭಾಗದಲ್ಲಿ ಅರ್ಹ ಫಲಾನುಭವಿಗಳಿಗೆ ಸಬ್ಸಿಡಿ ಆಹಾರ ಧಾನ್ಯ ಸುಲಭವಾಗಿ ಲಭ್ಯವಾಗುವಂತೆ ಕೇಂದ್ರ ಈಗಾಗಲೇ ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಉಪಕ್ರಮವನ್ನು ಪರಿಚಯಿಸಿದೆ. ದೇಶಾದ್ಯಂತ ಎಲ್ಲೇ ಆದರೂ ಫಲಾನುಭವಿಗಳಿಗೆ ಯಾವುದೇ ಅಡೆತಡೆ ಇಲ್ಲದಂತೆ ಆಹಾರ ಭದ್ರತೆ ಪ್ರಯೋಜನ ಕಲ್ಪಿಸುವುದು ಎಂದರು.

ಬೆಂಗಳೂರು ಭಾನುವಾರ, 21 ಜೂನ್ 2026 ಸಂಪುಟ 33, ಸಂಚಿಕೆ 231, ಪುಟಗಳು 14+4 ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ RNI: 58231/94 REG No.KA/BG GPO/2532/2021-23 ▸hosadigantha.com ▸Hosadigantha Digital ₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ವಿಶ್ವವ್ಯಾಪಿ ಯೋಗ ಸಂಭ್ರಮ

12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಬೆಳಗ್ಗೆ 5ಕ್ಕೆ ಆರಂಭ

6 ಲಕ್ಷಕ್ಕೂ ಹೆಚ್ಚು ಸಂಘ-ಸಂಸ್ಥೆಗಳ ನೋಂದಣಿ

210 ಕ್ಕೂ ಅಧಿಕ ಭಾರತೀಯ ರಾಯಭಾರ ಕಚೇರಿಗಳ ಸಹಭಾಗಿತ್ವ

100 ಪಾರಂಪರಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಈ ಬಾರಿಯ ಯೋಗ ದಿನದ ಧ್ಯೇಯವಾಕ್ಯ



ಯೋಗ: ಆರೋಗ್ಯಕರ ಸಮಾಜದ ಅಡಿಪಾಯ

• ಪುಟ 6

ಬದುಕಿನ ದಿನಗಳಿಗೆ ಸಾರ್ಥಕತೆಯ ಸ್ಪರ್ಶ

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಲೇಖನ

• ಪುಟ 09

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಸಪ್ತಮಿ, ನಕ್ಷತ್ರ: ಪೂರ್ವೆ

ದಿನದ ಮಾತು

ಮಾಡುವ ಪ್ರಯತ್ನಗಳು ನಂಬಿಕೆಯಿಂದ ಕೂಡಿದ್ದರೆ ಸೂಕ್ತವಾದ ಪ್ರತಿಫಲವು ದಕ್ಕುವುದರಲ್ಲಿ ಸಂಶಯವಿಲ್ಲ.

▲ ನಾಣ್ನುಡಿ

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷರಾಗಿ ಇಂದು ಬಿ.ಕೆ.ಹರಿಪ್ರಸಾದ್ ಪದಗ್ರಹಣ

• **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಅವರು ಜೂ.21ರಂದು ಪದಗ್ರಹಣ ಮಾಡಲಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭಕ್ಕೆ ಭರ್ಜರಿ ಸಿದ್ಧತೆ ಕೈಗೊಳ್ಳಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ.

• ಪುಟ 2

ಇಂದು ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ

• ಪುಟ 3

ಅಬುಧಾಬಿ ಆರಿಸಿದ್ದು ಸ್ವತಃ ವಿದ್ಯಾರ್ಥಿಯೇ!

• ಪುಟ 8

ಹಿಂದು ವಿಭಜನೆಗೆ ಮೌಲಾನ ಕುತಂತ್ರ

• ಪುಟ 8

ಜನರ ಕುಂದುಕೊರತೆ ಆಲಿಸುವ ಸಲುವಾಗಿ ಇಲಾಖೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟ ಸಭೆ ನಿರ್ಧಾರ

ಪ್ರಜಾಸೇವೆಗೆ ಇಲಾಖೆ

• **ಬೆಂಗಳೂರು:** ರಾಜ್ಯದಲ್ಲಿ ಸಾರ್ವಜನಿಕರ ಕುಂದು ಕೊರತೆಗಳು, ಹೋರಾಟಗಳ ಅಹವಾಲುಗಳನ್ನು ಆಲಿಸಲು ಹೊಸದಾಗಿ ಪ್ರಜಾಸೇವೆ ಇಲಾಖೆಯೊಂದನ್ನು ಆರಂಭಿಸಲಿದ್ದು, ಪ್ರತ್ಯೇಕ ಸಚಿವರಿಗೆ ಇದರ ಜವಾಬ್ದಾರಿ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ವಿಧಾನಸೌಧದಲ್ಲಿ ಶನಿವಾರ ನಡೆದ ಸಚಿವ ಸಂಪುಟ ಸಭೆಯ ನಂತರ ಅವರು ಸಭೆಯ ನಿರ್ಣಯಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ನಮ್ಮನ್ನು ಭೇಟಿಯಾದಾಗ, ಸಚಿವರನ್ನು ಭೇಟಿ ಯಾದಾಗ ಜನರು ತಮ್ಮ ಅಹವಾಲುಗಳನ್ನು ಸಲ್ಲಿಸುತ್ತಾರೆ. ಜನರ ಕಷ್ಟ ಭಾವನೆಗಳನ್ನು ಅರಿತು, ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರ್ಕಾರದ ಗುರಿ. ಹೀಗಾಗಿ ಈ ಇಲಾಖೆಗೆ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಲಾಗುವುದು. ಅವರು ಎಲ್ಲಾ ಸಮಸ್ಯೆಗಳನ್ನು ಪರಿಶೀಲನೆ ಮಾಡಿ ಮಾಹಿತಿ ನೀಡುವ ಕೆಲಸ ಮಾಡಲಾಗುವುದು. ಈ ಮೂಲಕ ಜನರಿಗೆ ನ್ಯಾಯ ಒದಗಿಸಲು ಸರ್ಕಾರ ಮುಂದಾಗಿದೆ. ನನಗೆ ಹಾಗೂ ಇತರೇ ಸಚಿವರಿಗೆ ನೀಡಿದ ಮನವಿಗಳನ್ನು ಈ ಇಲಾಖೆ ಅಡಿಯಲ್ಲಿ ತರಲು ಆಲೋಚಿಸಲಾಗಿದೆ ಎಂದರು.



- ಪ್ರತ್ಯೇಕ ಸಚಿವರಿಗೆ ಈ ಸಚಿವಾಲಯದ ಜವಾಬ್ದಾರಿ
- ಹಿರಿಯ ಐಎಎಸ್ ಅಧಿಕಾರಿಯೊಬ್ಬರ ನೇಮಕ
- ಸಿಎಂಗೆ, ಸಚಿವರಿಗೆ ಜನ ಸಲ್ಲಿಸುವ ಮನವಿಗಳ ಇತ್ಯರ್ಥ
- ಸಮಸ್ಯೆ ಹೇಳಿಬಂದ ಜನರಿಗೆ ಪರಿಹಾರ ನೀಡುವ ಹೊಣೆ

ಸುಪ್ರೀಂ ಕೋರ್ಟ್‌ನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದಿಲ್ಲಿಯ ಕಾನೂನು ವಿಭಾಗವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಥಾನೀಯ ಆಯುಕ್ತರ ಕಚೇರಿ ಕಾರ್ಯವೈಖರಿ ನನಗೆ ಸಮಾಧಾನ ತಂದಿಲ್ಲ, ಆದ್ದರಿಂದ ಅದನ್ನು ಹೊಸದಾಗಿ ಸಮೀಕರಿಸಲಾಗುತ್ತಿದೆ.

■ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

ರಾಜ್ಯಕ್ಕೆ ಕೇಂದ್ರದ ಯೋಜನೆ ತರಲು ಅಧಿಕಾರಿಗಳ ತಂಡ

ಕೇಂದ್ರದ ಯೋಜನೆಗಳನ್ನು ರಾಜ್ಯಕ್ಕೆ ತರುವುದು ಹೇಗೆ? ಯಾವ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕು. ಯಾವ ಯೋಜನೆಗಳು ಇತರೇ ರಾಜ್ಯಗಳಲ್ಲಿದೆ. ತಮಿಳುನಾಡು, ಆಂಧ್ರ ಪ್ರದೇಶ, ಗುಜರಾತ್ ಸೇರಿದಂತೆ ಇತರೇ ರಾಜ್ಯಗಳು ಯಾವ ಯೋಜನೆಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಯಲು ಹೊಸ ಅಧಿಕಾರಿಗಳ ತಂಡ ರಚಿಸಿ ನೇಮಕ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

➡ ಪುಟ 2

224 ಕ್ಷೇತ್ರಗಳಲ್ಲೂ ಕಡ್ಡಾಯ ಸಭೆ

ರಾಜ್ಯದಲ್ಲಿ 224 ವಿಧಾನಸಭಾ ಕ್ಷೇತ್ರಗಳಿವೆ. ಉಸ್ತುವಾರಿ ಸಚಿವರ ನೇಮಕವಾದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿಯ ಜಿಲ್ಲೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ವಾರಕ್ಕೊಮ್ಮೆ ಸ್ಥಳೀಯ ಶಾಸಕರೊಂದಿಗೆ ಪ್ರಜಾಸೇವೆ ಇಲಾಖೆ ಮೂಲಕ ಜನಸ್ಪಂದನ ಸಭೆ ಅಥವಾ ಜನಸಂಪರ್ಕ ಸಭೆ ನಡೆಸಬೇಕು. ಆನಂತರ ಅದನ್ನು ಪರಿಶೀಲಿಸುವ ಕೆಲಸ ಮಾಡಲಾಗುವುದು.

➡ ಪುಟ 2

ವಿದ್ಯುತ್ ಸಂಪರ್ಕಕ್ಕೆ 15 ದಿನ ಕಾಲಾವಕಾಶ

ರಾಜ್ಯದಲ್ಲಿ ನಿಯಮ ಉಲ್ಲಂಘಿಸಿದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿ ಅವಕಾಶ ನೀಡಲಾಗುತ್ತದೆ. 2026ರ ಮೇ 31 ರೊಳಗೆ ಪೂರ್ಣಗೊಂಡಿರುವ ಎಲ್ಲಾ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ವಿನಾಯಿತಿ ನೀಡಲಾಗಿದೆ. ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಿದ ದಿನದಿಂದ 15 ದಿನಗಳ ಕಾಲಾವಕಾಶ ನೀಡಲಾಗುವುದು. ಕಟ್ಟಡ ಮಾಲೀಕರು ಕಟ್ಟಡದ ಜೊತೆಗಿನ ಫೋಟೋ ಹಾಗೂ ಜಿಪಿಎಸ್ ದಾಖಲೆ ಕಡ್ಡಾಯವಾಗಿ ಸಲ್ಲಿಕೆ ಮಾಡಬೇಕು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.



➡ ಪುಟ 2

ವಿಶ್ವದ 2,500 ಸ್ಥಳಗಳಲ್ಲಿ ಯೋಗ ದಿನದ ಸಂಭ್ರಮ | ಐತಿಹಾಸಿಕ ರೆಡ್ ರೋಡ್‌ನಲ್ಲಿ ಮೋದಿ ನೇತೃತ್ವದಲ್ಲಿ ಯೋಗ

ಕೋಲ್ಕತ್ತದಲ್ಲಿ ಇಂದು ಯೋಗ ದಿನಾಚರಣೆ

• **ಹೊಸದಿಲ್ಲಿ:** ಹನ್ನೆರಡನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ರಾಷ್ಟ್ರೀಯ ಕಾರ್ಯಕ್ರಮ ಭಾನುವಾರ ಕೋಲ್ಕತ್ತದ ಐತಿಹಾಸಿಕ ರೆಡ್ ರೋಡ್ ನಲ್ಲಿ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಸಾಮೂಹಿಕ ಯೋಗಾಭ್ಯಾಸಕ್ಕೆ ನೇತೃತ್ವ ನೀಡಲಿದ್ದಾರೆ.



ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯವಾಕ್ಯದಡಿ ಆಯುಷ್ ಸಚಿವಾಲಯವು ಈ ಬಾರಿಯ ಯೋಗದಿನಾಚರಣೆಯನ್ನು ಆಯೋಜಿಸಿದೆ. ಬೆಳಗ್ಗೆ 5 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ರೆಡ್ ರೋಡ್‌ನಲ್ಲಿ ಸಾವಿರಾರು ಯೋಗಾಸಕ್ತರು ಭಾಗವಹಿಸಲಿದ್ದಾರೆ. ದೇಶ-ವಿದೇಶಗಳಿಂದ ಲಕ್ಷಾಂತರ ಜನರು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

6 ಲಕ್ಷ ಸಂಸ್ಥೆಗಳ ನೋಂದಣಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಆಯುಷ್ ಸಚಿವಾಲಯ ಆರಂಭಿಸಿರುವ ಯೋಗ ಸಂಗಮ ಜಾಲತಾಣದಲ್ಲಿ ಆರು ಲಕ್ಷಕ್ಕೂ ಅಧಿಕ ಸಂಘ-ಸಂಸ್ಥೆಗಳು ನೋಂದಣಿ ಮಾಡಿಕೊಂಡಿವೆ. ನೋಂದಣಿ ಸಂಖ್ಯೆ ಇನ್ನೂ ಏರಿಕೆಯಾಗುತ್ತಿದ್ದು, ಯೋಗವನ್ನು ಜನಾಂದೋಲನವಾಗಿ ರೂಪಿಸುವಲ್ಲಿ ಸಾರ್ವಜನಿಕರು ಮತ್ತು ಸಂಸ್ಥೆಗಳು ತೋರುತ್ತಿರುವ ಉತ್ಸಾಹಕ್ಕೆ ಇದು ಸಾಕ್ಷಿಯಾಗಿದೆ ಎಂದು ಸಚಿವಾಲಯ ತಿಳಿಸಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ ಸಮನ್ವಯದಲ್ಲಿ ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ಸುಮಾರು 2,500 ಸ್ಥಳಗಳಲ್ಲಿ ಯೋಗ ದಿನಾಚರಣೆ ಹಮ್ಮಿಕೊಂಡಿವೆ. ಆನ್‌ಲೈನ್ ಮೂಲಕ ಭಾಗವಹಿಸುವವರು ಪ್ರಧಾನಿ ಮೋದಿ ಅವರೊಂದಿಗೆ ಸಾಮಾನ್ಯ ಯೋಗ ಶಿಷ್ಟಾಚಾರದಂತೆ ಯೋಗಾಭ್ಯಾಸ ನಡೆಸಿ, ತಮ್ಮ ಯೋಗದ ಕ್ಷಣಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವಂತೆ ಆಯುಷ್ ಸಚಿವಾಲಯ ಮನವಿ ಮಾಡಿದೆ.

ಹಂಪಿಯಲ್ಲೂ ವಿಶೇಷ ಯೋಗೋತ್ಸವ

ಕೇಂದ್ರ ಸಂಸ್ಕೃತಿ ಸಚಿವಾಲಯ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ದೇಶದ 100 ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಕರ್ನಾಟಕದ ವಿಶ್ವವಿಖ್ಯಾತ ಹಂಪಿ ಸೇರಿದಂತೆ ದಿಲ್ಲಿಯ ಕೆಂಪುಕೋಟೆ, ಹರಿದ್ವಾರ, ಕೋಣಾರ್ಕ್, ಮಹಾಬಲಿಪುರಂ, ಮುಂಬೈ, ನಳಂದಾ, ಅಹಮದಾಬಾದ್, ಸಾರನಾಥ್, ಲೇಹ್, ಹೈದರಾಬಾದ್ ಮತ್ತು ಸಿಲ್ಚಾರ್‌ನಲ್ಲಿ ಪ್ರಮುಖ ಕಾರ್ಯಕ್ರಮಗಳು ನಡೆಯಲಿವೆ.

ಇಂದು ನೀಟ್ (ಯುಜಿ)

• **ಹೊಸದಿಲ್ಲಿ:** ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ ಮೊದಲ ಪರೀಕ್ಷೆ ರದ್ದಾಗಿದ್ದರಿಂದ ಬಿಗಿ ಭದ್ರತೆಯಲ್ಲಿ ಭಾನುವಾರ ನೀಟ್(ಯುಜಿ) ಮರು ಪರೀಕ್ಷೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸಿದ್ಧವಾಗಿದೆ. ಈ ಬಾರಿ ಪ್ರಶ್ನೆ ಪತ್ರಿಕೆಗಳನ್ನು ಸಾಗಿಸಲು ಸೇನೆಯ ಹೆಲಿಕಾಪ್ಟರ್‌ಗಳು, ವಿಮಾನಗಳನ್ನು ಬಳಸುತ್ತಿರುವುದು ವಿಶೇಷ.

- ಯಾವುದೇ ದೋಷವಾಗದಂತೆ ಎನ್‌ಟಿಎ ಎಚ್ಚರಿಕೆ
- ಸೇನಾ ವಿಮಾನಗಳಲ್ಲಿ ಪ್ರಶ್ನೆಪತ್ರಿಕೆಗಳ ಸಾಗಾಟ



ಭಾರತ ಮತ್ತು ವಿದೇಶಗಳಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ 22 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರ ಹಾಗೂ ಮಾನ್ಯ ಫೋಟೋ ಐಡಿ ಕಾರ್ಡ್ ಅನ್ನು ಕಡ್ಡಾಯವಾಗಿ ತರಬೇಕು. ಪರೀಕ್ಷೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15 ಗಂಟೆಯವರೆಗೆ ಪೆನ್ ಅಂಡ್ ಪೇಪರ್‌ನಲ್ಲಿ ನಡೆಯಲಿದ್ದು, ಬೆ.11 ಗಂಟೆಗೇ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಆಗಮಿಸಬೇಕು. ಮಧ್ಯಾಹ್ನ 1.30ಕ್ಕೆ ಗೇಟ್‌ಗಳನ್ನು ಮುಚ್ಚಲಾಗುತ್ತದೆ. ಅಭ್ಯರ್ಥಿಗಳಿಗೆ ಕಡ್ಡಾಯ ಬಯೋಮೆಟ್ರಿಕ್ ಪರಿಶೀಲನೆ, ದಾಖಲೆಗಳ ತಪಾಸಣೆ ಇರಲಿದೆ.

➡ ಪುಟ 2

ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

• **ರಾಮನಗರ:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಭಾನುವಾರ ಬೃಹತ್ ಪಾದಯಾತ್ರೆ ನಡೆಯಲಿದೆ.



- ನಿಖಿಲ್ ಕುಮಾರಸ್ವಾಮಿ ನೇತೃತ್ವ
- ಇಂದು 8 ಗ್ರಾಮಗಳಲ್ಲಿ ಪಾದಯಾತ್ರೆ

ಅಂಚಿಪುರ ಗ್ರಾಮದಿಂದ ಹೊಸೂರು ವರೆಗೆ 8 ಗ್ರಾಮಗಳ ಮೂಲಕ ಈ ಪಾದ ಯಾತ್ರೆ ಸಾಗಲಿದ್ದು, ಸಾವಿರಾರು ರೈತರು ಭಾಗವಹಿಸಲಿದ್ದಾರೆ. ಭಾನುವಾರ ಬೆಳಗ್ಗೆ ಒಂಭತ್ತು ಗಂಟೆಗೆ ಆರಂಭವಾಗುವ ಪಾದ ಯಾತ್ರೆಯು ಅಂಚಿಪುರ ಕಾಲೋನಿ, ಬನ್ನಿಗಿರಿ, ಮರಳೇಗೌಡನದೊಡ್ಡಿ, ಗುಂಡು ತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಹಾಗೂ ಹೊಸೂರುವರೆಗೂ ಸಾಗಲಿದ್ದು, ಹೊಸೂರಿನಲ್ಲಿ ಬಹಿರಂಗ ಸಭೆಯೊಂದಿಗೆ ಸಮಾರೋಪಗೊಳ್ಳಲಿದೆ. ನಮ್ಮ ಭೂಮಿ ನಮ್ಮ ಹಕ್ಕು, ರೈತರ ಬದುಕು ಮತ್ತು ಕೃಷಿ ಚಟುವಟಿಕೆಗಳನ್ನು ಉಳಿಸಲು ಈ ಹೋರಾಟ ನಡೆಸುತ್ತಿದ್ದೇವೆ.

➡ ಪುಟ 2

ಪರಿಣಾಮಕಾರಿಯಾಗಿ ಆರೋಗ್ಯ ಸೇವೆ ಒದಗಿಸಿ

ಅಧಿಕಾರಿಗಳಿಗೆ ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಸೂಚನೆ

• **ಬೆಂಗಳೂರು:** ಲಭ್ಯವಿರುವ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿಯ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರೋಗ್ಯ ಸೇವೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಒದಗಿಸುವಂತೆ ಬೆಂಗಳೂರು ಪೂರ್ವ ನಗರ ಪಾಲಿಕೆ ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಬೆಂಗಳೂರು ಪೂರ್ವ ನಗರ ಪಾಲಿಕೆಯ ಆರೋಗ್ಯ ವಿಭಾಗದ ಅಧಿಕಾರಿಗಳೊಂದಿಗೆ ಪೂರ್ವಸಿದ್ಧತಾ ಸಭೆಯನ್ನು ನಡೆಸಿದ್ದಾರೆ. ಪೋಲಿಯೊ ನಿರ್ಮೂಲನೆಯ ರಾಷ್ಟ್ರೀಯ ಗುರಿ ಸಾಧನೆಗಾಗಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಶೇ.100 ರಷ್ಟು ಗುರಿ ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ಮಳೆಗಾಲದ ಹಿನ್ನೆಲೆಯಲ್ಲಿ ತೀವ್ರ ಅತಿಸಾರ ನಿಯಂತ್ರಣ ಪಾಕ್ಷಿಕ ಕಾರ್ಯಕ್ರಮದ ಅನುಷ್ಠಾನದ ಭಾಗವಾಗಿ ಅತಿಸಾರ, ವೈರಲ್ ಜ್ವರ ಹಾಗೂ ನೀರಿನಿಂದ ಹರಡುವ ರೋಗಗಳ ನಿಯಂತ್ರಣಕ್ಕಾಗಿ ಒಆರ್‌ಎಸ್ ಹಾಗೂ ಜಿಂಕ್ ಮಾತ್ರೆಗಳ ಸಮರ್ಪಕ ವಿತರಣೆ, ಸುರಕ್ಷಿತ ಕುಡಿಯುವ ನೀರಿನ ಬಳಕೆ, ವೈಯಕ್ತಿಕ ಸ್ವಚ್ಛತೆ ಹಾಗೂ ಕೈತೊಳೆಯುವ ಅಭ್ಯಾಸಗಳ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವಂತೆ ಸೂಚಿಸಿದ್ದಾರೆ.

ಪುರಸಭೆ ಕಾರ್ಯಾಲಯ, ಕಾಪು
ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಪಿ.ಎಫ್.ಸಿ. ನಂ: ಪುಕಾ/ಕಾಮಗಾರಿ/ಓ.ಆರ್./04/2026-27 ದಿನಾಂಕ: 19-06-2026

ಕಾಪು ಪುರಸಭೆಯ 2026-27ನೇ ಸಾಲಿನ ಪುರಸಭಾ ನಿಧಿಯಡಿ ನಿರ್ವಹಣೆ ಕಾಮಗಾರಿಯ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ 1999ರ ನಿಯಮಗಳು 2000 ರನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **Standard Tender Document KW-1-** ರಂತೆ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03-07-2026. ಆಸಕ್ತ ಗುತ್ತಿಗೆದಾರರು **https://kppp. karnataka.gov. in/kppp** ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರ ಮತ್ತು ಷರತ್ತುಗಳಿಗೆ ರಜಾ ದಿನಗಳನ್ನು ಹೊರತುಪಡಿಸಿ ಈ ಕಛೇರಿಯಲ್ಲಿ ಅಥವಾ **www.kauptown. mrc.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕ್ರ.ಸಂ.	ಇಂಡೆಂಟ್ ವಿವರ	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	DMA/2026-27/SE8067	17.35

ಸಹಿ/- ಮುಖ್ಯಾಧಿಕಾರಿ
ಪುರಸಭೆ, ಕಾಪು, ಉಡುಪಿ ಜಿಲ್ಲೆ

BEFORE THE MOTOR ACCIDENT CLAIMS TRIBUNAL SCCH-04 AT BANGALORE
M.V.C.NO 4594/2022

BETWEEN
Radha Bai. ...Petitioner
AND
P. Anusuyamma and another.
...Respondents

Notice to Respondent No-1
P Anusuyamma w/o Thimmaraju No. 144, Andrahalli D Group, 6th Cross, 1st Main Bangalore-560091

Notice Paper Publication
WHEREAS, take notice that the above named petitioner has filed the above case claiming compensation at **Rs. 30,00,000/- (Rupees Thirty Lakhs) with costs and interest against you for the death sustained in road accident which occurred on 29/05/2022 at about 11-30 AM near Kachohalli Cross, Dasanapura Hobli, Bangalore involving your Lorry Bearing No. KA 01-AF-3131** as such you are hereby summoned to appear before this Hon'ble court in person or by pleader **on 07.07.2026 at 11.00 AM** to answer the same failing which the above case will be disposed of placing you exparte.

Given under my hand and the seal of the court this the **15.06.2026**

By Order of the Court
Assistant Registrar
Court of Small Causes
Bangalore -

Advocate Name & Address:
Krishnamurthy S G
Advocates, Office At No. 145, 1st Floor, 2nd Cross, 2nd Main, Opp ASB Developers, Sunkadakatte, Bangalore - 560 091 M: 9964096376

IN THE COURT OF THE CIVIL JUDGE AND JMFC, AT K.R PURAM BENGALURU RURAL DISTRICT
O.S No.: 1552/2025

Between : Sri Kamodula Kamaraju S/o Ramayya Kamodula, Aged about 66 years Presently R/at. Flat No.18-9-49, Beside Shri Krishna Devaraya Junior College, Bhimavaram West Godavari, Andhra Pradesh - 534201 Represented by his GPA Holder Mr.Anil Kumar Kamodula Aged about 34 years S/o. of Kamodula Kamaraju R/at. Flat No.G-307, Adithya Frondoso Apartment, Sorahunase Varthur Post, Bengaluru - 560087 ...**PLAINTIFF**

Versus : 1. Smt. Vidhyashree K and Ors W/o Mr. Ravi K Aged about 33 years R/at: Ettakodi Village, Kalkunte Agrahar, Hoskote Taluk, Bengaluru Rural District-560067 **2. Syed Javeed Ahmed** S/o S.A Khayum Aged about 57 years R/at: Nallurahalli Village, K.R Puram Hobli, Bengaluru -560066 **3. A Thyagaraja Reddy** S/o Late Annayappa Aged about 70 years R/at : No. 263, Whitefield Main Road Bengaluru-560066 **4. Ranjit Reddy T** S/o A Thyagaraja Reddy Aged about 34 years R/at: No. 263, Whitefield Main Road, Bengaluru -560066 **5. Navin T** S/o A Thyagaraja Reddy Aged about 30 years R/at: No. 263, Whitefield Main Road, Bengaluru -560066 **6. A Venkataswamy Reddy** S/o Late Annayappa R/at: No. 491, 4th Cross Near Bandimankalamma Temple Bellandur, Bengaluru - 560066 **7. Sunil Kumar** S/o A Venkataswamy Reddy Aged about 41 years R/at: No. 494, 4th Cross, Near Bandimankalamma Temple, Bellandur, Bengaluru- 560103 ...**DEFENDANTS**

DRAFT PAPER PUBLICATION
Whereas the Plaintiffs have filed the said suit against the Defendants seeking permanent injunction restraining the Defendants, their agents, workmen, henchmen or any person claiming through then from interfering with the Plaintiff's peaceful possession and enjoyment of the Schedule Property Whereas Defendants No. 2 and 7 in the said suit are hereby summoned to appear in the said case in person or by a pleader duly instructed.

The said suit stands posted for the appearance of the said Defendants No. 2 and 7 on **28.07.2026 at 11.00 A.M.**

The said Defendants No. 2 and 7 in the said suit is/are required to note that in default of his/her appearance on the day and hour above mentioned the suit will be heard and determined exparte against him/her.

SCHEDULE
All that piece and parcel of the property bearing Old No.A-110, at present Khatha No. 56/56/28 & 56/28 Khatha Sl. No. 112, situated at Nallurahalli Village, Krishnarajapuram Hobli, Bangalore East Taluk, earlier Mahadevapura CMC Limits, now comes within the limits of BBMP, Bangalore, Ward No.84, measuring East to West 69 feet and North to South 38 feet, totally admeasuring 2622 sq.ft., together with all rights, appurtenances, whatsoever whether underneath or above the surface and bounded as follows :
East by : Property bearing Old No.A-111;
West by : Road; **North by** : Siddhi Symphony Apartment; **South by** : Road
Given under my hand and seal of the Court this 18th day of June 2026.

By Order of the Court
Sd/- Sheristedar
Civil Judge and JMFC, at K.R. Puram
Bengaluru Rural District, Bangalore
Advocate for Plaintiffs

IN THE COURT OF THE PRINCIPAL SENIOR CIVIL JUDGE AT ANEKAL
F.D.P NO.13 / 2025

BETWEEN
Smt. MANJULA, W/o Govindaiah, Aged about 49 years R/at Godana Beedi, Ramanagara Road, Kanakapura Town-562117.
...PETITIONER
And
Sri. T Gurappa @ Guruvaiah, and Others
...RESPONDENTS

SUMMONS TO THE RESPONDENT NO.12 & 14
12.Smt.Shakunthala, W/o Nagaraju, Aged About 52 Years, R/at 1359, 13th Main, 2nd Stage BTM Layout, Bangalore-560076.
...**RESPONDENT NO.12**
14.Smt Saraswathi W/o D Srinivas Aged about 54 years R/at No.26,9th Cross, Ramakrishnappa Layout, Malagala Main Road Nagarabhavi 2nd stage Bangalore 560-091.
...**RESPONDENT NO.14**
Whereas the petitioner has filed the above case against you and others in FDP No.13/2025 at Senior Civil judge and JMFC At Anekal, Bengaluru District, you are hereby summoned to appear before the court in person or by Advocate duly instructed to answer all material question involved in the above case or any person who shall accompanied and able to answer all such questions **on 23/07/2026 at 11.A.M.** before this Hon'ble court.
Take notice that in default of your appearance on the day above mentioned, the case will be heard and determined in your absence.
Given under my hand and seal of this court on this **19/06/2026**

BY ORDER OF THE COURT
Chief Ministerial Officer
Senior Civil Judge & J.M.F.C., Court at Anekal
Advocate for Petitioner
S.M. Murali, ADVOCATE
No. 27, opp. to Indian Oil Petrol Bunk Attibele Road, Anekal Town, Bangalore-562106

ಮಾನ್ಯ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೊರಟಗೆರೆ
ಅಸಲು ದಾವೆ ಸಂ.281/2024

[illegible]

ಸಾರ್ವಜನಿಕ ಪ್ರಕಟಣೆ

[illegible]

ಷೆಡ್ಯೂಲ್ ಸ್ವತ್ತಿನ ವಿವರ

[illegible]

IN THE COURT OF THE HON'BLE PRINCIPAL DISTRICT & SESSIONS JUDGE., AT CHIKKABALLAPUR.
R.A.NO.67/2025
IN
O.S NO.598/2022
IN THE COURT OF THE LEARNED SENIOR CIVIL JUDGE., AT GUDIBANDE.
BETWEEN: Sri. NARASIMHAIAH, AND OTHERS
...**APPELLANTS**
AND:
NOTICE: SUMMONS TO THE RESPONDENTS RESPONDENTS NO.5 & 6
TO, 5. Sri. MUNIKRISHNAPPA, S/o Late Subbappa, Aged about 63 years, **RESPONDENT NO. 5 ARE** R/at Anakanuru Village, Kasaba Hobli, Chikkaballapura Taluk, **AND ALSO R/AT** Bilenahalli Village, Beechaganahalli Post, Gudibande Taluk. **6. Sri. SIDDARAJU,** S/o Late Narayanamma, Aged about 44 years, R/at. No. 1067, 2nd Cross, 3rd Stage, Prakash Nagar, Bengaluru North Taluk, Bengaluru 560 021 **RESPONDENTS**

PAPER PUBLICATION
WHEREAS, Narasimhaiah the appellant No.1 and the other appellants have filed the above appeal against the judgment and decree passed in O.S No.598/2022 dated 31/10/2025 on the file of Senior Civil Judge & JMFC at Gudibande. Therefore you are hereby summoned to appear before this Hon'ble Court on 27.07.2026 in person or through a pleader at 11:00 A.M before the District and Sessions Judge at Chikkaballapur to answer the same. Failing which the above case will be disposed of as ex parte.

SCHEDULE PROPERTY
All that piece and parcel of the property bearing Old survey No. 15, New Survey No. 15/2, measuring to an extent of 7 acres after phodi, phota kharab 20 guntas, remaining 6 acres 20 guntas, situated at Sadashivanahalli village, Somenahalli Hobli, Gudibande Jtk, Chikkaballapura District and bounded as follows:- East by: Gaddam Nagana Dinne Gadde, West by: Remaining portion of same survey number. North by: Land bearing survey No. 14, South by: Remaining portion of same survey number.
Given under my hand and seal of the court on this the day of 12/06/2026

Chief Administrative Officer, Prl. District & Sessions Court, Chikkaballapur 562101

IN THE COURT OF THE PRINCIPAL SENIOR CIVIL JUDGE AND J.M.F.C AT CHIKKABALLAPURA
OS.NO. 257/2024

Plaintiffs: Smt. Prameela D/o Sri. Venkateshappa, W/o Sri. Nagaraju Aged about 43 years, R/at Nagasandra Village, Kodigehalli Post, Kasaba Hobali, Doddaballapura Taluk, Bengaluru Rural District.

V/S

Defendants: **Sri. Venkateshappa** and others

SUMMON/NOTICE TO DEFENDANT NO. DEFENDANT NO. 8
Sri Ashish Kamlesh Jain, S/o Sri. Kamlesh Jain, Aged about 37 years, R/at No. 110, 2nd floor, Padedi Chambers, DVG Road Basavanagudi, Bangalore South, Bangalore-56004.

Whereas, Defendant No. 8 is hereby call up on appear before this Hon'ble Court, on 07.07.2026 at 11 A.M. either in person or through a pleader duly instructed to answer the question in respect of the above case. If you are fail to appear before this Hon'ble Court on that day, the case will be dispose of ex-parte.

SCHEUDLE PROPERTIES
The property Item No. 1 Sy No. 61, measuring 18 guntas out of 36 guntas, bonded on East by: Property Akkayamma, West by: Property of Sy No. 74 and 71, North by: Sy. No. 75, South by: Road, Item No. 2 property Sy. No. 73/1 measuring 18 guntas out of 35.12 guntas, East by: Property Sy. No. 61, West by: Sy. No. 61 and Halla, North by: Government Halla, South by: Sy. No. 60 of Bachamma Item No. 3 property Khanesumari Khatha Serial No. 26, Khatha No. 9, East to West 35 feet and North to South 40 feet, East by: Venkatesh, West by: Road, North by: Chikkachannappa, South by: Thrimurthy, Item No. 4 Khanesumari Khatha No. 8, East to West 8 1/ 2 feet, North to South 21 feet, East by: Passage, West by: Road, North by: Chikkachannappa, SouthRG all the properties are situated at Thirnahalli village, Kuppahalli Gramapanchayathi, Nandi Hobli, Chikkaballapura Taluk and District.

Whereas, Plaintiff Smt. Prameela, has filed above case the relief of partition and separate possession & permanent injunction.

By order of this Hon'ble Court: Senior Civil Judge & C.J.M.C Court
Advocate for plaintiff: **Prameela**
Place: Chikkaballapura

CHANGE OF NAME
I, **SOURABH S NATH**, D.O.B 14/03/1994, son of Mr. M B S Nath, Residing at No.37, 3rd Cross, Saraswathipuram Extension, Halasuru Bangalore North, Bangalore 560 008, residing at the above mentioned address. I have changed my name from **SUJOE SOURABH NATH (old Name) to SOURABH S NATH (New Name)** In my old passport my old name i.e in **SUJOE SOURABH NATH** only. But in all other documents including my Educational records, Aadhar card etc., my name is mentioned as **SOURABH S NATH** (New name only). That, I further stating and submitting this affidavit to the concerned authorities, as proof of my change of name from And requesting the **SUJOE SOURABH NATH into SOURABH S NATH**. Passport authorities and other authorities to consider my name in future in all occasions in all documents as **SOURABH S NATH (New Name only)**. Sworn before Advocate & Notary **A.R.Muneer Ahmed** Dated : 12.06.2026

IN THE COURT OF THE PRINCIPAL SENIOR CIVIL JUDGE AND JMFC AT ANEKAL
F.D.P. NO.11/2024
PETITIONERS: Sri. S. Prakash -V/s-
RESPONDENTS: Sri. T.P. Jagannath and others
I.A.NO.1
APPLICANT/PETITIONER: Sri. S. Prakash, S/o Late T. Subbaiah, aged about 68 years, R/at No.473/1, Ramaiah Layout, Banahalli Road, Chandapura Town, Anekal Taluk, Bengaluru Urban District. Now residing at No. 843, Thaamara JR Retreat, Iggaluru Village, Attibele Hobli, Anekal Taluk, Bengaluru Urban District
-V/s-
OPPONENTS/DEFENDANTS: Sri. T.P. Jaganath and others
NOTICE TO THE RESPONDENTS 4,12 AND 14 UNDER ORDER 5 RULE 20(1-A) OF CPC.
4. Sri T.L. Champakadhama, S/o T. Lakshmana Swamy, aged about 61 years, R/at Tata Silk farm Near, Ammani, Vidhyapeetha, Banashankari, Bengaluru-560028. **12. Sri. M. Annaiahppa,** S/o Late Muniyappa, aged about 65 years, R/at Thattanahalli Village, Kasaba Hobli, Anekal Taluk, Bengaluru Urban District. **14. Sri. N. Ashwath Reddy,** S/o Late Nanjunda Reddy, aged about 67 years, R/at Thattanahalli Village, Kasaba Hobli, Anekal Taluk, Bengaluru Urban District

PUBLIC NOTICE
Whereas the petitioner have filed above Appeal against the respondents for the relief of final decree proceedings in respect of Judgment and Decree passed in O.S.No.131/2019, dated: 19-09-2023 passed by the Principal Senior Civil Judge at Anekal in respect of the suit schedule properties.

SCHEDULE PROPERTY
1.All that piece and parcel of the land bearing survey No.103/5, measuring to an extent of 2 guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Remaining property, West by: Raja Kaluve, North by: Sy. No.104, South by: Remaining property
2.All that piece and parcel of the land bearing survey No.117/3, measuring to an extent of 0.07 guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Remaining property, West by: Remaining property, North by: Sy. No.118, South by: Sy. No.116
3.All that piece and parcel of the land bearing survey No.145/1, measuring to an extent of 0.04 guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Remaining property, West by: Remaining property, North by: Sy. No. 144, South by: Road
4.All that piece and parcel of the land bearing survey No.1, measuring to an extent of 0.00.34(1/4) guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Sy.No.3, West by: Remaining property, North by: Sy. No.171, South by: Gramatana
5.All that piece and parcel of the land bearing survey No.101, measuring to an extent of 0.14 guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Property of Bhagyalakshmi, West by: Sy.No.104, North by: Remaining property, South by: Remaining property
6. All that piece and parcel of the land bearing survey No. 104, measuring to an extent of 0.03 guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Remaining property, West by: Raja Kaluve, North by: Remaining property, South by: Remaining property
7.All that piece and parcel of the land bearing survey No. 172, measuring to an extent of 0.00.34(1/4) guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Remaining property, West by: Sy.No.171, North by: Raja Kaluve, South by: Remaining property
8.All that piece and parcel of the land bearing survey No.98, measuring to an extent of 0.26 guntas, situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Property of Channakeshava, West by: Road Leads to Karpur, North by: Remaining land in same Sy.No., South by: Raja Kaluve
9.All that piece and parcel of the land bearing survey No.99, measuring to an extent of 0.18 and 1 acre 2 guntas, totally measuring 1 acre 20 guntas situated at Thattanahalli Village, Kasaba Hobli, Anekal Taluk, Bangalore Urban District, and bounded by: East by: Thoti Inam Land, West by: Govt Road, North by: Raja Kaluve, South by: Land of Muniyappa
10. All that piece and parcel of the land bearing survey No.116, measuring to an extent of 0.22 guntas, situated at Thattanahalli Village, Kasaba Hobli, Anekal Taluk, Bangalore Urban District and bounded by: East by: Raja Kaluve, West by: Munireddy, Malleshreddy and Ramakrishnareddy Lands, North by: Land of Nanjundareddy, South by: Anaventige pura Boundary
If any persons/respondents have any objections in this regard, you are hereby summoned to appear before this court in person or by pleader on **02/07/2026 at 11:00 A.M** to answer the same, failing which the FDP will be disposed of in your absence in accordance with law.
Given under Seal of the court on this 17/06/2026
By order of the Court, Chief Ministerial Officer, Senior Civil Judge & JMFC Court, Anekal
C. SURESHA, Advocate
Office at C. Muniyappa Building, Near Dr. Mohan Clinic, Attibele Road, New Pet, Anekal Town

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಕೊಠಡಿ ಸಂಖ್ಯೆ 107, ನೆಲ ಮಹಡಿ, ಜಿಲ್ಲಾಧಿಕಾರಿಗಳ ನೂತನ ಕಛೇರಿ ಸಂಕೀರ್ಣ, ಬಿ.ಎಂ. ರಸ್ತೆ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ. ದೂರವಾಣಿ : 080-29500205, ಇಮೇಲ್ : ddworam@gmail.com

ಸಂಖ್ಯೆ : ವಿ.ಹಿ.ನಾ.ಸ.ಇ./ರಾ.ಜಿ./10/ವಾಹನ ವಾಹನ/2023-24/90
ದಿನಾಂಕ : 17-06-2026

ಟೆಂಡರ್ ಪ್ರಕಟಣೆ
2026-27 ನೇ ಸಾಲಿಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇಲ್ಲಿಗೆ ಕಛೇರಿಯ ಉಪಯೋಗಕ್ಕಾಗಿ ವಾಹನವನ್ನು ನಾಲ್ಕು ಚಕ್ರದ ವಾಹನವನ್ನು ಬಾಡಿಗೆ ರೂಪದಲ್ಲಿ ಪಡೆಯಲು ಅರ್ಹ ಅನುಮೋದಿತ ಸಂಸ್ಥೆಗಳಿಂದ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನ್ನು ದಿನಾಂಕ : 13-07-2026 ರ ಸಂಜೆ 5.00 ಗಂಟೆಯ ಒಳಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಕೊಠಡಿ ಸಂಖ್ಯೆ 107, ನೆಲ ಮಹಡಿ ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ, ಬಿ. ಎಂ. ರಸ್ತೆ, ರಾಮನಗರ - 562 159, ದೂರವಾಣಿ ಸಂಖ್ಯೆ : 080 - 2950 0205 ಸಂಪರ್ಕಿಸಬಹುದಾಗಿದೆ.

ಸಹಿ/- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

ವಾಅಪ್/ರಾಮನಗರ/131/ಜಾಹೀರಾತ್/26-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ನಂ: ಕಾ.ನಿ.ಇಂ/ಲೋ.ಇ.ವಿ.ಕಾ/ಪಿ.ಎ-1/ಟೆಂಡರ್-08 / 2026-27/ 1285 ದಿನಾಂಕ : 18-06-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್)
ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬೇಕು. ಗುತ್ತಿಗೆಯನ್ನು ಪಡೆಯಲು ಅರ್ಹತೆಯಿರುವರು ಗುತ್ತಿಗೆದಾರರು (ಕೆಡಬ್ಲ್ಯೂ-3) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವುದು.
(1) ಗುತ್ತಿಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 29-06-2026 16.30 ಗಂಟೆ ವರೆಗೆ
(2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 30-06-2026 16.30 ಗಂಟೆ ವರೆಗೆ
(3) ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿ: 01-07-2026 17.00 ಗಂಟೆ ವರೆಗೆ
(4) ಟೆಂಡರಿನ ಆರ್ಥಿಕ ಬಿಡ್ ತೆರೆಯುವ ದಿ: 03-07-2026 17.00 ಗಂಟೆ ವರೆಗೆ
ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: **5054-MDR Road Improvements During 2022-23** ರ ಅಡಿ ಇಂಡೆಂಟ್ (1) **PWD/2026-27/ RD/WORK_INDENT36568** (2) **PWD/2026-27/ RD/WORK_INDENT36569**
(ಕೆಡಬ್ಲ್ಯೂ-3) ರಲ್ಲಿನ ನಿಬಂಧನೆಗಳನ್ನು ಮುಂದಿನ ದಿನಗಳಲ್ಲಿ **e-proc** ನಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ **https://kppp.karnataka.gov.in** ನೋಡಬಹುದು. ಹೆಚ್ಚಿನ ಮಾಹಿತಿಗಾಗಿ **help desk Bangalore (Phone No. 918025501216 & 918025501227)** ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿ ಗುತ್ತಿಗೆ ಷರತ್ತುಗಳು ಡಿ.ಟಿ.ಎಸ್‌ನಲ್ಲಿ ನೋಡಬಹುದಾಗಿದೆ.

DIPR/KWR/KSMCA/220/26-27 dt. 20.06.2026

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಾರ್ಯಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಆಡಳಿತ ಭವನ ಕೊಠಡಿ ಸಂ;006 ಗದಗ
ದೂ.ಸಂ.08372-220711 ಈ ಮೇಲ್ : deputydirwcdgadag@gmail.com
ಸಂ.ಉನಿಗ/ಮಮಅಇ/ಕಡ/ಸಹು/2026-27 ದಿನಾಂಕ : 19.06.2026

ಟೆಂಡರ್ ಪ್ರಕಟಣೆ
ಗದಗ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಯ ಆಡಳಿತ ವಿಭಾಗ ಗ್ರೂಪ್-ಡಿ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯಡಿ ಕಂಪ್ಯೂಟರ್ ಆಪರೇಟರ್ ಹಾಗೂ ಮೆಸೆಂಜರ್ ಮತ್ತು ಗ್ರೂಪ್-ಡಿ, ಐ.ಸಿ.ಡಿ.ಎಸ್ ವಿಭಾಗದ ಕಂಪ್ಯೂಟರ್ ಆಪರೇಟರ್, ಗ್ರೂಪ್-ಡಿ, ಸ್ತ್ರೀಶಕ್ತಿ ವಿಭಾಗ ಕ್ಲರ್ಕ ಕಂ ಕಂಪ್ಯೂಟರ್ ಆಪರೇಟರ್, ರಕ್ಷಕರು, ಗ್ರೂಪ್-ಡಿ, ಸ್ವೀಕಾರ ಕೇಂದ್ರದ ಗೃಹಪಾಲಕಿ, ಮಹಿಳಾ ರಕ್ಷಕಿ, ಅಡುಗೆಯವರು, ಕಛೇರಿ ಸೇವಕರು (ಮಹಿಳೆ) ಹಾಗೂ ಪರಿವೀಕ್ಷಣಾಧಿಕಾರಿಗಳು ಅಪರಾಧಿಗಳ ಪರಿವೀಕ್ಷಣಾಧಿನಿಯಮದಡಿ ಗ್ರೂಪ್-ಡಿ ಖಾಲಿ ಹುದ್ದೆಗಳಿಗೆ ಮಾನವ ಹೊರಗುತ್ತಿಗೆ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ
(ದ್ವಿ ಲಕೋಟೆ ಪದ್ಧತಿ)
ಟೆಂಡರ ಪ್ರಕಟಣೆ ಸಂಖ್ಯೆ DWCD/2026-27/SE0814 & ದಿನಾಂಕ : 19.06.2026 ಸಂ.ಉನಿಗ/ಮಮಅಇ/ ಬಾಮೂಸೇವ/ಹೊರಗುತ್ತಿಗೆ/2026-27 ದಿನಾಂಕ : 19.06.2026 ಟೆಂಡರಗಿಟ್ಟ ರೂ. **38,00,000** ಲಕ್ಷ, ಇ.ಎಮ್.ಡಿ. ಮೊತ್ತ : ರೂ. **80000.00 e-portal https://kppp.karnataka.gov.in** ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ ದಿನಾಂಕ : **19.06.2026** ರಿಂದ ದಿನಾಂಕ : **04.07.2026**ರ ಸಾಯಂಕಾಲ 5.30 ಗಂಟೆಯೊಳಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ ಸ್ಥಳ : **06.07.2026**ರ ಮುಂಜಾನೆ 11.30 ಗಂಟೆಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ **10.07.2026**ರ ಮುಂಜಾನೆ 11.30 ಗಂಟೆಗೆ (ಬದಲಾವಣೆಗೆ ಒಳಪಟ್ಟಿದೆ), ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ, ದೂರವಾಣಿ ಸಂಖ್ಯೆ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ ದೂರವಾಣಿ ಸಂ. **08372-220711**

ಸಹಿ/- ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಗದಗ

ವಾಸಾಕಇಂಇ/ಗದಗ/130/ಕೆಎಸ್‌ಎಂಸಿಎ/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡೆಯೂರು-572 142, ಫೋ: 7338590199
ಇ-ಮೇಲ್: eeyediyur1@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ-08/2026-27 ದಿನಾಂಕ : 17.06..2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 02 ಕಾಮಗಾರಿಗಳಿಗೆ ಐಟಂವಾರು ದರದ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.386.79 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.386.50 ಲಕ್ಷ ರೂಪಾಯಿಗಳು.
ಕೆಲಸ ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸೆಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 20.06.2026 ಮಧ್ಯಾಹ್ನ 1.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 29.06.2026 ಬೆಳಿಗ್ಗೆ 11:00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.06.2026 ಬೆಳಿಗ್ಗೆ 11:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka. gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡೆಯೂರು.

DIPR/TUM/117/KSMCA/2026-27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೆಬಿಜೆಎನ್ಎಲ್,
ಘ.ಪ್ರ.ದಂ.ಕಾ.ನಾ ವಿಭಾಗ-4, ಚಿಕ್ಕೋಡಿ. ದೂರವಾಣಿ ಸಂಖ್ಯೆ: 08338-272485
ಇ-ಮೇಲ್: ee_knnlgrbc4ckd@rediffmail.com

ಸಂಖ್ಯೆ:ಕಭಾಜನಿನಿ/ಘಪ್ರದಂಕಾನಾವಿ-4/ಟೆಂಡರ್/2026-27/01 ದಿನಾಂಕ: 19-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೆಬಿಜೆಎನ್ಎಲ್ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ **(https://kppp.karnataka.gov.in) 4701** ಅಡಿಯಲ್ಲಿನ **14 ಕಾಮಗಾರಿಗಳಿಗೆ** ಮೇಲ್ಕಂಡಿರುವ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ.
ಇಂಡೆಂಟ್ ಸಂಖ್ಯೆ: ದ್ವಿ-ಲಕೋಟೆ ಪದ್ಧತಿ - ಸಾಮಾನ್ಯ - ಇಂಡೆಂಟ್ ಸಂಖ್ಯೆ **4560, 4569, 4571, 4553, 4555, 4568, 4557, 4556, 4554, 4570, 4552, 4558, 4559, ಪ್ರವರ್ಗ-I(ಎ) - ಇಂಡೆಂಟ್ ಸಂಖ್ಯೆ: 4561,** ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ: **ರೂ. 42.22 ಲಕ್ಷದಿಂದ ರೂ. 84.65 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 84,700/- ರಿಂದ ರೂ. 1,69,600/-,** ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ: **08-07-2026 ರಂದು 17.00 ಗಂಟೆವರೆಗೆ,** ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **09-07-2026 ರಂದು 16.00 ಗಂಟೆವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **10-07-2026 ರಂದು 16.30 ಗಂಟೆಗೆ,** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **13-07-2026 ರಂದು 16.30 ಗಂಟೆಗೆ.**
ಕಾಮಗಾರಿಗಳ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರಿನ ನಿಯಮ / ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಕೆಬಿಜೆಎನ್ಎಲ್, ಘಪ್ರದಂಕಾನಾ ವಿಭಾಗ-4, ಚಿಕ್ಕೋಡಿ.

ಹಾಲ್ಲು, ಹುಣಸೆ ಮತ್ತು ತರಕಾರಿಗಳ (ವಿವಿಧ) ಕೃಷಿ ಉತ್ಪನ್ನ ಮಾರಾಟಗಾರರ ಸಹಕಾರ ಸಂಘ ನಿ., ಚಿಕ್ಕಮಗಳೂರು

[illegible]

ಸಹಿ/- ಕಾರ್ಯದರ್ಶಿ

ಸಹಾಯಕ ನಿರ್ದೇಶಕರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ
ಗದಗ ರಸ್ತೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ
ದೂರವಾಣಿ :08539-230121 email :adysskoppal@gmail.com
ಸಂಖ್ಯೆ: ಸ/ಯುಸಕ್ರೀಇ/ಕ್ರೀವನಿ/ಕೊ/ಟೆಂಡರ್-08(ಎ)/2026-27/1104 ದಿನಾಂಕ: 18.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಗದಗ ರಸ್ತೆ, ಕೊಪ್ಪಳ ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೆಳಕಾಣಿಸಿದ ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳ ದೈನಂದಿನ ಊಟೋಪಚಾರ ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕೆಪಿಪಿಪಿ ಪೋರ್ಟಲ್ ಮೂಲಕ ಕೆಳಕಾಣಿಸಿದ ಟೆಂಡರ್ ಆಹ್ವಾನಿಸಿದೆ.
ಟೆಂಡರ್‌ನ ವಿವರ : (1) ಕ್ರೀಡಾ ವಸತಿ ಶಾಲೆ/ನಿಲಯ, ಕೊಪ್ಪಳ ಕೊಪ್ಪಳ ಜಿಲ್ಲೆ ಟೆಂಡರ್‌ಗಿಟ್ಟ ಮೊತ್ತ (ರೂ ಗಳಲ್ಲಿ) : **ರೂ.58,50,000=00** ಇ.ಎಂ.ಡಿ ಮೊತ್ತ (ರೂಗಳಲ್ಲಿ) : **ರೂ.1,17,000/-** (2) ಟೆಂಡರ್ ಆಹ್ವಾನಿಸಿದ **ದಿನಾಂಕ: 19.06.2026 ಅಪರಾಹ್ನ 12.00** (3) ಟೆಂಡರ್ ಸಲ್ಲಿಸುವ ಅಂತಿಮ **ದಿನಾಂಕ: 08.07.2026 ಸಾಯಂಕಾಲ 4.00** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.07.2026 ಬೆಳಿಗ್ಗೆ 11.00** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತದ ನಂತರ ತಿಳಿಸಲಾಗುವುದು.

ಕ್ರ. ಸಂ	ವಿವರಗಳು	ಕ್ರೀಡಾಪಟುಗಳ ಸಂಖ್ಯೆ (ಅಂದಾಜು)	ಒಬ್ಬ ಕ್ರೀಡಾಪಟುವಿಗೆ ದಿನ ಒಂದಕ್ಕೆ ನಿಗದಿಪಡಿಸಿದ ಗರಿಷ್ಠ ಮೊತ್ತ (ರೂಗಳಲ್ಲಿ)	ವಾರ್ಷಿಕ ಅಂದಾಜು 325 ದಿನಗಳಿಗೆ ಆಹಾರ ಪೂರೈಕೆಗೆ ತಗಲುವ ಒಟ್ಟು ವೆಚ್ಚ (ರೂಗಳಲ್ಲಿ)
1	5ನೇ ತರಗತಿಯಿಂದ 10ನೇ ತರಗತಿವರೆಗಿನ ಕ್ರೀಡಾಪಟುಗಳು	80	225/-	58,50,000=00
	ಒಟ್ಟು	80		58,50,000=00

ಆಸಕ್ತ ಟೆಂಡರದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಹಾಗೂ ಟೆಂಡರ್ ದಾಖಲೆಗಳನ್ನು ಉಚಿತವಾಗಿ ಮೇಲ್ಕಂಡ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

ಸಹಿ/- ಸಹಾಯಕ ನಿರ್ದೇಶಕರು
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕೊಪ್ಪಳ ಜಿಲ್ಲೆ.

ವಾ.ಸಾ.ಕಂ.ಇ/ಕೊಪ್ಪಳ/181/ಜಾಹೀರಾತುಪ್ರಚಾರ/2026-27

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:05/2026-27 2ನೇ ಕರೆ ದಿನಾಂಕ:16.06.2026
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ:5054-04-337-0-01-154 ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆಗಳಡಿ ಅನುಮೋದನೆಯಾಗಿರುವ ನಂ-2 ವಿಶೇಷ ಉಪವಿಭಾಗ, ಮೈಸೂರು ವ್ಯಾಪ್ತಿಯ 01 ಸಂಖ್ಯೆ ಮತ್ತು ಟಿ ನರಸೀಪುರ ಉಪವಿಭಾಗ, ಟಿ ನರಸೀಪುರ ವ್ಯಾಪ್ತಿಯ 01 ಸಂಖ್ಯೆ ಒಟ್ಟು 02 ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/) ಸದರಿ ಕಾಮಗಾರಿಗಳಿಗೆ: ದಿ:17.06.2026 ರಿಂದ 02.07.2026 ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.143.19 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.15 ಲಕ್ಷಗಳು ಹಾಗೂ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.199.31 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.99 ಲಕ್ಷಗಳಾಗಿರುತ್ತದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ: 04 ತಿಂಗಳುಗಳು (ಮಳೆಗಾಲ ಸೇರಿದಂತೆ) ಸದರಿ ಕಾಮಗಾರಿಗಳ ಪೂರ್ವಭಾವಿ ಸಭೆಯನ್ನು ದಿ:25.06.2026 ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸೂಚನೆ: 1) ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. **2)** ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್

DIPR/DDMYS/355/KSMCA/237/2026-27

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಉಪ ವಿಭಾಗ ಗದಗ ರವರ ಕಛೇರಿ, ಹುಬ್ಬಳ್ಳಿ ರಸ್ತೆ,
ಬಿಂಕದಕಟ್ಟಿ - 582 103, ತಾ: & ಜಿ: ಗದಗ.
ದೂರವಾಣಿ : 08372-200978, ಇ-ಮೇಲ್ : acfgadag@gmail.com

ಸಂಖ್ಯೆ : ಎ2/ಪಿ.ಜಿ.ಟಿ./ಟೆಂಡರ್/ಸಿಆರ್-1/2026-27
ದಿನಾಂಕ : 19-06-2026

ಕೆಪಿಪಿಪಿ ತಂತ್ರಾಂಶದಲ್ಲಿ ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27 ನೇ ಸಾಲಿನಲ್ಲಿ ಡಿ.ಡಿ.ಎಫ್. ಯೋಜನೆಯಡಿ ಗದಗ ಅರಣ್ಯ ವಿಭಾಗದ ಮುಂಡರಗಿ ಮತ್ತು ಶಿರಹಟ್ಟಿ ವಲಯಗಳಲ್ಲಿ ಮಾಸ್ಟಿಕ್ ರೆಡುಕೋಟು ನಿರ್ಮಾಣ, ಸಸಿಗಳನ್ನು ಬೆಳೆಸುವುದು ಹಾಗೂ ಸಸಿಗಳ ನಿರ್ವಹಣೆ ಕಾಮಗಾರಿ ಕೈಗೊಳ್ಳುವ ಕುರಿತು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ ಮತ್ತು ಕಾಯಿದೆಯಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ತಿಳುವಳಿಕೆಗೋಸ್ಕರ ಇ-ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ	ವಿವರ	ದಿನಾಂಕ
1	ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ	ರೂ. 41,20,000.00
2	ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ	ರೂ. 20,60,000.00
3	ಕೆಲಸಗಳ ಇಂಡೆಂಟ್‌ಗಳ ಸಂಖ್ಯೆ	04 (40228, 40230, 40231, 40238)
4	ಇ-ಟೆಂಡರ್ ಪ್ರಕಟಣೆ ದಿನಾಂಕ	19-06-2026
5	ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ. (ತಾಂತ್ರಿಕ)	29-06-2026 ಅಪರಾಹ್ನ 4.00 ಗಂಟೆವರೆಗೆ.
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಮಯ	01-07-2026 ಬೆಳಿಗ್ಗೆ 11.00 ಗಂಟೆವರೆಗೆ.
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಸಮಯ	03-07-2026 ಬೆಳಿಗ್ಗೆ 11.00 ಗಂಟೆಗೆ.

ಒಂದೊಮ್ಮೆ ಸದರಿ ದಿನಾಂಕದಂದು ಸದರಿ ಟೆಂಡರ್ ಯಶಸ್ವಿಯಾಗದಿದ್ದಲ್ಲಿ ಮರು ಟೆಂಡರ್ ಕರೆಯಲಾಗುವುದು. (ಮರು ಟೆಂಡರಿಗೆ ಪ್ರತ್ಯೇಕ ನೋಟಿಫಿಕೇಷನ್ ಹೊರಡಿಸಲಾಗುವುದಿಲ್ಲ.)
ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಇ-ಪೋರ್ಟಲ್ (https://kppp.karnataka.gov.in) ಮೂಲಕ ಪರಿಶೀಲಿಸತಕ್ಕದ್ದು, ಹಾಗೂ ಹೆಚ್ಚಿನ ಮಾಹಿತಿ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಗದಗ ಉಪ ವಿಭಾಗ, ಗದಗ.

ವಾಸಾಕಇ/ಗದಗ/131/ಜಾಹೀರಾತ್/2026-27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.
Ph: 08174233111 e-mail: eeypd3ask@gmail.com
ಸಂಖ್ಯೆ:ಕಾಇಂ/ವಿ.ಜ.ನಿನಿ/ಎಯೋವಿ/ನಂ.3/ಅರಸೀಕೆರೆ/2026-27/363
ದಿನಾಂಕ:04.06.2026

RATES OF NON-SR ITEMS ಕೊಟೇಷನ್ ನೋಟಿಫಿಕೇಷನ್
ಕಾರ್ಯಪಾಲಕ ಇಂಜಿನಿಯರ್ ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ ನಂ.03 ಅರಸೀಕೆರೆ ರವರು Rates of NON-SR ITEMS for the work of "Preparation of Estimate and Undertaking for implementation of Reclamation & Rehabilitation (R&R) Plan in respect of forest area proposed for surrender under Forest Conservation compliance pertaining to Yettinahole Project." ಗೆ ಕೊಟೇಷನ್ ಅನ್ನು ಆಹ್ವಾನಿಸಿದ್ದು, ಕೊಟೇಷನ್ ಅನ್ನು ಮುಚ್ಚಿದ ಲಕೋಟೆಯಲ್ಲಿ ಕಾರ್ಯಪಾಲಕ ಇಂಜಿನಿಯರ್ ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ ನಂ.03 ಅರಸೀಕೆರೆ ಕಛೇರಿಗೆ ದಿನಾಂಕ:25.06.2026ರ ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು ಮತ್ತು ಸದರಿ ಮುಚ್ಚಿದ ಲಕೋಟೆಯನ್ನು ದಿನಾಂಕ:26.06.2026 ರಂದು ಈ ಕೆಳಗೆ ಸಹಿ ಮಾಡಿರುವ ಕಾರ್ಯಪಾಲಕ ಇಂಜಿನಿಯರ್ ರವರ ಸಮ್ಮುಖದಲ್ಲಿ ಈ ಕಛೇರಿಯಲ್ಲಿ ತೆರೆಯಲಾಗುವುದು. ಸೂಚನೆ 1.ಕೊಟೇಷನ್ ದರಗಳನ್ನು ಸರಕು ಮತ್ತು ಸೇವಾ ತೆರಿಗೆ ಹೊರತುಪಡಿಸಿ ಸಲ್ಲಿಸಬೇಕು. 2.ಐಟಂವಾರು ವಿವರಗಳನ್ನು ದಿನಾಂಕ:25.06.2026 ರವರೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ ನಂ.03 ಅರಸೀಕೆರೆ ಕಛೇರಿಯಿಂದ ಪಡೆದುಕೊಳ್ಳತಕ್ಕದ್ದು, ಹಾಗೂ ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಕೊಟೇಷನ್‌ಅನ್ನು ತಿರಸ್ಕರಿಸುವ ಅಥವಾ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ,
ನಂ.3 ಅರಸೀಕೆರೆ

ವಾಸಾಕಇಂಇ/ಹಾಸನ/259/ಕೆಎಸ್‌ಎಂಸಿಎ/2026-27

ಆಕ್ಷೇಪ ಬೆನ್ನಲ್ಲೇ ಎನ್‌ಟಿಎ ಸ್ಪಷ್ಟನೆ

ಅಬುದಾಬಿ ಆಯ್ಕೆ ವಿದ್ಯಾರ್ಥಿಯದ್ದೇ

• **ನಾಗ್ಪುರ:** ನೀಟ್-ಯುಜಿ ಮರುಪರೀಕ್ಷೆಗೆ ಇಲ್ಲಿನ ವಿದ್ಯಾರ್ಥಿಯೊಬ್ಬರಿಗೆ ಯುಎಇಯ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರ ನೀಡಲಾಗಿದೆ ಎಂಬ ಸುದ್ದಿ ತಿರುವು ಪಡೆದಿದ್ದು, ಈ ಪರೀಕ್ಷಾ ಕೇಂದ್ರವನ್ನು ಸ್ವತಃ ವಿದ್ಯಾರ್ಥಿಯೇ ಆಯ್ಕೆ ಮಾಡಿಕೊಂಡಿದ್ದಾನೆ ಎಂದು ಎನ್‌ಟಿಎ ಹೇಳಿದೆ.

ಶನಿವಾರ ಬೆಳಗ್ಗೆ ಈ ಸಂಬಂಧ ವಿದ್ಯಾರ್ಥಿಯ ಕುಟುಂಬಸ್ಥರು ಆಕ್ಷೇಪವೆತ್ತಿದ್ದರು. ಬಳಿಕ ತಾಂತ್ರಿಕ ದೋಷದಿಂದ ಹೀಗಾಗಿರಬೇಕು ಎಂದು ಎನ್‌ಟಿಎ ಸರಿಪಡಿಸಿ, ನಾಗ್ಪುರಕ್ಕೇ ಬದಲು ಮಾಡಿತ್ತು. ಜತೆಗೆ, ತಾಂತ್ರಿಕ ದೋಷ ಎಲ್ಲಿ ಆಗಿರಬಹುದು ಎಂಬ ಶೋಧಕ್ಕಿಳಿದಾಗ ಸ್ವತಃ ವಿದ್ಯಾರ್ಥಿ ಆಯ್ಕೆ ಮಾಡಿಕೊಂಡಿರುವುದು ಗೊತ್ತಾಗಿದೆ.

ಈ ಮೊದಲು ಪ್ರತಿಕ್ರಿಯೆ ನೀಡಿದ್ದ ವಿದ್ಯಾರ್ಥಿಯತಂದೆ ಡಾ. ಮೊಹಮ್ಮದ್ ಹಾಲಿಬ್, ಪ್ರವೇಶಪತ್ರದಲ್ಲಿ ಅಬುಧಾಬಿ ಕೇಂದ್ರ ಕಂಡು ತೀವ್ರ ಆತಂಕಕ್ಕೊಳಗಾಗಿದ್ದೆವು. ಇದೀಗ ಕೇಂದ್ರ ಬದಲಾಯಿಸಿರುವುದರಿಂದ ನೆಮ್ಮದಿ ದೊರೆತಿದೆ. ಆದರೆ ಈ ಗೊಂದಲದಿಂದ ಮಗ ಒತ್ತಡಕ್ಕೆ ಒಳಗಾಗಿದ್ದು, ಪರೀಕ್ಷೆಗೆ ಹಾಜರಾಗಲು ಹಿಂದೇಟು ಹಾಕುತ್ತಿದ್ದಾನೆ ಎಂದಿದ್ದರು.

ಅಭ್ಯರ್ಥಿಯ ಖಾತೆಯಿಂದಲೇ ಬದಲಾವಣೆ: ಸಂಸ್ಥೆ: ವಿದ್ಯಾರ್ಥಿಯ ನೋಂದಾಯಿತ ಖಾತೆಯ ಮೂಲಕವೇ ಪರೀಕ್ಷಾ ನಗರವನ್ನು ಅಬುಧಾಬಿಗೆ ಬದಲಾಯಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸ್ಪಷ್ಟಪಡಿಸಿದೆ. ತಿದ್ದುಪಡಿ ಅವಧಿಯಲ್ಲಿ ಅಭ್ಯರ್ಥಿಯ ಖಾತೆಯಿಂದ ವಿನಂತಿಯ ಬಳಿಕ ದಾಖಲಾಗಿದ್ದು, ಅಬುಧಾಬಿ ಕೇಂದ್ರವನ್ನು ಆಯ್ಕೆ ಮಾಡಲಾಗಿದೆ. ಬಳಿಕ ಎರಡು ಬಾರಿ ಪ್ರವೇಶಪತ್ರದ ಪೂರ್ವವೀಕ್ಷಣೆಯನ್ನೂ ಮಾಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ಪರೀಕ್ಷೆಗೆ ಕೇವಲ 48 ಗಂಟೆಗಳು ಬಾಕಿ ಇದ್ದಾಗ ಜೂ.19ರ ಸಂಜೆ ಕೇಂದ್ರವನ್ನು ನಾಗ್ಪುರಕ್ಕೆ ಬದಲಿಸುವಂತೆ ಅನೌಪಚಾರಿಕ ಮನವಿ ಬಂದಿತ್ತು. ಅಭ್ಯರ್ಥಿಯ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಂಡು, ಕುಟುಂಬವನ್ನು ಸಂಪರ್ಕಿಸಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ಸಂಸ್ಥೆ ಹೇಳಿದೆ.



ವಿದ್ಯಾರ್ಥಿಯೇ ಮೊದಲ ಆದ್ಯತೆ: ಆಡಳಿತಾತ್ಮಕ ಗೊಂದಲದಿಂದ ಯಾವುದೇ ಅಭ್ಯರ್ಥಿ ಪರೀಕ್ಷೆಯಿಂದ ವಂಚಿತರಾಗಬಾರದು ಎಂಬುದು ಸಂಸ್ಥೆಯ ಆದ್ಯತೆಯಾಗಿದೆ. ಇದೇ ಕಾರಣಕ್ಕೆ ಅಭ್ಯರ್ಥಿಯ ಮನವಿಯಂತೆ ಕೊನೆಯ ಕ್ಷಣದಲ್ಲೂ ಕೇಂದ್ರವನ್ನು ಬದಲಾಯಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹೇಳಿದೆ.

ದೇಶದೆಲ್ಲೆಡೆ ನೀಟ್ ಮಾಕ್ ಡ್ರಿಲ್ ಯಶಸ್ವಿ: ನೀಟ್(ಯುಜಿ) 2026 ಮರುಪರೀಕ್ಷೆ ಹಿನ್ನೆಲೆ ಎನ್‌ಟಿಎ ದೇಶದೆಲ್ಲೆಡೆ ನೀಟ್ ಮರುಪರೀಕ್ಷೆಯ ಪೂರ್ವಾಭ್ಯಾಸ(ಮಾಕ್ ಡ್ರಿಲ್) ಅನ್ನು ಶನಿವಾರ ಆಯೋಜಿಸಿತು. ನೀಟ್ ಮರುಪರೀಕ್ಷೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ನಡೆಸಲಾಗಿದ್ದು, ಸುರಕ್ಷಾ ವ್ಯವಸ್ಥೆಯಲ್ಲಿ ಲೋಪಗಳಿದ್ದರೆ ಸರಿಪಡಿಸುವ ಉದ್ದೇಶದಿಂದ ಮಾಕ್ ಡ್ರಿಲ್ ನಡೆಸಲಾಗಿದೆ.

ಮಾಕ್ ಡ್ರಿಲ್ ವೇಳೆ ಪ್ರಶ್ನೆಪತ್ರಿಕೆ ಸಾಗಣೆ, ಪರೀಕ್ಷಾರ್ಥಿಗಳ ತಪಾಸಣೆ, ಸಿಸಿಟಿವಿ ಮತ್ತು ಕಣ್ಗಾವಲು ವ್ಯವಸ್ಥೆ, ಸುರಕ್ಷತೆ, ಮರುಪರೀಕ್ಷೆಗೆ ಪರೀಕ್ಷಾ ಕೇಂದ್ರಗಳ ಸನ್ನದ್ಧತೆ ಇತ್ಯಾದಿ ಪರಿಶೀಲನೆಗಳನ್ನು ನಡೆಸಲಾಯಿತು. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷೆಗೆ ಕುಳಿತುಕೊಳ್ಳುವ ಸ್ಥಳ, ದಾಖಲೆಗಳ ತಪಾಸಣೆ ಪ್ರಕ್ರಿಯೆ ಮತ್ತು ಸುರಕ್ಷತಾ ವ್ಯವಸ್ಥೆಗಳ ಪರಿಶೀಲನೆ ನಡೆಸಲಾಯಿತು. ಎನ್‌ಟಿಎ ಅಧಿಕಾರಿಗಳು, ಜಿಲ್ಲಾಡಳಿತ, ಪೊಲೀಸರು ಹಾಗೂ ಸಿಐಎಸ್ಎಫ್ ಸಿಬ್ಬಂದಿ ನಡುವಿನ ಸಮನ್ವಯ ಪರೀಕ್ಷಿಸಲಾಯಿತು.

ಶ್ರೀರಾಮನ ಪ್ರತಿಮೆ ಅಪವಿತ್ರ ಢಾಕಾದಲ್ಲಿ ತೀವ್ರ ಪ್ರತಿಭಟನೆ

• **ಢಾಕಾ:** ಬಾಂಗ್ಲಾದೇಶದಲ್ಲಿ ಭಗವಾನ್ ಶ್ರೀ ರಾಮನ ಮೂರ್ತಿಯನ್ನು ಅಪವಿತ್ರಗೊಳಿಸಿದ ಘಟನೆ ಸಂಭವಿಸಿದ್ದು, ಹಿಂದೂ ಸಮುದಾಯದವರು ರಾಜಧಾನಿ ಢಾಕಾದಲ್ಲಿ ಭಾರಿ ಪ್ರತಿಭಟನೆ ನಡೆಸಿದ್ದಾರೆ. ಅದೇ ರೀತಿ ಗೈಬಂಧ ಜಿಲ್ಲೆಯಲ್ಲಿ 81 ಅಡಿ ಎತ್ತರದ ಶ್ರೀ ರಾಮನ ಪ್ರತಿಮೆ ನಿರ್ಮಾಣ ಯೋಜನೆಯನ್ನು ಸ್ಥಗಿತಗೊಳಿಸಿರುವುದನ್ನು ವಿರೋಧಿಸಿ ಹಿಂದು ಸಂಘಟನೆಗಳು ರಾಜಧಾನಿ ಹಾಗೂ ದೇಶದ ವಿವಿಧೆಡೆ ಬೃಹತ್ ಪ್ರತಿಭಟನೆ ನಡೆಸಿವೆ.

ಸ್ಥಗಿತಗೊಂಡ ಪ್ರತಿಮೆ ಯೋಜನೆ: ಉತ್ತರ ಗೈಬಂಧ ಜಿಲ್ಲೆಯ ಪಲಾಶ್‌ಬಾರಿಯಲ್ಲಿ ನಿರ್ಮಾಣವಾಗುತ್ತಿರುವ ಪ್ರತಿಮೆಯ ಸುತ್ತ ಈ ವಿವಾದ ಕೇಂದ್ರೀಕೃತವಾಗಿದೆ. ಈ ಯೋಜನೆ, ಶ್ರೀಕೃಷ್ಣ ಮತ್ತು ಶಿವನ ಪ್ರತಿಮೆಗಳನ್ನು ಒಳಗೊಂಡಿರುವ ದೇವಾಲಯದ ಸಂಕೀರ್ಣದ ಭಾಗವಾಗಿದೆ. ಶೇ.80 ಕಾಮಗಾರಿ ಪೂರ್ಣಗೊಂಡಿದ್ದರೂ, ಇಸ್ಲಾಮಿಕ್ ಸಂಘಟನೆಗಳಿಂದ ಬೆದರಿಕೆ ಬಂದ ಹಿನ್ನೆಲೆಯಲ್ಲಿ ದೇವಾಲಯದ ಅಧಿಕಾರಿಗಳು ನಿರ್ಮಾಣವನ್ನು ಸ್ಥಗಿತಗೊಳಿಸಿದ್ದಾರೆ.

ಜಾಗತಿಕ ಸ್ವಾಸ್ಥ್ಯದ ಕಡೆಗೆ ಹೆಜ್ಜೆ

ಅಂತಾರಾಷ್ಟ್ರೀಯ ಯೋಗ ದಿನವನ್ನು ಇಂದು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಈ ಪ್ರಾಚೀನ ಭಾರತೀಯ ಪದ್ಧತಿಯನ್ನು ಸಂಭ್ರಮಿಸಲು ಲಕ್ಷಾಂತರ ಜನರು ಒಂದಾಗಲಿದ್ದಾರೆ. ಯೋಗದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಜನರು ತಮ್ಮ ದೈನಂದಿನ ಜೀವನದಲ್ಲಿ ಇದನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಈ ವಾರ್ಷಿಕ ಆಚರಣೆಯ ಮುಖ್ಯ ಉದ್ದೇಶ. ಜಗತ್ತಿನಲ್ಲಿ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಆರೋಗ್ಯ ಸವಾಲುಗಳನ್ನು ಎದುರಿಸಲು ಯೋಗ ಒಂದು ಪ್ರಮುಖ ಸಾಧನ ಎಂದು ಸಾಬೀತಾಗುತ್ತಲೇ ಬಂದಿದೆ.



ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿಕ್ರಿಯೆ

ಈ ಆಚರಣೆಗೆ ಜಾಗತಿಕ ಮಟ್ಟದಲ್ಲಿ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಯೋಗ ದಿನಾಚರಣೆ ವಿವಿಧ ಖಂಡಗಳು ಮತ್ತು ದೇಶಗಳಾಚೆಗೆ ವಿಸ್ತರಿಸಿದೆ. ನಿಯಮಿತ ದೈಹಿಕ-ಮಾನಸಿಕ ವ್ಯಾಯಾಮದ ಜಂಟಿ ಗುರಿಯಡಿಯಲ್ಲಿ ಅಂತಾರಾಷ್ಟ್ರೀಯ ಸಮುದಾಯಗಳನ್ನು ಒಂದುಗೂಡಿಸಲು ಸುಮಾರು 175 ದೇಶಗಳಲ್ಲಿ ಏಕಕಾಲೀನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ಐಸಿಸಿಆರ್) ಸಂಘಟಿತ ಕಾರ್ಯಾಚರಣೆಗಳ ಮೂಲಕ, ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ಪ್ರಾದೇಶಿಕ ಯೋಗ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿವೆ. ಈ ಪ್ರಯತ್ನಗಳ ಫಲವಾಗಿ ಜಗತ್ತಿನಾದ್ಯಂತ ಸುಮಾರು 2,500 ಸ್ಥಳಗಳಲ್ಲಿ ಸಕ್ರಿಯ ಆಚರಣೆಗಳು ನಡೆಯುತ್ತಿವೆ. ಈ ವ್ಯಾಪಕ ಅಂತಾರಾಷ್ಟ್ರೀಯ ಸ್ಪಂದನೆ, ಭಾರತದ ಐತಿಹಾಸಿಕ ಜ್ಞಾನದಲ್ಲಿ ಬೇರೂರಿರುವ ಪದ್ಧತಿಯೊಂದು ದೈನಂದಿನ ರೋಗ ತಡೆಗಟ್ಟುವಿಕೆ ಮತ್ತು ಸ್ವಾಸ್ಥ್ಯಕ್ಕಾಗಿ ಅತ್ಯಂತ ಪ್ರಾಯೋಗಿಕ ಜಾಗತಿಕ ಚೌಕಟ್ಟಾಗಿ ಹೇಗೆ ರೂಪುಗೊಂಡಿದೆ ಎಂಬುದನ್ನು ತೋರಿಸುತ್ತದೆ.

ಆರೋಗ್ಯಕರ ವೃದ್ಧಾಪ್ಯದ ಧ್ಯೇಯವಾಕ್ಯ

2026ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಧಿಕೃತ ಧ್ಯೇಯವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ (ಯೋಗ ಫಾರ್ ಹೆಲ್ದಿ ಏಜಿಂಗ್). ಜಗತ್ತಿನಾದ್ಯಂತ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಅವರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಜಾಗತಿಕ ಅಗತ್ಯವನ್ನು ಈ ಧ್ಯೇಯವಾಕ್ಯ ತಿಳಿಸುತ್ತದೆ. ದೀರ್ಘಾಯುಷ್ಯ, ಚಟುವಟಿಕೆ, ದೃಢತೆ, ಮತ್ತು ರೋಗನಿರೋಧಕ ಆರೋಗ್ಯ ರಕ್ಷಣೆಯನ್ನು ಹೆಚ್ಚಿಸುವಲ್ಲಿ ಯೋಗದ ಪಾತ್ರದ ಬಗ್ಗೆ ಜಾಗೃತಿ ಮೂಡಿಸಲು ಈ ಸಲದ ಆಚರಣೆ ಪ್ರಯತ್ನಿಸಲಿದೆ.

ಸಾಮರಸ್ಯ, ಆರೋಗ್ಯ

ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಉದ್ಭವಿಸಿದ ಯೋಗ, ಮಾನವನ ಮನಸ್ಸು ಮತ್ತು ದೇಹದ ನಡುವೆ ಸಂಪೂರ್ಣ ಸಾಮರಸ್ಯವನ್ನು ಸೃಷ್ಟಿಸಲು ವಿನ್ಯಾಸಗೊಳಿಸಲಾದ ಸಮಗ್ರ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ಅಭ್ಯಾಸ, ದೈಹಿಕ ಭಂಗಿಗಳು, ಉಸಿರಾಟದ ವ್ಯಾಯಾಮಗಳು, ಧ್ಯಾನ ಮತ್ತು ನಿಖರವಾದ ಜಾಗೃತಿಯ ತಂತ್ರಗಳನ್ನು ರಚನಾತ್ಮಕವಾಗಿ ಸಂಯೋಜಿಸುತ್ತದೆ. ದೇಹದ ಉತ್ತಮ ಸಮತೋಲನ ಮತ್ತು ಸುಧಾರಿತ ಏಕಾಗ್ರತೆ ಸೇರಿದಂತೆ ದಾಖಲಿತ ದೈಹಿಕ ಪ್ರಯೋಜನಗಳ ಬಗ್ಗೆ ಜನರಿಗೆ ಶಿಕ್ಷಣ ನೀಡಲು ಈ ಜಾಗತಿಕ ವೇದಿಕೆ ಸಹಾಯ ಮಾಡುತ್ತದೆ. ಮೇಲಾಗಿ, ನಿಯಮಿತ ಅಭ್ಯಾಸ ದೈನಂದಿನ ಒತ್ತಡ ನಿರ್ವಹಣೆಗೆ ಹಲವು ರೀತಿಯ ಪರಿಹಾರಗಳನ್ನು ಒದಗಿಸುತ್ತದೆ, ವ್ಯಕ್ತಿಗಳು ರೋಗ ಬಂದ ನಂತರ ಚಿಕಿತ್ಸೆ ಪಡೆಯುವ ಬದಲಿಗೆ ರೋಗನಿರೋಧಕ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಲು ಸಹಾಯ ಮಾಡುತ್ತದೆ.

ಜಾಗತಿಕ ಆಚರಣೆಗಳ ವಿಸ್ತರಣೆ


ಇಂದು ಜಗತ್ತಿನಾದ್ಯಂತ ಸಾಮೂಹಿಕ ಯೋಗ ಅವಧಿಗಳು, ಶೈಕ್ಷಣಿಕ ಕಾರ್ಯಾಗಾರಗಳು, ಸಮುದಾಯ ಅಭಿಯಾನಗಳು ಮತ್ತು ಸ್ವಾಸ್ಥ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸರ್ಕಾರಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು ಮತ್ತು ಸ್ವತಂತ್ರ ಯೋಗ ತರಬೇತುದಾರರು ಸಕ್ರಿಯ ಜೀವನದ ಮೌಲ್ಯವನ್ನು ಉತ್ತೇಜಿಸಲು ಕೈಜೋಡಿಸಿದ್ದಾರೆ. ಎಲ್ಲಾ ವಯೋಮಾನದ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಸಾರ್ವಜನಿಕ ಸ್ಥಳಗಳು, ಶಾಲೆಗಳು, ಕಚೇರಿಗಳು ಮತ್ತು ಉದ್ಯಾನವನಗಳಲ್ಲಿ ಮುಕ್ತ ಯೋಗ ಅವಧಿಗಳನ್ನು ಆಯೋಜಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳು ಯೋಗದ ವ್ಯಾಪಕ ಸಾಂಸ್ಕೃತಿಕ ಸ್ವೀಕಾರ ಮತ್ತು ಬೆಳೆಯುತ್ತಿರುವ ಅಂತಾರಾಷ್ಟ್ರೀಯ ಆಕರ್ಷಣೆಯನ್ನು ತೋರಿಸುತ್ತವೆ.

ಯೋಗದ ಹಬ್ಬ

12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಇಂದು ದೇಶಾದ್ಯಂತ "ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ" ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಡೆಹ್ರಾಡೂನ್‌ನಲ್ಲಿ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೋಲ್ಕತ್ತಾದ ರೆಡ್ ರೋಡ್‌ನಲ್ಲಿ ರಾಷ್ಟ್ರೀಯ ಕಾರ್ಯಕ್ರಮಕ್ಕೆ ನೇತೃತ್ವ ವಹಿಸಲಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಲಡಾಖ್‌ನಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಆಯುಷ್ ಸಚಿವಾಲಯ, ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಸುವಂತೆ ಸೂಚಿಸಿದೆ.

ಇತಿಹಾಸ ಮತ್ತು ಮೂಲ

ಯೋಗಕ್ಕಾಗಿ ಪ್ರತ್ಯೇಕ ಜಾಗತಿಕ ದಿನವನ್ನು ಮೀಸಲಿಡುವ ಕಲ್ಪನೆ ಸೆಪ್ಟೆಂಬರ್ 2014ರಲ್ಲಿ ಪ್ರಾರಂಭವಾಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಈ ಪರಿಕಲ್ಪನೆಯನ್ನು ಅಧಿಕೃತವಾಗಿ ಪ್ರಸ್ತಾಪಿಸಿದರು. ಈ ಪ್ರಸ್ತಾವಕ್ಕೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಂದ ತಕ್ಷಣದ ಮತ್ತು ಅಭೂತಪೂರ್ವ ಬೆಂಬಲ ದೊರೆಯಿತು. ಈ ಒಮ್ಮತದ ಫಲವಾಗಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಡಿಸೆಂಬರ್ 2014ರಲ್ಲಿ ಅಧಿಕೃತ ನಿರ್ಣಯವನ್ನು ಅಂಗೀಕರಿಸಿ, ಜೂನ್ 21 ರನ್ನು ಅಂತರರಾಷ್ಟ್ರೀಯ ಯೋಗ ದಿನ ಎಂದು ಘೋಷಿಸಿತು. ಆಯ್ದ ದಿನಾಂಕ ಸಾಂಸ್ಕೃತಿಕ ಮಹತ್ವ ಹೊಂದಿದೆ, ಏಕೆಂದರೆ ಇದು ಉತ್ತರ ಗೋಳಾರ್ಧದಲ್ಲಿ ಬೇಸಿಗೆ ಅಯನ ಸಂಕ್ರಾಂತಿಯೊಂದಿಗೆ ಹೊಂದಿಕೆಯಾಗುತ್ತದೆ. ಇದು ಕ್ಯಾಲೆಂಡರ್ ವರ್ಷದ ಅತಿ ಉದ್ದದ ದಿನವೂ ಹೌದು. ಈ ನಿರ್ಣಯದ ನಂತರ, ಉದ್ಘಾಟನಾ ಅಂತಾರಾಷ್ಟ್ರೀಯ ಯೋಗ ದಿನವನ್ನು ಜೂನ್ 21, 2015 ರಂದು ಆಚರಿಸಲಾಯಿತು. ಇದು ಪ್ರಪಂಚದಾದ್ಯಂತ ಏಕಕಾಲೀನ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಆ ಮೊದಲ ಸಾಮೂಹಿಕ ಆಚರಣೆಯ ನಂತರ, ವಾರ್ಷಿಕ ಆಚರಣೆ ಜಗತ್ತಿನ ಅತಿ ದೊಡ್ಡ ಸ್ವಾಸ್ಥ್ಯ ಯೋಜನೆಗಳಲ್ಲಿ ಒಂದಾಗಿ ಅಭೂತಪೂರ್ವ ಯಶಸ್ಸು ಕಂಡಿದೆ.



ಮಾನಸಿಕ ಸ್ವಾಸ್ಥ್ಯ

ಕೇವಲ ದೈಹಿಕ ಸಾಮರ್ಥ್ಯಗಳನ್ನು ಮೀರಿ, ಯೋಗ ಭಾವನಾತ್ಮಕ ಮತ್ತು ಮಾನಸಿಕ ಸ್ಥಿರತೆಗೆ ಅತ್ಯಗತ್ಯ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಆಧುನಿಕ ಸಾಮಾಜಿಕ ಒತ್ತಡಗಳ ನಡುವೆ ದೈನಂದಿನ ಒತ್ತಡವನ್ನು ಕಡಿಮೆ ಮಾಡಲು, ಆಂತರಿಕ ಸ್ವಯಂ ಜಾಗೃತಿಯನ್ನು ಹೆಚ್ಚಿಸಲು ಮತ್ತು ಆಂತರಿಕ ಭಾವನಾತ್ಮಕ ಸಮತೋಲನವನ್ನು ಕಾಯ್ದುಕೊಳ್ಳಲು ಯೋಗಾಭ್ಯಾಸಿಗಳು ಈ ತಂತ್ರವನ್ನು ಬಳಸುತ್ತಾರೆ.

ಕಿರುಸುದ್ದಿ

ಕಾಂಗ್ರೆಸ್‌ನಲ್ಲೇ ರಾಗಾಗೆ ಬೆಂಬಲ ಕುಸಿತ

• **ಹೊಸದಿಲ್ಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸ್ವಪಕ್ಷದಲ್ಲೇ ಬೆಂಬಲ ಕ್ಷೀಣಿಸುತ್ತಿದೆ ಎಂದು ಬಿಜೆಪಿ ಶನಿವಾರ ಆರೋಪಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯವೈಖರಿಯನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಶ್ಲಾಘಿಸಿದ್ದಾರೆ ಎನ್ನಲಾದ ಹೇಳಿಕೆಯನ್ನು ಉಲ್ಲೇಖಿಸಿ ಬಿಜೆಪಿ ರಾಹುಲ್ ವಿರುದ್ಧ ವಾಗ್ದಾಳಿ ನಡೆಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ನಾಜೂಕಿನ ವಿಚಾರವನ್ನು ಪ್ರಧಾನಿ ಮೋದಿ ಪ್ರಬಲವಾಗಿ ಪ್ರಸ್ತಾಪಿಸಿದ್ದು, ಭಾರತದ ನಿಲುವನ್ನು ಪರಿಣಾಮಕಾರಿಯಾಗಿ ಮನವರಿಕೆ ಮಾಡಿದ್ದಾರೆ ಎಂಬ ತರೂರ್ ಹೇಳಿಕೆ ರಾಹುಲ್ ಗಾಂಧಿ ಅವರ ನಿಲುವಿಗೆ ವಿರುದ್ಧವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ. ಶುಕ್ರವಾರ ರಾಹುಲ್ ಗಾಂಧಿ ಅವರ ಜನ್ಮದಿನವಾಗಿತ್ತು. ಆದರೆ ಅವರಿಗೆ ಯಾವುದೇ ಉಡುಗೊರೆ ಸಿಗಲಿಲ್ಲ. ಬದಲಾಗಿ, ಅದೇ ವಿಚಾರದಲ್ಲಿ ಶಶಿ ತರೂರ್ ಅವರ ನಿಲುವನ್ನೇ ಅಲ್ಲಗಳೆದಿದ್ದಾರೆ ಎಂದು ಪೂನಾವಾಲಾ ವಿಡಿಯೊ ಹೇಳಿಕೆಯಲ್ಲಿ ವ್ಯಂಗ್ಯವಾಡಿದರು. ಪ್ರಧಾನಿ ಮೋದಿ ಅವರ ದೂರದೃಷ್ಟಿ, ನಾಯಕತ್ವ, ಮಾತುಗಾರಿಕೆ ಮತ್ತು ಕ್ರಿಯಾಶೀಲತೆಯನ್ನು ತರೂರ್ ಹಲವು ಬಾರಿ ಪ್ರಶಂಸಿಸಿದ್ದಾರೆ. ಮೋದಿ ಅವರು ಭಾರತೀಯರ ಬದುಕಿನ ಮೇಲೆ ತಮ್ಮದೇ ಛಾಪು ಮೂಡಿಸಿದ್ದಾರೆ ಎಂದೂ ತರೂರ್ ಹೇಳಿದ್ದಾರೆ ಎಂದು ಪೂನಾವಾಲಾ ಪ್ರತಿಪಾದಿಸಿದರು.

ಪಾಕ್‌ನಲ್ಲಿ ಮಾಧ್ಯಮಗಳಿಗೆ ಸ್ವತಂತ್ರವಿಲ್ಲ: ಜೆ.ಡಿ ವ್ಯಾನ್ಸ್

• **ವಾಷಿಂಗ್ಟನ್:** ಪಾಕಿಸ್ತಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಇಲ್ಲ, ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಿತ ಪಾಕ್ ನೀತಿ ನಿಯಮಗಳು ಸರಿಯಿಲ್ಲ, ಅಮೆರಿಕ-ಇರಾನ್ ಶಾಂತಿ ಒಪ್ಪಂದದ ಪ್ರಮುಖಾಂಶಗಳ ಬಹುಗಡೆ ವಿಳಂಬವಾಗಲು ಇದು ಕೂಡ ಪ್ರಮುಖ ಕಾರಣವೆಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಪೋಡ್‌ಕಾಸ್ಟ್‌ನಲ್ಲಿ ಟೀಕಿಸಿದ್ದಾರೆ. ಈ ಮೂಲಕ ಪಾಕಿಸ್ತಾನ ಮಾಧ್ಯಮವನ್ನು ಎಷ್ಟರಮಟ್ಟಿಗೆ ಹಿಡಿತದಲ್ಲಿಟ್ಟುಕೊಂಡಿದೆ ಎಂಬುದನ್ನು ಬಹಿರಂಗಪಡಿಸಿದ್ದಾರೆ.



ಮಧ್ಯಂತರ ಶಾಂತಿ ಒಪ್ಪಂದದ ಮುಖ್ಯಾಂಶಗಳು ಬಹುಗಡೆಯಾಗಬೇಕೆಂದು ನಾವು ಬಯಸಿದ್ದೇವೆ. ಆದರೆ ಪಾಕ್ ಮತ್ತು ಖತಾರಿ ವ್ಯವಸ್ಥೆಗಳಲ್ಲಿ ಪ್ರಥಮ ತಿದ್ದುಪಡಿ (ಫಸ್ಟ್ ಅಮೆಂಡ್‌ಮೆಂಟ್)ಮತ್ತು ಪತ್ರಿಕಾ ಸ್ವಾತಂತ್ರ್ಯಗಳಿಲ್ಲ. ಒಪ್ಪಂದದ ಮುಖ್ಯಾಂಶ ಬಿಡುಗಡೆ ವಿಳಂಬವಾಗಲು ಇದು ಕೂಡ ಕಾರಣವೆಂದು ವ್ಯಾನ್ಸ್ ಆರೋಪಿಸಿದ್ದಾರೆ.

ನಿಂಬಾಳ್ಕರ್ ಕೊಲೆ ಕೇಸ್: ಆರೋಪಿಗಳ ಖುಲಾಸೆ

• **ಮುಂಬೈ:** 2006ರಲ್ಲಿ ನಡೆದ ಮಹಾರಾಷ್ಟ್ರ ಕಾಂಗ್ರೆಸ್ ನಾಯಕ ಪವನರಾಜೆ ನಿಂಬಾಳ್ಕರ್ ಕೊಲೆ ಪ್ರಕರಣದ ಎಲ್ಲಾ ಆರೋಪಿಗಳನ್ನು 20 ವರ್ಷಗಳ ಬಳಿಕ ಮುಂಬೈನ ವಿಶೇಷ ನ್ಯಾಯಾಲಯವು ಶನಿವಾರ ದೋಷಮುಕ್ತಗೊಳಿಸಿದೆ.

20 ವರ್ಷಗಳ ಬಳಿಕ ತೀರ್ಪು ಪ್ರಕಟ

2006ರ ಜೂ.3ರಂದು ನಿಂಬಾಳ್ಕರ್(41) ಮತ್ತು ಚಾಲಕ ಸಮದ್ ಕಾಜಿ ಮುಂಬೈನಿಂದ ಒಸ್ಮಾನಾಬಾದ್ (ಈಗಿನ ಧಾರಾಶಿವ್) ನತ್ತ ಪ್ರಯಾಣಿಸುತ್ತಿದ್ದರು. ನವಿಮುಂಬೈನ ಕಲಂಬೋಲಿ ತಲುಪಿದಾಗ ಇಬ್ಬರು ಶೂಟರ್‌ಗಳು ಕಾರು ಅಡ್ಡಗಟ್ಟಿದ್ದರು. ಬಳಿಕ ಗುಂಡಿನ ದಾಳಿ ನಡೆಸಿದ್ದು, ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು.

ನಿಂಬಾಳ್ಕರ್ ಸೋದರಸಂಬಂಧಿ ಮತ್ತು ಎನ್‌ಸಿಪಿ ಮಾಜಿ ಸಂಸದ ಈಗ 86 ವರ್ಷದವರಾದ ಪದ್ಮಸಿಂಹ ಪಾಟೀಲ್, ಉದ್ಯಮಿ ಸತೀಶ್ ಮಂದಾಡೆ, ಮಾಜಿ ಬಿಜೆಪಿ ಕಾರ್ಪೊರೇಟರ್ ಮತ್ತು ನಿವೃತ್ತ ಅಬಕಾರಿ ಇನ್ಸ್‌ಪೆಕ್ಟರ್ ಮೋಹನ್ ಶುಕ್ಲಾ, ಪಾರಸ್ಮಲ್ ಜೈನ್, ಮಾಜಿ ಅಬಕಾರಿ ಇನ್ಸ್‌ಪೆಕ್ಟರ್ ಶಶಿಕಾಂತ್ ಕುಲಕರ್ಣಿ, ಬಿಎಸ್‌ಪಿ ಕಾರ್ಯಕರ್ತ ಕೈಲಾಶ್ ಯಾದವ್ ಹಾಗೂ ಶೂಟರ್‌ಗಳಾದ ದಿನೇಶ್ ತಿವಾರಿ, ಪಿಂಟು ಸಿಂಗ್ ಮತ್ತು ಚೋಟೆ ಪಾಂಡೆ ವಿಚಾರಣೆ ಎದುರಿಸಿದ್ದರು.

ಹೈಕೋರ್ಟ್‌ಗೆ ಸಿಬಿಐ: 2009ರಲ್ಲಿ ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿದ್ದು, 2011ರಲ್ಲಿ ವಿಚಾರಣೆ ಆರಂಭವಾಗಿತ್ತು. ಪಾಟೀಲರಿಂದ ಜೀವ ಬೆದರಿಕೆ ಪಡೆದಿದ್ದ ಅಣ್ಣಾ ಹಜಾರೆ ಸೇರಿ 128 ಸಾಕ್ಷಿದಾರರನ್ನು ಸಿಬಿಐ ಪ್ರಸ್ತುತಪಡಿಸಿತ್ತು. ಇದೀಗ ತೀರ್ಪನ್ನು ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೆಟ್ಟಿಲೇರಲಿದೆ.

ಶೀಘ್ರ ಪ್ರಗತಿ ಪ್ರಕ್ರಿಯೆ ಪರಿವರ್ತನೆಗಳಿಗೆ ಸಾಕ್ಷಿ

• **ಹೂಗ್ಲಿ (ಪ.ಬಂಗಾಳ):** ಪ್ರಜಾತಾಂತ್ರಿಕ ಪ್ರಕ್ರಿಯೆಗಳ ಶಕ್ತಿ ಏನೆಂಬುದನ್ನು ಪ.ಬಂಗಾಳದಲ್ಲಿನ ತ್ವರಿತಗತಿಯ ಪ್ರಗತಿ-ಪರಿವರ್ತನೆಗಳು ಸಾಕ್ಷೀಕರಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಂಗಾಳದ ಜನರ ಹಣ ಸುಲಿಗೆ ಮಾಡಿದವರನ್ನು ಜೈಲಿಗೆ ಕಳುಹಿಸಲಾಗುವುದು ಎಂದು ಪ್ರಧಾನಿ ಗುಡುಗಿದರು. ಬಂಗಾಳದ ಜನತೆಯ ದುಡ್ಡನ್ನು ಯಾರೆಲ್ಲ ಸುಲಿಗೆ ಮಾಡಿದ್ದಾರೋ ಅವರೀಗ ದುಡ್ಡು ವಾಪಸ್ ನೀಡೋದು ಕಡ್ಡಾಯವಾಗಿದೆ. ಮಾಡಿರುವ ತಪ್ಪಿಗೆ ಅಪರಾಧಿಗಳು ಜೈಲು ಶಿಕ್ಷೆ ಕೂಡ ಅನುಭವಿಸಲೇಬೇಕು ಎಂದವರು ಹೂಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ ,ಪಶ್ಚಿಮ ಬಂಗಾಳ ದಿನಾಚರಣೆ ಕಾರ್ಯಕ್ರಮದಲ್ಲಿ ಹಿಂದಿನ ಸರಕಾರಗಳನ್ನು ತೀವ್ರವಾಗಿ ತರಾಟೆಗೆತ್ತಿಕೊಂಡರು.

ರಾಜ್ಯದಲ್ಲಿನ ಹಿಂದಿನ ಸರಕಾರಗಳು ಅಭಿವೃದ್ಧಿಯನ್ನು ಕಡೆಗಣಿಸುವ ಮೂಲಕ, ಜನರು ಅವಕಾಶಗಳ ಅರಸಿ ಬೇರೆ ರಾಜ್ಯಗಳಿಗೆ ವಲಸೆ ಹೋಗುವಂತಹ ದಯನೀಯ ಸನ್ನಿವೇಶ ಸೃಜಿಸಿದ್ದವು. ಹಿಂದಿನ ಸರಕಾರಗಳ ಕಾರ್ಯ ವೈಖರಿಗೆ ನಾವು ಸಾಕ್ಷಿಯಾಗಿದ್ದೇವೆ. ಅವರುಗಳು ಬಂಗಾಳವನ್ನು ತೀರಾ ಹಿಂದುಳಿದ ಹೀನಾಯ ಸ್ಥಿತಿಗೆ ದೂಡಿ, ನಾಡನ್ನು ಸಾಮೂಹಿಕ ನಿರ್ಗಮನದ ಭೂಮಿಯಾಗಿ ಪರಿವರ್ತಿಸಿದರು. ಇದೀಗ ಪ್ರಸಕ್ತ ಸರಕಾರದ ಆಳ್ವಿಕೆಯಲ್ಲಿ ಅಭಿವೃದ್ಧಿ ಪ್ರಯತ್ನಗಳಿಗೆ ಹೊಸ ಆಯಾಮ ದೊರೆತಿದೆ ಮತ್ತು ಪ.ಬಂಗಾಳವು ಆಶಾವಾದದ ನವ ಅನುಭವಕ್ಕೆ ಸಾಕ್ಷಿಯಾಗುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಗಡಿಗೆ ತಂತಿಬೇಲಿ ನಿರ್ಮಿಸಲು ಅಗತ್ಯ ಭೂಮಿ ಹಸ್ತಾಂತರಕ್ಕೆ ಹಿಂದಿನ ಸರಕಾರ ತಡೆಯೊಡ್ಡಿತ್ತು ಎಂದು ಆರೋಪಿಸಿದ್ದಾರೆ.

ಮೋದಿ ಯುದ್ಧದಿಂದ ದೂರ ಉಳಿದ ನಾಯಕ

• **ವಾಷಿಂಗ್ಟನ್:** ಭಾರತದ ಪ್ರಧಾನಿ ನರೇಂದ್ರ ಮೋದಿ ಮಹಾನ್ ನಾಯಕ, ಯುದ್ಧಗಳಿಂದ ದೂರ ಉಳಿಯುವುದು ಭಾರತದ ಬುದ್ಧಿವಂತಿಕೆಯ ನಿರ್ಧಾರ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಂಡಾಡಿದ್ದಾರೆ. ಶುಕ್ರವಾರ ತಡರಾತ್ರಿ ನೀಡಿದ ಸಂದರ್ಶನದಲ್ಲಿ ಭಾರತದೊಂದಿಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತ ಪ್ರಶ್ನೆಗೆ ಉತ್ತರಿಸಿದ ಅಧ್ಯಕ್ಷ ಟ್ರಂಪ್, ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಾವು ಹೆಚ್ಚು ಮೆಚ್ಚಿಕೊಳ್ಳುವ ವಿಶ್ವನಾಯಕರೆಂದು ಹೇಳಿದ್ದಾರೆ. ತಮ್ಮ ಪ್ರಭಾವಶಾಲಿ ನಾಯಕತ್ವದ ಗುಣ, ಸಾಮರ್ಥ್ಯ ಮತ್ತು ಫಲಿತಾಂಶಗಳಿಂದ ಈ ನಾಯಕರು ವಿಶೇಷ ಸ್ಥಾನ ಪಡೆದಿದ್ದಾರೆ.

ಮೋದಿ ಮಹಾನ್ ನಾಯಕ, ಅವರ ನೇತೃತ್ವದಲ್ಲಿ ಭಾರತ ಒಳ್ಳೆಯ ಬೆಳವಣಿಗೆಗಳನ್ನು ಕಾಣುತ್ತಿದೆ. ಯುದ್ಧಗಳಿಂದ ದೂರ ಉಳಿಯುವುದು ಅವರ ಬುದ್ಧಿವಂತಿಕೆಯ ನಡೆ. ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಇರುವ ಭಾರತವನ್ನು ಮುನ್ನಡೆಸುವ ಮೋದಿ ನಿಜಕ್ಕೂ ಅದ್ಭುತ ನಾಯಕ ಎಂದು ಟ್ರಂಪ್ ಶ್ಲಾಘಿಸಿದ್ದಾರೆ.

ಭಾರತದೊಂದಿಗೆ ನಾವು ಸಾಕಷ್ಟು ವ್ಯಾಪಾರ ಮಾಡುತ್ತೇವೆ. ಈಗ ಭಾರತದೊಂದಿಗೆ ನ್ಯಾಯಯುತ ವ್ಯಾಪಾರ ಮಾಡುತ್ತಿದ್ದೇವೆ. ಈ ಹಿಂದೆ ಭಾರತದವರು ನಮ್ಮೊಂದಿಗೆ ಹೆಚ್ಚು ಲಾಭದಾಯಕ ವ್ಯಾಪಾರ ಮಾಡುತ್ತಿದ್ದರು. ಅದಕ್ಕಾಗಿ ನಾನು ಭಾರತೀಯರನ್ನು ದೂರುವುದಿಲ್ಲ, ನಮ್ಮ ದೇಶದಲ್ಲಿದ್ದ ಮೂರ್ಖ ರಾಜಕಾರಣಿಗಳು ನಷ್ಟದ ವ್ಯಾಪಾರಕ್ಕೆ ಅನುಮತಿ ನೀಡಿದ್ದರು. ನಾವೀಗ ಉತ್ತಮ ವ್ಯಾಪಾರ ಮಾಡುತ್ತಿದ್ದೇವೆ. ಮೋದಿ ಒಬ್ಬ ಮಹಾನ್ ನಾಯಕ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ.

ದೇಗುಲದ ಛಾವಣಿ ಕುಸಿತ: ಏಳು ಸಾವು

• **ಪರಭಣಿ:** ಮಹಾರಾಷ್ಟ್ರದಲ್ಲಿ ಧಾರ್ಮಿಕ ಸಭೆಯ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿದ್ದ ಹನುಮಾನ್ ದೇವಸ್ಥಾನದ ಮೇಲ್ಛಾವಣಿ ಕುಸಿದು ಬಿದ್ದ ಪರಿಣಾಮ ಏಳು ಜನರು ಮೃತಪಟ್ಟಿದ್ದು, ಸುಮಾರು 30 ಜನರು ಗಾಯಗೊಂಡಿದ್ದಾರೆ. ಮಾನವತ್ ತಾಲೂಕಿನ ಉಕ್ಕಡಿ ಗ್ರಾಮದಲ್ಲಿ ಭಕ್ತರು ಆಧ್ಯಾತ್ಮಿಕ ಕಾರ್ಯಕ್ರಮಕ್ಕಾಗಿ ಜಮಾಯಿಸಿದ್ದಾಗ ಈ ಘಟನೆ ಸಂಭವಿಸಿದೆ. ಸ್ಥಳೀಯ ನಿವಾಸಿಗಳು, ಪೊಲೀಸ್ ಸಿಬ್ಬಂದಿ ಮತ್ತು ತುರ್ತು ಸೇವಾ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದವು. ಭಗ್ನಾವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದ ಜನರನ್ನು ಹೊರತೆಗೆಯಲು ರಕ್ಷಣಾ ಸಿಬ್ಬಂದಿ ಭಾರೀ ಯಂತ್ರೋಪಕರಣಗಳನ್ನು ಬಳಸಬೇಕಾಯಿತು. ಘಟನೆ ನಡೆದಾಗ ಕಟ್ಟಡ ನಿರ್ಮಾಣ ಹಂತದಲ್ಲಿದ್ದು, ಕುಸಿತಕ್ಕೆ ನಿಖರ ಕಾರಣವನ್ನು ಪತ್ತೆಹಚ್ಚಲು ಅಧಿಕಾರಿಗಳು ಅಧಿಕೃತ ತನಿಖೆಗೆ ಆದೇಶಿಸಿದ್ದಾರೆ.

ಗೃಹ ಸಚಿವ ಅಮಿತ್ ಶಾ ಬಣ್ಣನೆ | ಅಸಾಧ್ಯವೆನಿಸಿದ್ದ ಕಾರ್ಯಗಳು ಸಾಕಾರ

12 ವರ್ಷ ಸುವರ್ಣಾಕ್ಷರಗಳಲ್ಲಿ ದಾಖಲು

• **ಕೊಲ್ಹಾಪುರ:** ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶನಿವಾರ ಅಂಬಾಬಾಯಿ ಮಹಾಲಕ್ಷ್ಮೀ ದೇವಸ್ಥಾನ ಕಾರಿಡಾರ್ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮೋದಿ ನೇತೃತ್ವದಲ್ಲಿ ಭಾರತವು ಪುನರುತ್ಥಾನಗೊಂಡಿದ್ದು, ಜಾಗತಿಕ ಮಟ್ಟದಲ್ಲಿ ದೇಶದ ಗೌರವ ಹೆಚ್ಚಾಗಿದೆ ಎಂದರು.

ಸ್ವತಂತ್ರ ಭಾರತದ ಇತಿಹಾಸ ಬರೆಯುವಾಗ, ಬಲಿಷ್ಠ ಹಾಗೂ ಪುನರುತ್ಥಾನಗೊಂಡ ಭಾರತ ನಿರ್ಮಾಣ ಮತ್ತು ವಿಶ್ವದಾದ್ಯಂತ ದೇಶದ ಪ್ರತಿಷ್ಠೆ ಹೆಚ್ಚಿಸಿದ ಮೋದಿ ಆಡಳಿತದ 12 ವರ್ಷಗಳ ಅಧ್ಯಾಯವು ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ಶಾ ಹೇಳಿದರು.

ಕಳೆದ 12 ವರ್ಷಗಳಲ್ಲಿ ಅಸಾಧ್ಯವೆಂದು ಪರಿಗಣಿಸಲಾಗಿದ್ದ ಹಲವು ಕಾರ್ಯಗಳನ್ನು ಮೋದಿ ಸರಕಾರ ಸಾಕಾರಗೊಳಿಸಿದೆ. ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ಅಭಿವೃದ್ಧಿ, ಕೇದಾರನಾಥ, ಬದರಿನಾಥ, ಸೋಮನಾಥ ಮತ್ತು ಕಾಮಾಖ್ಯಾ ದೇವಾಲಯಗಳ ಅಭಿವೃದ್ಧಿ ಇದಕ್ಕೆ ನಿದರ್ಶನ ಎಂದು ತಿಳಿಸಿದರು.

ದೇಶದಲ್ಲಿ ಸಾಂಸ್ಕೃತಿಕ ಪುನರುತ್ಥಾನ: ಅಂಬಾಬಾಯಿ ದೇವಸ್ಥಾನ ಕಾರಿಡಾರ್ ಯೋಜನೆಯೂ ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಶಾ ಹೇಳಿದರು. ಸುಮಾರು 500 ಕೋಟಿ ರೂ. ವೆಚ್ಚದ ಈ ಯೋಜನೆಯನ್ನು 28,058 ಚದರ ಮೀಟರ್ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಏಳನೇ ಶತಮಾನದ ಐತಿಹಾಸಿಕ ದೇವಾಲಯವನ್ನು ಆಧುನಿಕ ಯಾತ್ರಾಕ್ಷೇತ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಕೃತಕ ಬುದ್ಧಿಮತ್ತೆ ಆಧಾರಿತ ಭದ್ರತಾ ವ್ಯವಸ್ಥೆ, ವಿದ್ಯುತ್ ದೀಪಾಲಂಕಾರ, ಪರಂಪರೆ ಗ್ಯಾಲರಿಗಳು, ಬೆಳಕು ಮತ್ತು ಧ್ವನಿ ಪ್ರದರ್ಶನ ಹಾಗೂ ಬಹುಉದ್ದೇಶಿತ ಸಭಾಂಗಣ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ.

ಮಹಾಲಕ್ಷ್ಮೀ ದೇವಸ್ಥಾನದ ಸುತ್ತಮುತ್ತಲಿನ 41 ದೇವಾಲಯಗಳನ್ನು ಪುರಾತತ್ವ ಇಲಾಖೆಯ ಸಲಹೆಯಂತೆ ಸಂರಕ್ಷಿಸಲಾಗುವುದು ಎಂದು ಅವರು ತಿಳಿಸಿದರು.

ಭಾರತ ಧರ್ಮಶಾಲೆ ಅಲ್ಲ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಬೆಂಬಲಿಸಿದ ಜನರಿಗೆ ಕೃತಜ್ಞತೆ ಸಲ್ಲಿಸಿದ ಶಾ, ದೇಶದಲ್ಲಿರುವ ಪ್ರತಿಯೊಬ್ಬ ಅಕ್ರಮ ನುಸುಳುಕೋರರನ್ನೂ ಗುರುತಿಸಿ ಹೊರದಬ್ಬಲಾಗುವುದು ಎಂದು ಘೋಷಿಸಿದರು. ನುಸುಳುಕೋರರನ್ನು ಮತಬ್ಯಾಂಕ್ ಆಗಿ ಪರಿವರ್ತಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು."ಭಾರತ ಧರ್ಮಛತ್ರವಲ್ಲ, ಈ ದೇಶಕ್ಕೆ ಸೇರಿದವರು ಮಾತ್ರ ಇಲ್ಲಿ ವಾಸಿಸುತ್ತಾರೆ. ಪ್ರತಿಯೊಬ್ಬ ನುಸುಳುಕೋರರನ್ನೂ ಗುರುತಿಸಿ ದೇಶದಿಂದ ಹೊರಹಾಕಲಾಗುವುದು ಎಂದು ಎಚ್ಚರಿಸಿದರು.

ಹಿಂದುಗಳು ಬಹುಸಂಖ್ಯಾತರಲ್ಲ: ಮೌಲಾನ

ಹಿಂದು ವಿಭಜನೆಗೆ ಕುತಂತ್ರ

• **ಲಖನೌ:** ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಲ್ಲವಂತೆ! ಹೀಗೆಂದು ಬೊಗಳೆ ಬಿಟ್ಟಿರುವ ಉತ್ತರಪ್ರದೇಶದ ಮೌಲಾನ ಖಲೀಲುರ್ ರಹಮಾನ್ ಸಜ್ಜದ್ ನೊಮಾನಿ ಹೊಸ ವಿವಾದ ಸೃಷ್ಟಿಸಿದ್ದಾನೆ. ಮೌಲಾನನದ್ದು ವಿಷಪೂರಿತ ಜಿಹಾದಿ ಮನಸ್ಥಿತಿ, ಇದು ಜಾತ್ಯತೀತತೆ ಸೋಗಿನಲ್ಲಿ ಹಿಂದುಗಳನ್ನು ವಿಭಜಿಸುವ ಪ್ರಯತ್ನವೆಂದು ಬಿಜೆಪಿ ಕಿಡಿಕಾರಿದೆ.

ಇತ್ತೀಚೆಗೆ ನಡೆದ ಇಸ್ಲಾಮಿಕ್ ಸಮ್ಮೇಳನವೊಂದರಲ್ಲಿ ಅಖಿಲ ಭಾರತ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಸದಸ್ಯ ಮೌಲಾನ ಸಜ್ಜದ್ ಮಾತನಾಡಿದ್ದು, ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಲ್ಲ ಎಂಬುದನ್ನು ಹಜರ್-ಎ-ಅಸ್ವದ್(ಬ್ಲ್ಯಾಕ್ ಸ್ಟೋನ್) ಮತ್ತು ಕಿಸ್ವಾ(ಕಾಬಾ ಬಟ್ಟೆ) ಮೇಲೆ ಕೈ ಇಟ್ಟು ಬೇಕಿದ್ದರೆ ಹೇಳಬಲ್ಲೆ ಎಂದು ಸವಾಲೊಡ್ಡಿದ್ದಾನೆ.

ಹಲವು ಸಮುದಾಯಗಳನ್ನು ಹಿಂದುಗಳಲ್ಲಿ ಸೇರಿಸಿಕೊಂಡು ಜನರ ದಾರಿ ತಪ್ಪಿಸುತ್ತಿದ್ದಾರೆ. ಸಿಖ್ಖರು, ಕ್ರಿಶ್ಚಿಯನ್ನರು, ಬೌದ್ಧರು, ಪರಿಶಿಷ್ಟ ಜಾತಿ(ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್‌ಟಿ), ಜಾಟ್, ತಮಿಳರು ಮತ್ತು ಲಿಂಗಾಯತರು ಹಿಂದುಗಳಲ್ಲ ಎಂಬ ಮಾತುಗಳನ್ನಾಡಿ ಮೌಲಾನಾ ಹಿಂದು ಜನಸಂಖ್ಯಾ ವಿಚಾರದಲ್ಲಿ ಅನಾವಶ್ಯಕ ಮೂಗು ತೂರಿಸಿದ್ದಾನೆ.

ವೋಟ್ ಬ್ಯಾಂಕ್ ರಾಜಕೀಯ: ಮೌಲಾನಾ ಸಜ್ಜದ್ ನೊಮಾನಿ ತನ್ನದು ವಿಷಪೂರಿತ ಜಿಹಾದಿ ಮನಸ್ಥಿತಿಯನ್ನು ತೋರಿಸಿದ್ದಾರೆ. ಕಳೆದ ವಿಧಾನಸಭೆ ಚುನಾವಣೆ ವೇಳೆ ಮಹಾ ವಿಕಾಸ್ ಅಘಾಡಿ(ಎಂವಿಎ)ಗೆ ಮತ ಚಲಾಯಿಸಲು ಮುಸ್ಲಿಮರಿಗೆ ಕರೆ ನೀಡಿದ್ದ ಮೌಲಾನಾ, ಹಿಂದುಗಳು ಸಂಪೂರ್ಣ ಒಡೆದುಹೋಗಿದ್ದಾರೆ. ಜಾತ್ಯತೀತತೆ ಸೋಗಿನಲ್ಲಿ ಹಿಂದುಗಳ ಒಗ್ಗಟ್ಟು ಒಡೆದು ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ಮೌಲಾನಾ ವಿವಾದ ಸೃಷ್ಟಿಸಿದ್ದಾರೆ ಎಂದು ಬಿಜೆಪಿ ನಾಯಕ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ರಾಮನಿಗಿಂತಲೂ ಶೂರ ಯಾರು?

ಮನ್ಮಥನಿಂದ ಪೀಡಿತನಾಗಿದ್ದರೂ ನಿಶ್ಚಲನಾದ ವ್ಯಕ್ತಿ.

ರಾಮನಿಗಿಂತಲೂ ಶೂರ ಯಾರಾದರೂ ಇದ್ದಾರೆಯೇ ಎಂದು ಯಾರಾದರೂ ಕೇಳಿದರೆ ಉತ್ತರ 'ಇಲ್ಲ' ಎಂಬುದೇ. ಶೂರನು ಯಾರು? ಎಂದು ಕೇಳಿದಾಗ 'ರಾಮನೇ' ಎಂಬುದಾಗಿ ಉತ್ತರ ಸಾಮಾನ್ಯ ಚಿಕ್ಕ ಮಗುವಿಗೂ ತಿಳಿದಿರುವ ವಿಷಯ. ಹೀಗಿರುವಾಗ ರಾಮನಿಗಿಂತಲೂ ಶೂರ ಯಾರು? ಎಂಬ ಪ್ರಶ್ನೆಗೆ ಇಲ್ಲಿನ ಉತ್ತರ ಚಿಂತನಾಪೂರ್ಣವಾಗಿದೆ. ಒಬ್ಬ ಶೂರನಾಗಲು ಏನು ಬೇಕು? ಅಂದರೆ ಅವನು ರಾಮನಿಗಿಂತಲೂ ಶ್ರೇಷ್ಠನಾಗಬೇಕು ಅಂತಾದರೆ ಯಾವ ಗುಣ ಇರಬೇಕು? ಅವನು ರಾಮನಿಗಿಂತಲೂ ಶೂರ ಎಂದಾಗಬೇಕಾದರೆ ಅವನು ಯಾವುದೇ ಕಾರಣಕ್ಕೂ ಮನ್ಮಥನಿಂದ ಅಥವಾ ಕಾಮಪೀಡಿತನಾಗದೇ ಇದ್ದರೆ ಮಾತ್ರ ಸಾಧ್ಯ ಎಂಬುದಾಗಿ ಇಲ್ಲಿ ಉತ್ತರವಿದೆ. ಶೂರ ಎಂದರೇನು? ಶೂರನೇ ಆಗಬೇಕಾದರೆ ಅವನು ಹೇಗೆ ಕಾಮವನ್ನು ಅಥವಾ ಮನ್ಮಥನನ್ನು ಹೇಗೆ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು ಎಂಬುದನ್ನೂ ಕೂಡ ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ. ಪರಾಕ್ರಮ ಬಲ ಇತ್ಯಾದಿ ಗುಣಗಳು ಬರಬೇಕಾದರೆ ಅವನ ಬುದ್ಧಿಯು ನಿಯಂತ್ರಣದಲ್ಲಿ ಇರಬೇಕು. ಯಾರ ಬುದ್ಧಿ ಸನ್ಮಾರ್ಗದಲ್ಲಿ ಇರುತ್ತದೆಯೋ ಅವನೇ ನಿಜವಾದ ಧೀರ. ಹಾಗಾಗಿ ಅಂತಹ ಶೂರನಾಗಬಲ್ಲವ ತನ್ನ ನಿಯೋಜಿತಕಾರ್ಯವನ್ನು ಉಚಿತವಾಗಿ ಮಾಡಬಲ್ಲ ಸಾಮರ್ಥ್ಯವನ್ನು ಸಂಪಾದನೆ ಮಾಡಿರುತ್ತಾನೆ. ಹಾಗಿಲ್ಲದೆ ಕಾಮಪರವಶನಾಗಿ ಅಥವಾ ಮೋಹದಿಂದ ಕೂಡಿದ್ದರೆ ಅವನು ಧೀರನಾಗಲು ಸಾಧ್ಯವಿಲ್ಲ. ಅವನು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದಾಗಿ ಒಂದು ಸುಭಾಷಿತ ಹೇಳುತ್ತದೆ- ''ಪ್ರಾಯಃ ಸಮಾಪನ್ನವಿಪತ್ತಿಕಾಲೇ ಧಿಯೋಽಪಿ ಪುಂಸಾಂ ಮಲಿನೀಭವಂತಿ'' ಅಂದರೆ ಧೀರರಾದವರೂ ಕೂಡ ವಿಪತ್ತಿನ ಕಾಲದಲ್ಲಿ ತನ್ನ ಬುದ್ಧಿಯ ಸ್ಥಿಮಿತತೆಯನ್ನು ಕಳೆದುಕೊಳ್ಳುತ್ತಾರೆ ಎಂಬುದಾಗಿ. ಇಲ್ಲಿ ರಾಮನನ್ನೇ ಉದಾಹರಣೆಯಾಗಿ ಕೊಡಲಾಗಿದೆ. ಸೀತೆಯು ಮಾಯಾಜಿಂಕೆಯನ್ನು ಕಂಡು ಅದು ತನಗೆ ಬೇಕೆಂಬುದಾಗಿ ಹಠ ಮಾಡುತ್ತಾಳೆ. ಒಂದು ಕ್ಷಣ ಯೋಚಿಸಿ ಮತ್ತೆ ಆ ಸೀತೆಯ ಬಯಕೆಯನ್ನು ಈಡೇರಿಸಲು ಮಾಯಾಜಿಂಕೆಯ ಹಿಂದೆ ರಾಮ ಧಾವಿಸುತ್ತಾನೆ. ವಸ್ತುತಃ ಅದು ಮಾಯಾಜಿಂಕೆಯೇ ಆಗಿತ್ತು. ಆದರೆ ರಾಮನಂತಹ ರಾಮನು ಕೂಡ ಆ ಕ್ಷಣದಲ್ಲಿ ತನ್ನ ಬುದ್ಧಿಯನ್ನು ಸ್ಥಿಮಿತವಾಗಿ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ, ಯಾಕೆಂದರೆ ಸೀತೆ ಮೇಲಿನ ಮೋಹ. ಅವಳ ಬಯಕೆಯನ್ನು ಈಡೇರಿಸುವುದೇ ಅವನ ಇಚ್ಛೆಯಾಗಿತ್ತು. ಅವನು ಸೀತೆಯ ಕಾಮನೆಗೆ ಅನುಸಾರವಾಗಿ ಅವಳ ಪ್ರೀತಿಗೆ ಮನಸೋತು ಮಾಯಾಜಿಂಕೆಯ ಹಿಂದೆ ಓಡಿದನು. ಅದರಿಂದ ರಾಮನು ಧೀರನಾದರೂ ತನ್ನ ಮಡದಿಯನ್ನು ಕಳೆದುಕೊಳ್ಳುವ ಸಂದರ್ಭ ಒದಗಿತು. ರಾಮನಂತಹವನಿಗೆ ಇಂತಹ ಬುದ್ಧಿಯು ಮಂಕಾಗುವ ಸಂದರ್ಭ ಬಂದಿದೆ ಎಂದಾದರೆ ಸಾಮಾನ್ಯ ವ್ಯಕ್ತಿಯ ಪಾಡೇನು! ಹಾಗಾಗಿ ಇಲ್ಲಿ ಹೇಳುವುದು ರಾಮನಿಗಿಂತಲೂ ಅವನು ಶೂರನಾಗಬೇಕು ಎಂದಾದರೆ ಆಸೆಯನ್ನು ಅಥವಾ ಮನ್ಮಥನಿಂದ ಪ್ರೇರಿತವಾದ ಕಾಮನೆಯನ್ನು ಅವನು ಬಿಡಬೇಕು. ಹಾಗೆ ಬಿಟ್ಟಾಗ ಮಾತ್ರ ಅವನು ತನ್ನ ಬುದ್ಧಿಯನ್ನು ಶುದ್ಧವಾಗಿ ಇಟ್ಟುಕೊಳ್ಳಲು ಸಾಧ್ಯ. ಯಾವಾಗ ಬುದ್ಧಿ ಶುದ್ಧವಾಗುತ್ತದೆಯೋ ಆಗ ಅದು ಕಾಮಧೇನುವಿನಂತೆ ಬೇಡಿದ್ದನ್ನು ಕೊಡಲು ಸಾಧ್ಯ. ಅದ್ದರಿಂದ ಕಾಮಪರವಶನಾಗದಿದ್ದರೆ ಅವನು ರಾಮನೇ ಎಂಬುದಾಗಿ ಇಲ್ಲಿ ಹೇಳಲಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಭೀಮ-ಸಹದೇವರ ದಿಗ್ವಿಜಯಗಳು

ಧರ್ಮರಾಜನ ಆಜ್ಞೆಗೆ ಅನುಸಾರವಾಗಿ ಮಹಾಪ್ರತಾಪಶಾಲಿಯಾದ ಶಿಶುಪಾಲನ ಬಳಿಗೆ ಭೀಮನು ಹೋದನು. ಭೀಮನು ಏನನ್ನು ಮಾಡಲಿರುವನೆಂಬುದನ್ನು ಕೇಳಿ ತಿಳಿದ ಚೇದಿರಾಜನಾದ ಶಿಶುಪಾಲನೂ ಸಹ ನಗರದಿಂದ ಹೊರಬಂದು ಭೀಮನನ್ನು ಎದುರುಗೊಂಡನು. ಕುರುಕುಲ ಶ್ರೇಷ್ಠನಾದ ಭೀಮನೂ ಚೇದಿಶ್ರೇಷ್ಠನಾದ ಶಿಶುಪಾಲನೂ ಕಲೆತು ಪರಸ್ಪರ ತಮ್ಮ ವಂಶಗಳ ಬಗ್ಗೆ ಕುಶಲಪ್ರಶ್ನೆಯನ್ನು ಮಾಡಿಕೊಂಡರು. ಆಗ ಶಿಶುಪಾಲನು ತನ್ನ ಚೇದಿರಾಜ್ಯವನ್ನು ಭೀಮನಿಗೊಪ್ಪಿಸಿ ನಗುತ್ತಾ, ಭೀಮನನ್ನು ನೀನೇನು ಮಾಡಲಿರುವೆ? ಎಂಬುದಾಗಿ ಕೇಳಿದನು. ಅದಕ್ಕೆ ಭೀಮನೂ ಧರ್ಮರಾಜನು ಮಾಡಹೊರಟಿರುವ ಯಜ್ಞದ ವಿಷಯವನ್ನು ಹೇಳಿದನು. ಅವನೂ ಆ ಮಾತುಗಳನ್ನು ಹಾಗೆಯೇ ಸ್ವೀಕರಿಸಿ, ತದನುಸಾರಿಯಾಗಿಯೇ ವರ್ತಿಸಿದನು. ಆಮೇಲೆ ಭೀಮನು ಅಲ್ಲಿಯೇ ಹದಿಮೂರು ರಾತ್ರಿಗಳನ್ನು ಕಳೆದನು. ಸತ್ಕಾರವನ್ನು ಪಡೆದು ತನ್ನ ಸೈನ್ಯಸಮೂಹಗಳೊಂದಿಗೆ ಶಿಶುಪಾಲನ ಸ್ಥಾನವನ್ನು ಬಿಟ್ಟು ಹೊರಟನು. ಆ ಬಳಿಕ ಭೀಮನು ಕುಮಾರದೇಶದ ಶ್ರೇಣಿಮಂತನನ್ನು ಜಯಿಸಿದನು. ಆಮೇಲೆ ಕೋಸಲರಾಜನಾದ ಬೃಹದ್ಬಲನನ್ನು ಗೆದ್ದನು. ಹೆಚ್ಚು ಕಷ್ಟವೇ ಪಡದೆ ಅಯೋಧ್ಯಾಧಿಪತಿಯಾದ ಹಾಗೂ ಬಲಶಾಲಿಯೂ ಧರ್ಮಜ್ಞನೂ ಆದ ದೀರ್ಘಯಜ್ಞನನ್ನು ಜಯಿಸಿದನು.

ಆಮೇಲೆ ಉತ್ತರ ಕೋಸಲಾಧಿಪತಿ, ಮಲ್ಲರಾಷ್ಟ್ರಾಧಿಪತಿಗಳನ್ನೂ, ಶುಕ್ತಿಮಂತ ಪರ್ವತ, ಹಿಮಾಲಯಪರ್ವತಗಳ ತಪ್ಪಲಿನ ಪ್ರದೇಶಗಳನ್ನೂ, ಕಾಶಿರಾಜನಾದ ಸುಬಾಹು, ಸುಪಾರ್ಶ್ವ ಪರ್ವತದ ಬಳಿಯಿದ್ದ ಕ್ರಥನೆಂಬ ರಾಜ, ಮತ್ಸ್ಯದೇಶ- ಮಲದದೇಶ-ನೇಪಾಳದೇಶ-ಪಶುಭೂಮಿಗಳ ರಾಜಯುಗಳು, ನಿಷಾದರ ರಾಜ, ವಿದೇಹ-ರಾಜನಾದ ಜನಕರನ್ನು ಇವರೆಲ್ಲರನ್ನೂ ಗೆದ್ದನು. ಶಕರನ್ನೂ ಬರ್ಬರರನ್ನೂ ಮೋಸದಿಂದ, ಗೆದ್ದುಕೊಂಡನು. ವಿದೇಹದೇಶದ ಸುತ್ತಲಿನ ಏಳು ಕಿರಾತಾಧಿಪತಿಗಳನ್ನು ಜಯಿಸಿದನು. ಬಳಿಕ ಸುಹ್ಮ ಪ್ರಸುಹ್ಮರಾಜರನ್ನು ಸೋಲಿಸಿದನು. ಜರಾಸಂಧಪುತ್ರನನ್ನು ಕಪ್ಪಕಾಣಿಕೆಯನ್ನಾಗಿ ಮಾಡಿಕೊಂಡನು. ಹಾಗೆಯೇ ಕರ್ಣನೆಂಬ ಮತ್ತೊಬ್ಬ ರಾಜ, ಮೋದಾಗಿರಿಯ ರಾಜರನ್ನು ಸೋಲಿಸಿದನು. ಪೌಂಡ್ರಕ-ವಾಸುದೇವನನ್ನೂ ಜಯಿಸಿ ವಂಗದೇಶದ ಮೇಲೆ ಆಕ್ರಮಣ ಮಾಡಿದನು. ಸುತ್ತಲಿನ ಮ್ಲೇಚ್ಛ-ರಾಜರನ್ನೆಲ್ಲಾ ಬಗ್ಗುಬಡಿದನು. ಹೀಗೆ ಹಲವು ಅರಸರನ್ನು ಮೆಟ್ಟಿ ಅವರ ಐಶ್ವರ್ಯವನ್ನು ಸೆಳೆದುಕೊಂಡು, ಮ್ಲೇಚ್ಛರಿಂದ ಕರವನ್ನೂ ನಾನಾರತ್ನಗಳನ್ನೂ ಚಂದನ-ಅಗರು-ವಸ್ತ್ರಗಳನ್ನೂ ಮಣಿ-ಮುತ್ತು-ಕಂಬಳಿಗಳನ್ನೂ ಕಾಂಚನ-ರಜತ-ವಿದ್ರುಮ(ಹವಳ)ಗಳನ್ನೂ ಕೋಟಿಸಂಖ್ಯೆಯಲ್ಲಿ ಪಡೆದನು. ಇಂದ್ರಪ್ರಸ್ಥಕ್ಕೆ ಹಿಂದಿರುಗಿ ಧರ್ಮರಾಜನಿಗೆ ಎಲ್ಲವನ್ನೂ ಒಪ್ಪಿಸಿದನು ಭೀಮ. ಇತ್ತ ಸಹದೇವನು ಧರ್ಮರಾಜನಿಂದ ಸಮ್ಮಾನಿತನಾಗಿ, ದೊಡ್ಡಸೈನ್ಯದೊಂದಿಗೆ ದಕ್ಷಿಣದಿಕ್ಕಿಗೆ ಹೊರಟನು. ಮೊಟ್ಟಮೊದಲು ಅವನು ಶೂರಸೇನರನ್ನು ಜಯಿಸಿದನು. ಆಮೇಲೆ ಮತ್ಸ್ಯರಾಜನನ್ನು, ಬಳಿಕ ಅಧಿರಾಜರಿಗೆ ಅಧಿಪತಿಯಾದ ದಂತವಕ್ತ್ರನನ್ನು ಸೋಲಿಸಿದನು. ಅವನಿಂದ ಕರವನ್ನು ಸ್ವೀಕರಿಸಿ ಅದೇ ರಾಜ್ಯದಲ್ಲೇ ಅವನನ್ನು ಪ್ರತಿಷ್ಠಾಪಿಸಿದನು. ಆಮೇಲೆ ಅಪರ-ಮತ್ಸ್ಯ, ನಿಷಾದದೇಶ, ಗೋಶೃಂಗಪರ್ವತ ಮುಂತಾದವನ್ನು ವಶಪಡಿಸಿಕೊಂಡನು.

ಸಹದೇವನು ಕುಂತಿಭೋಜನ ಮೇಲೆ ಸೆಣಸಲು ಹೋಗುತ್ತಿದ್ದಂತೆಯೇ, ಆತನೇ ಈತನನ್ನು ಪ್ರೀತಿಯಿಂದ ಸ್ವಾಗತಿಸಿ ಆತನ ಶಾಸನವನ್ನು ಒಪ್ಪಿಕೊಂಡನು. ಆಮೇಲೆ ಚರ್ಮಣ್ವತೀನದಿಯ ಬಳಿಯ ರಾಜಸೇಕ-ಅವರಸೇಕರಾಜ್ಯಗಳ ರಾಜರು, ಮತ್ತೆ ಹಲವು ಅರಸರು, ಭೀಷ್ಮಕರಾಜ, ಪೂರ್ವಕೋಸಲದ ರಾಜ, ಇನ್ನಿತರ ನಾನಾರಾಜರುಗಳನ್ನು ಸೋಲಿಸಿ ಅವರಿಂದ ಕಪ್ಪಕಾಣಿಕೆಗಳನ್ನು ಪಡೆದನು. ಪುಳಿಂದರನ್ನು ಜಯಿಸಿದನು. ಬಳಿಕ ಕಿಷ್ಕಿಂಧೆಗೂ ಹೋದನು. ವಾನರರಾಜರಾದ ಮೈಂದ-ದ್ವಿವಿದರೊಂದಿಗೆ ಏಳು ದಿನಗಳ ಯುದ್ಧವಾಯಿತು. ಅವರು ಸೋಲದಿದ್ದರೂ ಸಹದೇವನ ವಿಷಯದಲ್ಲಿ ಸಂತೋಷಪಟ್ಟು, ಹೀಗೆ ಹೇಳಿದರು: ''ಪಾಂಡವಶ್ರೇಷ್ಠನಾದ ಸಹದೇವನೇ, ಇವೆಲ್ಲ ರತ್ನಗಳನ್ನೂ ಸಾಗಿಸು. ಧರ್ಮರಾಜನ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ.''

ಪೇಷೆಂಟಿಗೆ ಅಟೆಂಡರಾಗುವುದೆಂದರೆ...



ವಕ್ರದೃಷ್ಟಿ

• ಎನ್. ರಾಮನಾಥ್

anakuramanath@gmail.com

ಸೀನು ಆಸ್ಪತ್ರೆಗೆ ಸೇರಿದ. ಅವನನ್ನು ನೋಡಿಕೊಳ್ಳುವ ರಾತ್ರಿಪಾಳಿ ನನ್ನದಾಯಿತು. ವಾರ್ಡ್‌ನ ಸುತ್ತಲೂ ಕಣ್ಣಾಡಿಸಿದೆ. ಕೆಲವು ಪೊಲೀಸ್ ಠಾಣೆಗಳಲ್ಲಿ ಇನ್ಸ್‌ಪೆಕ್ಟರ್‌ನ ಮೇಜಿನ ಮುಂದೆ ಕುರ್ಚಿಗಳು ಇರುವುದಿಲ್ಲ. ''ಬಂದ ಕಳ್ರು ಕಾಕ್ರು ಎಲ್ರಿಗೂ ಕುರ್ಚಿ ಕೊಟ್ರೆ ತಲೆಮೇಲೆಕೂತ್ಕೋತಾರೆ. ಆಯಿಲರು ನಿಂತಿರೋದೇಸು'' ಎಂಬುದು ಅಲ್ಲಿನ ಅಭಿಪ್ರಾಯವಂತೆ. ಈ ವಾರ್ಡ್‌ನಲ್ಲಿಯೂ ''ಪೇಷಂಟ್‌ನ ನೋಡ್ಕೊಂಡವ್ರು ನಿಂತು ನೋಡಿ ಹೋಗ್ತಿರ್ಬೇಕಷ್ಟೆ'' ಎಂಬ ಅಲಿಖಿತ ನಿಯಮ ಇದ್ದಂತಿತ್ತು.

''ನೋಡ್ಕೊಂಡವ್ರಿಗೆ ಚೇರ್ ಬೇಡ ಬಿಡಿ. ಆದರೆ ರಾತ್ರಿಯ ಅಟೆಂಡರ್ ಮಲಗಕ್ಕೆ...?'' ಎಂದೆ. ''ಮಲಗ್ಬೇಕಾದ್ರೆ ಮನೇಲೇ ಇರಲಿ. ಇಲ್ಲಿ horizontal ಆದವರಿಗೆಲ್ಲ ನರ್ಸಿಂಗ್ ಹೋಂ ಚಾರ್ಜ್ ಅನ್ವಯ ಆಗತ್ತೆ. Vertical ಮಾತ್ರ ಫ್ರೀ'' ಎಂದ ಆಸ್ಪತ್ರೆಯವ.

'ಒನ್ ಬೈ ಟೂ ವಾರ್ಡ್' ಆಗಿದ್ದ ಆ ಕೊಠಡಿಯಲ್ಲಿದ್ದ ಮತ್ತೊಬ್ಬ ರೋಗಿಯ ಅಟೆಂಡರ್ ಕುರ್ಚಿಯೊಂದರ ಮೇಲೆ ಕುಳಿತು ಮೊಬೈಲ್ ಪರದೆಯಲ್ಲಿ ನಿರತರಾಗಿದ್ದರು. ''ಈ ಕುರ್ಚಿ ಎಲ್ಲಿತ್ತು ನಿಮ್ಗೆ?'' ಎಂದೆ. ಋಷಿಮುನಿಗಳು ತಪಸ್ಸಿನಲ್ಲಿ ನಿರತರಾದಷ್ಟೇ ಗಾಢವಾಗಿ ಕರವಾಣಿ(ಮೊಬೈಲ್) ಪರದೆಯಲ್ಲಿ ಮುಳುಗಿದ್ದ ಅವರಿಗೆ ನನ್ನ ಧ್ವನಿ ತಲುಪಲಿಲ್ಲವೆನಿಸುತ್ತದೆ.

ಪ್ರಶ್ನೆಯನ್ನು ರಿಪೀಟಿಸಿದೆ. ಅವರಿಂದ ನನಗಾದುದು ಶೂನ್ಯ ಸಂಪಾದನೆ ಅಷ್ಟೆ. ಅಟೆಂಡರ್ ಆಗಿ ಕುಳಿತ ಇವರ ಗಮನವನ್ನು ಸೆಳೆಯಬೇಕಾದರೆ ರೋಗಿಯು ಇವರಿಗೆ ಕರೆ ಮಾಡಬೇಕು ಅಥವಾ ಮೆಸೇಜ್ ಕಳಿಸಬೇಕಷ್ಟೆ ಎಂದುಕೊಳ್ಳುತ್ತಲೇ ವಾರ್ಡಿನಿಂದ ಹೊರಬಂದು ಆಸ್ಪತ್ರೆ ಕಣ್ಣಾಡಿಸಿದೆ. ರಿಸೆಪ್ಷನ್‌ನಲ್ಲಿ ಅವರು ಕುಳಿತ ಮಾದರಿಯ ಚೇರುಗಳಿದ್ದವು. ಸುತ್ತಲೂ ನೋಡಿದೆ. ಯಾರೆಂದರೆ ಯಾರೂ ಕಾಣಲಿಲ್ಲ. ವಾರಸುದಾರರು ಗೋಚರಿಸದಂತಹ ವಸ್ತುಗಳೆಲ್ಲವೂ ನನ್ನದೇ ಎಂಬ ಧೋರಣೆಯುಳ್ಳವನು ಎರಡು ಕುರ್ಚಿಗಳನ್ನು ಒಳಕ್ಕೆ ರವಾನಿಸಿಕೊಂಡು, ಒಂದರ ಮೇಲೆ ಕುಳಿತು ಇನ್ನೊಂದರ ಮೇಲೆ ಕಾಲು ಚಾಚಿಕೊಂಡು ಅರ್ಧಕೋಣಾಸನದಲ್ಲಿ ಕತ್ತನ್ನು ತಿರುಗಿಸಿ ಸೀನುವನ್ನು ಗಮನಿಸತೊಡಗಿದೆ.

ಟ್ಯೂಬಾಭರಣಭೂಷಿತನಾದ ಸೀನುವನ್ನು ಶ್ರೀರಂಗಪಟ್ಟಣದ ರಂಗನಾಥಾಸನದಲ್ಲಿ ಮಲಗಿಸಿದ್ದರು. ಆ ರಿಕ್ಲೈನಾಸನವು ತನಗೆ ಮೆಚ್ಚಿಗೆಯಾಗಿದೆಯೆಂದು ಸೀನುವು ಗೊರಕೆಯ ಮೂಲಕ ತೋರ್ಪಡಿಸುತ್ತಿದ್ದ. ಕೊಂಚ ಸಮಯ ಕಳೆಯಿತು. ವಾರ್ಡಿನ ಪ್ರಶಾಂತತೆಯು ಮಂಪರು ಮೂಡಿಸುವಂತಿದ್ದು, ಅದರ ಪ್ರಭಾವ ನಾನು ತಲೆದೂಗುತ್ತಾ 'ಚಲಕಂಠಾಸನ'ದಲ್ಲಿ ಕುಳಿತೆ. ಕ್ರಮೇಣ ಚಲಕಂಠಾಸನವು 'ಮುಂದುಬಂಡಾಸನ'ಕ್ಕೆ ಎಡೆಮಾಡಿಕೊಟ್ಟು, ಕುಳಿತಲ್ಲೇ ತೂಕಡಿಸುವ 'ಆಫೀಸ್ ನಿದ್ರಾಸನ'ದತ್ತ ನನ್ನನ್ನು ಒಯ್ಯಿತು.

ಆಸ್ಪತ್ರೆಯ ಪಕ್ಕದಲ್ಲಿ ಸಾ ಮಿಲ್ ಇದ್ದಿತೆನಿಸುತ್ತದೆ. ಯಾವುದೋ ಅರ್ಜೆಂಟ್ ಗಿರಾಕಿಗೆಂದು ಆ ಹೊತ್ತಿನಲ್ಲಿ ಮರ ಕೊಯ್ಯಲು ಆರಂಭಿಸಿದ್ದರು. ಆ ಗರಗಸದ ಸದ್ದಿಗೆ ನಿದ್ರಾಸನದಿಂದ ಥಟ್ಟನೆ 'ಹಿಂದುಬಂಡಾಸನ'ಕ್ಕೆ ತಲುಪಿ ನೇರಾಸನದಲ್ಲಿ ಕುರ್ಚಿಗೆ ಒರಗಿದೆ. ಒರಬರುತ್ತಾ ಹೆಚ್ಚಾದ ಸದ್ದಿಗೆ ಸೀನುವು ಎಚ್ಚರಗೊಳ್ಳುವನೇನೋ ಎಂದು ಕಳವಳಗೊಂಡು ಅವನತ್ತ ದೃಷ್ಟಿ ಬೀರಿದೆ. 'ರಂಗನಾಥಾಸನ'ದಿಂದ 'ಎಡಪಾರ್ಶ್ವಕೋಣಾಸನ'ಕ್ಕೆ ಬದಲಾಗಿದ್ದ ಅವನ ತುಟಿಗಳು ಕಂಪನಾಸನಕ್ಕೆ ಒಳಗಾಗುತ್ತಿದ್ದವು; ಮೂಗಿನ ಹೊಳ್ಳೆಗಳು 'ಅರಳಾಸನ'ದಲ್ಲಿ ಹಿಗ್ಗಿದ್ದವು. ನಿಜಾರ್ಥದಲ್ಲಿ 'ಸೌಂಡ್ ಸ್ಲೀಪ್'ನಲ್ಲಿದ್ದ ಸೀನುವಿನಿಂದ ದೃಷ್ಟಿಯನ್ನು ಸಮಾನದುಃಖಿಯಾದ ಪಕ್ಕದ ಬೆಡ್ಡಿನ ಅಟೆಂಡರನತ್ತ ಹರಿಸಿದೆ.

ನನ್ನ ಎಣಿಕೆ ತಪ್ಪಾಗಿತ್ತು. ಅವನು ಸಮಾನದುಃಖಿಯಾಗಿರಲಿಲ್ಲ, ಗರಗಸದ ಸದ್ದನ್ನು ಹೊರಡಿಸುತ್ತಿದ್ದುದು ಅವನೇ!

ಕರವಾಣೀಕ್ಷಣಾಸನದಿಂದ 'ಅರೆಸ್ಪಂದಾಸನ'ಕ್ಕೆ ಕುಸಿದು ಪವಡಿಸಿದ್ದ ಅವನಿಂದ ಸಾ ಮಿಲ್ ಸದ್ದು ಹೊರಡುತ್ತಿತ್ತು. ನನ್ನ ಜೇಬಿನಿಂದ ಕರ್ಚೀಫನ್ನು ಹೊರತೆಗೆದು, ತುದಿಯನ್ನು ಚೂಪಾಗಿಸಿ, ಅವನ ಮೂಗಿನ ಹೊಳ್ಳೆಯೊಂದನ್ನು ಅದರಿಂದ ಚುಚ್ಚಿದೆ. ಸೈಲೆನ್ಸರ್ ಅಳವಡಿಸಿದ ಬೈಕಿನಂತೆ ಸಾ ಮಿಲ್‌ನ ಸದ್ದು ಜನರೇಟರ್‌ನ ಸದ್ದಿನ ಮಟ್ಟಕ್ಕೆ ಇಳಿಯಿತು.

ಯಥಾಸ್ಥಾನಕ್ಕೆ ಮರಳಿ ಪಾದಚಾಚಾಸನದಲ್ಲಿ ಕುಳಿತೆ. ಬೆನ್ನುಹುರಿಯ ಕೆಳಭಾಗಕ್ಕೆ ಗಾಂಧೀಜಿಯ ಬಗ್ಗೆ ತಿಳಿದಿತ್ತೆ? ಅದು ಸ್ವಾತಂತ್ರ್ಯಹೋರಾಟದ ಪಾಠವನ್ನು ಮನನ ಮಾಡಿಕೊಂಡಿತ್ತೆ? ಹೇಗೆನಿಸುತ್ತದೆ. ಏಕೆಂದರೆ ಆ ಕ್ಷಣದಲ್ಲಿ ಆ ಭಾಗವು 'ಅಸಹಕಾರ ಚಳುವಳಿ'ಯನ್ನು ಆರಂಭಿಸಿತ್ತು.

'ಈ ಖಾತೆ ಕೊಟ್ಟರೆ ರಾಜೀನಾಮೆ ನೀಡುವೆ. ಆ ಖಾತೆ ಕೊಟ್ಟರೆ ಜೊತೆಗಿರುವೆ' ಎಂದು ಎಲ್ಲಿ 'ಮಿನಿಸ್ಟರ್ ಖಾತೇ ಕೀ ಲಿಯೇ' ಅವಕಾಶ ಸಿಗುವುದೋ ಆ ಖಾತೆಯನ್ನೇ ಕೇಳುವ ಸಚಿವರು ಪೊಸಿಷನ್ ಶಿಫ್ಟ್ ಆದಾಗ ತೃಪ್ತರಾಗುವ ರೀತಿಯಲ್ಲಿಯೇ ನಾನೂ ಪೊಸಿಷನ್ ಚೇಂಜ್ ಮಾಡಿದರೆ ಅಸಹಕಾರ ಚಳುವಳಿ ಬಂದ್ ಆದೀತೆಂದು 'ಏಕಪಾರ್ಶ್ವಾಸನ'ದಲ್ಲಿ ಕುಳಿತೆ. ಅಸಹಕಾರ ಕೊಂಚ ಕಡಿಮೆಯಾಯಿತು. ಸೀನುವಿನ ಬಂದುಬಿಟ್ಟ 'ರಾಗಾಸನ' ಹಾಗೂ ಸಹಅಟೆಂಡರನ ಜನರೇಟರ್ ಸದ್ದಾಸನಗಳ ಜೋಡಿಮೇಳವು, ದೊಡ್ಡಂಗಡಿಯ ಯಂತ್ರಚಾಲಿತ ರೋಲಿಂಗ್ ಶಟರನ್ನು ನಿಧಾನವಾಗಿ ಕೆಳಗಿಳಿಸುವಂತೆ, ನನ್ನ ರೆಪ್ಪೆಗಳನ್ನು ಕೆಳಕ್ಕೆಳೆದವು. ಎಡಗೈಯನ್ನು ಕೆನ್ನೆಗಾನಿಸಿ 'ಹಸ್ತಾಧಾರಿತಕಪೋಲಾಸನ'ದಲ್ಲಿ ತಿರುಗಿ ಮಲಗಿದೆ. ಕಪಾಸನದ ಭಂಗಿಗೆ ಬರುವಷ್ಟರಲ್ಲಿ ಆಸ್ಪತ್ರೆಯ ಎದುರಿನ ರೈಲ್ವೇಹಳಿಯ ಮೇಲೆ ಜೋಡಿ ಗೂಡ್ಸ್ ಟ್ರೈನ್ ಹೋದಂತಹ ಸದ್ದಿಗೆ ಬೆಚ್ಚಿ ಎದ್ದೆ.

ಯಾವುದೇ ಟ್ರೈನ್ ಒಂದು ಸ್ಥಳವನ್ನು ದಾಟಬೇಕಾದರೆ ಮೂರು ನಿಮಿಷಗಳು ಹಿಡಿದಾವು. ಐದು ನಿಮಿಷಗಳಾದರೂ ಈ ಟ್ರೈನ್‌ಗಳ ಸದ್ದು ಕೇಳಿಬರುತ್ತಲೇ ಇತ್ತು. 'ಎಷ್ಟು ದೊಡ್ಡ ಟ್ರೈನ್ ಇದು!' ಎಂದು ವಿಸ್ಮಿತನಾಗಿಯೇ ಅರೆನಿಮೀಲಿತ ಚಕ್ಷುರಾಸನದಲ್ಲಿ ಒರಗಿದೆ. ಸ್ಟೈನಲ್ ಕಾರ್ಡಿನ ಬುಡವು ತನ್ನ ಅಸಹಕಾರ ಚಳುವಳಿಯನ್ನು ಮತ್ತೆ ಆರಂಭಿಸಿತು.

ಎದ್ದು ಕಿಟಕಿಯ ಆಚೆಗೆ ದೃಷ್ಟಿ ಹಾಯಿಸಿದೆ. 'ಈ ಇಡೀ ಏರಿಯಾದಲ್ಲಿ ರೈಲ್ವೇಟ್ರ್ಯಾಕ್ ಇಲ್ಲ' ಎಂದು ನೆನಪಾಯಿತು. ''ನಿಮ್ಮಲ್ಲೇ ಹುದುಗಿರುವುದನ್ನು ಹೊರಗೆಲ್ಲೋ ಹುಡುಕುತ್ತೀರಿ'' ಎಂದು ನೆಮ್ಮದಿಯ ಬಗ್ಗೆ ಗುರುಗಳೊಬ್ಬರು ಹೇಳಿದ್ದರು. ನೆಮ್ಮದಿಗೆ ಅನ್ವಯವಾಗುವುದು ಸದ್ದಿಗೂ ಅನ್ವಯವಾದೀತೆಂದು ಕರವಾಣಿದಾಸನತ್ತ ದೃಷ್ಟಿ ಹಾಯಿಸಿದೆ. ಅವನ ಕಿವಿಯಿಂದ ಇಯರ್ ಫೋನ್ ಕಳಚಿದ್ದಿತ್ತು. ಆದರೆ ಜೋಡಿ ಗೂಡ್ಸ್ ಟ್ರೈನ್ ಸದ್ದು ಅಲ್ಲಿಂದಾಗಲಿ, ಅವನಿಂದಾಗಲಿ ಹೊಮ್ಮುತ್ತಿರಲಿಲ್ಲ. ಸೀನುವಿನತ್ತ ನೋಡಿದೆ. ಅವನದೇನಿದ್ದರೂ ಮಂದ್ರಸ್ಥಾಯಿಯೇ. ವಿವಾಹಿತ ಸೀನುವಿಗೆ ದಿನದಲ್ಲಿ ಗಟ್ಟಿಯಾಗಿ ಮಾತನಾಡಲು ಅನುಮತಿ ಇಲ್ಲ. ಅಂತೆಯೇ ನಿದ್ರೆಯಲ್ಲೂ ಗಟ್ಟಿಯಾಗಿ ಗೊರಕೆ ಹೊಡೆಯಲು ಅನುಮತಿ ಇಲ್ಲ!

ಅಟೆಂಡರನಿಂದ ಅಟೆಂಡೆಡ್ಡಿನತ್ತ ಗಮನ ಹರಿಸಿದೆ. ಸುದೀರ್ಘವಾಗಿ ಉಸಿರನ್ನು ಎಳೆದೆಳೆದು ಬಿಡುತ್ತಿದ್ದ ಅವನು ಉಸಿರೆಳೆದುಕೊಂಡಾಗ ಒಂದು ಗೂಡ್ಸ್ ಟ್ರೈನ್, ಉಸಿರು ಬಿಟ್ಟಾಗ ಇನ್ನೊಂದು ಗೂಡ್ಸ್ ಟ್ರೈನಿನ ಸದ್ದು ಹೊರಡುತ್ತಿದ್ದವು. ಅರೆಲಂಬಾಸನದಲ್ಲಿ ಮಲಗಿದ್ದ ಅವನ ಮಂಚದ ತಿರುಗಣೆಯನ್ನು ತಿರುಗಿಸಿ ಅವನನ್ನು ಸಮಕೋನಾಸನಕ್ಕೆ ಇಳಿಸಿದೆ. ಅಲುಗಾಟದ ಕಾರಣ ಗೂಡ್ಸ್ ಟ್ರೈನ್ ಸದ್ದುಗಳು ತನ್ನ ಲಾಸ್ಟ್ ಸ್ಟೇಷನ್ ತಲುಪಿತು.

ಮತ್ತೆ ಯಥಾಸ್ಥಾನಕ್ಕೆ ಮರಳಿ, ಈ ಬಾರಿ ಬಲಹಸ್ತಕಪೋಲಾಧಾರಾಸನದಲ್ಲಿ ಮಲಗಿದೆ. ಅದೇ ಸಮಯದಲ್ಲಿ ಸೀನುವು 'ಟ್ಯೂಬುಮುಕ್ತಾಸನ'ವನ್ನು ಹೊಂದಬೇಕೆಂದು ನಿರ್ಧರಿಸಿ ತನ್ನ ಟ್ಯೂಬನ್ನು ಕಿತ್ತುಕೊಳ್ಳಲು ಕೈಹಾಕಿದ. ಎದ್ದು ಅವನ ಕೈಬೆರಳುಗಳನ್ನು 'ಟ್ಯೂಬುಗ್ರಹಣಾಸನ'ದಿಂದ 'ಮುಕ್ತಾಸನ'ಕ್ಕೆ ತಂದೆ. ಸೀನು 'ಪ್ರತಿಬಿಂಬಾಸನ'ದಲ್ಲಿ ಕುಳಿತ. ಅವನ ಕಂಠದ ನರಗಳು 'ಉಚ್ಛ್ವಾಸನ'ದಲ್ಲಿ ಹೊರಗಿ ಏರೋಪ್ಲೇನ್ ಒಕ್ಕೂ ನೀಡಿದವು. ಸೀನುವನ್ನು 'ರಿಕ್ಲೈನಾಸನ'ದಿಂದ ಕ್ರಮೇಣ 'ಸಮಕೋನಾಸನ'ಕ್ಕೆ ತಂದು, ಸಡಿಲವಾಗಿದ್ದ ಟ್ಯೂಬನ್ನು ಭದ್ರಗೊಳಿಸಿ, ಅವನ ಉಸಿರಾಟವು ನಿದ್ರಾಂಗನೆಯನ್ನು ಆಲಿಂಗಿಸಿರುವುದನ್ನು ಸೂಚಿಸುವ ಮಟ್ಟಕ್ಕೆ ಲಯವನ್ನು ಹೊಂದಿದ ಮೇಲೆ ನನ್ನ ಕುರ್ಚಿಗೆ ಹಿಂತಿರುಗಿ, ಈ ಬಾರಿ ಮುಂದಿನ ಕುರ್ಚಿಯ ಆರ್ಮ್ ರೆಸ್ಟ್‌ಗಳ ಮೇಲೆ ಮೊಳಕೈಗಳನ್ನೂರಿ, ಬೊಗಸೆಗಳನ್ನು ಹೆಣೆದುಕೊಂಡು 'ಅಂಜಲೀಬದ್ಧಾಸನ'ದಲ್ಲಿ ಶಿರವಿರಿಸಿ ನಿದ್ರಾದೇವಿಯಾಗಿ ಕಾಯತೊಡಗಿದೆ. ಈ ಬಾರಿ ಗೂಡ್ಸ್ ಟ್ರೈನ್ ಬರಲಿಲ್ಲ, ಸಾ ಮಿಲ್‌ನ ಗರಗಸದ ಸದ್ದೂ ಇರಲಿಲ್ಲ. ಪ್ರಶಾಂತವಾದ ವಾತಾವರಣವಿರಲ್ ಬಾರದಿರ್ಪಳೇಕೆ ನಿದ್ರಾದೇವಿ ಸಮೀಪಕೆ? ಬಂದಳು. ಅವಳ ವಶವಾದೆ.

ಇದ್ದಕ್ಕಿದ್ದಂತೆ ನನ್ನ ಮೂಗು ಮುಂದಿನ ಕುರ್ಚಿಯ ಮಧ್ಯಭಾಗಕ್ಕೆ ಬಡಿಯಿತು. ನಾನು ಕುಳಿತಿದ್ದ ಕುರ್ಚಿಯು ಲಘುಕೋನಾಸನಕ್ಕೆ ಬಾಗಿತು. ಸಂಭಾಳಿಸಿಕೊಳ್ಳಬಯಸುತ್ತಿದ್ದಾಗ ಮುಂದಿನ ಕುರ್ಚಿಯು ವಿಶಾಲಕೋನಾಸನಕ್ಕೆ ಚಾಚಿಕೊಂಡಿತು. ನನ್ನ ಎಡಮೊಣಕೈ ಕುರ್ಚಿಯ ಹಿಡಿಯಿಂದ ಜಾರಿದುದೇ ಈ ಎಲ್ಲಕ್ಕೂ ಕಾರಣವಾಯಿತೆಂದು ಅಲ್ಲಿನ ಕಿತ್ತ ಚರ್ಮವು ಸಾಕ್ಷಿ ಹೇಳುತ್ತಿತ್ತು.

''ನಿದ್ರೆ ಮಾಡೋದಾದ್ರೆ ಇಲ್ಯಾಕ್ ಬಂದೆಯೋ?'' ಎಂಬ ಸೀನುವಾಣಿಯು ನನ್ನನ್ನು ಪೂರ್ಣವಾಗಿ ಎಚ್ಚರಗೊಳಿಸಿತು. ಟೈಂ ನೋಡಿದೆ. ಸರಿರಾತ್ರಿ ಮೂರುಗಂಟೆ. ಮೊಬೈಲ್ ಆನ್ ಮಾಡಿ ವರ್ಡ್ ಗೇಮ್‌ನಲ್ಲಿ ನಿರತನಾದೆ. ಮಹಡಿಯ ಮೇಲೆ ಯಾವುದೋ ಸಾಮಾನುಗಳನ್ನು ಧರಧರಧರನೆ ಎಳೆಯುವ ಸದ್ದು ಕೇಳಿಸಿದಂತಾಯ್ತು. ಈ ಹೊತ್ತಿನಲ್ಲಿ ಇದೆಂತಹ ಉಪದ್ರವವೋ ಎಂದು ಮನದಲ್ಲೇ ಶಪಿಸುತ್ತಾ ಕಣ್ಣೆತ್ತಿ,

ಜ್ಞಾನೋದಯವಾಯಿತು. ಆ ಕಟ್ಟಡಕ್ಕೆ ಫಸ್ಟ್ ಫ್ಲೋರೇ ಇರಲಿಲ್ಲ,

ಎಚ್ಚರವಾಗಿದ್ದು ಗೊರಕೆಯ ಸದ್ದಿಗೆ. ನನ್ನದೇ ಗೊರಕೆಯ ಸದ್ದಿಗೆ!

ನಿದ್ರೆ-ಎಚ್ಚರಗಳು ಚಂದ್ರ-ಮೋಡದಂತೆ ಜಿಗ್ಗ್ ಇಣುಕುತ್ತಿದ್ದಂತೆಯೇ ಮುಂಜಾವಿನ ಕೋಳಿ ಕೂಗಿತು. ಬೆಳಗಿನ ಪಾಳಿಯ ಕಿಟ್ಟಿ ಕಾಫಿ ಫ್ಲಾಸ್ಕಿನೊಡನೆ ಪ್ರತ್ಯಕ್ಷನಾದ.

''ನಾಳೆ ರಾತ್ರಿ ಡ್ಯೂಟಿಗೆ ನೀನು ಬರಬೇಡ'' ಎಂದ ಸೀನು. ಪಿಂಕ್ ಸ್ಲಿಪ್ ಪಡೆದ ಸಾಫ್ಟ್‌ವೇರ್ ಇಂಜಿನಿಯರ್‌ನಂತೆ ಮರುಮಾತಾಡದೆ ಅಲ್ಲಿಂದ ನಿರ್ಗಮಿಸಿದೆ.

ಮರಣಶಯ್ಯೆಯಲ್ಲೂ ಮೊಳಗಿದ ರಾಷ್ಟ್ರಧ್ವನಿ

• ಡಾ. ಶೇಖರ ದೊಡ್ಡಗೌಡರ

1940ರ ಜೂನ್ ತಿಂಗಳ ಆ ದಿನಗಳು ಭಾರತೀಯ ಇತಿಹಾಸದ ಅತ್ಯಂತ ಭಾವುಕ ಹಾಗೂ ನಿರ್ಣಾಯಕ ಕ್ಷಣಗಳಿಗೆ ಸಾಕ್ಷಿಯಾಗಿದ್ದವು. ಅತ್ತ ನಾಗಪುರದ ರೇಶಿಮ್‌ಭಾಗ್‌ನಲ್ಲಿ ನಡೆಯುತ್ತಿದ್ದ ಸಂಘ ಶಿಕ್ಷಾ ವರ್ಗದಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ಮೂಲೆ ಮೂಲೆಗಳಿಂದ ಬಂದ ನೂರಾರು ತರುಣರು ರಾಷ್ಟ್ರಸೇವೆಯ ದೀಕ್ಷೆ ಪಡೆಯುತ್ತಿದ್ದರು. ಅದೇ ಸಮಯದಲ್ಲಿ, ಆ ಮಹಾ ಸಂಘಟನೆಯ ಶಿಲ್ಪಿ, ಯುಗಪ್ರವರ್ತಕ ಡಾ. ಕೇಶವ ಬಲಿರಾಮ್ ಹೆಡ್ಗೇವಾರ್ (ಡಾಕ್ಟರ್‌ಜೀ) ಅವರು ತೀವ್ರ ಜ್ವರ ಮತ್ತು ಅಸಹನೀಯ ಬೆನ್ನುನೋವಿನಿಂದ ಮರಣಶಯ್ಯೆಯಲ್ಲಿದ್ದರು.

ಇಲ್ಲಿ ನಾವು 1920-30ರ ದಶಕದ ಭಾರತೀಯ ರಾಜಕೀಯ ಮುತ್ಸದ್ದಿ ಹಾಗೂ ಇತಿಹಾಸದ ದ್ರಷ್ಟಾರರಾಗಿದ್ದ ಡಾಕ್ಟರ್‌ಜೀ ಅವರ ವಿಶಿಷ್ಟ ಚಿಂತನೆಯನ್ನು ಆಳವಾಗಿ ಸ್ಮರಿಸಬೇಕಾಗುತ್ತದೆ. ಏಕೆಂದರೆ, ಅಂದಿನ ಕಾಲದ ಬಹುತೇಕ ನಾಯಕರು ಬ್ರಿಟಿಷರ ವಿರುದ್ಧ ಹೋರಾಡಲು ರಾಜಕೀಯ ಕಾನೂನುಗಳನ್ನು ಮತ್ತು ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವ ಕಡೆಗೆ ಮಾತ್ರ ಗಮನ ಹರಿಸಿದ್ದರು. ಆದರೆ ಡಾ. ಹೆಡ್ಗೇವಾರ್ ವ್ಯವಸ್ಥೆಗಿಂತ 'ವ್ಯಕ್ತಿ ಮುಖ್ಯ' ಎಂದು ದೃಢವಾಗಿ ನಂಬಿದ್ದರು. ಕೇವಲ ಕಾನೂನುಗಳನ್ನು ಬದಲಾಯಿಸುವುದರಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಗದು, ಬದಲಿಗೆ ದೇಶದ ಪ್ರತಿಯೊಬ್ಬ ನಾಗರಿಕನ ಚಾರಿತ್ರ್ಯ ನಿರ್ಮಾಣವಾಗಬೇಕು ಎಂಬುದು ಅವರ ಅಚಲ ನಿಲುವಾಗಿತ್ತು. ಈ ಕಾರಣಕ್ಕಾಗಿಯೇ, ದೇಹದ ಪ್ರತಿಯೊಂದು ಕಣವೂ ಅಸಹನೀಯ ವೇದನೆಯಿಂದ ಬಳಲುತ್ತಿದ್ದರೂ, ತಮ್ಮ ಕೊನೆಯುಸಿರಿನವರೆಗೂ ಆ ಚಾರಿತ್ರ್ಯ ನಿರ್ಮಾಣದ ಮಹಾಯಜ್ಞದಲ್ಲೇ ತೊಡಗಿದ್ದ ಆ ಮಹಾಚೇತನ, ಜೂನ್ 9 ರಂದು ತನ್ನ ಅಂತಿಮ ಭಾಷಣದ ಮೂಲಕ ಮೊಳಗಿಸಿದ ರಾಷ್ಟ್ರಧ್ವನಿ ಇಂದಿಗೂ ಕೋಟ್ಯಂತರ ಸ್ವಯಂಸೇವಕರ ಎದೆಯಲ್ಲಿ ಜಾಗೃತ ಮಂತ್ರವಾಗಿ ಅನುರಣಿಸುತ್ತಿದೆ.

ಇತಿಹಾಸದ ಆ ಭಾವುಕ ಕ್ಷಣಗಳು

ದೈಹಿಕವಾಗಿ ಅನಾರೋಗ್ಯ ತೀವ್ರವಾಗಿದ್ದರೂ, ಡಾಕ್ಟರ್‌ಜೀ ಅವರ ಧೀಮಂತ ಮನಸ್ಸು ಮಾತ್ರ ಸದಾ ಶಿಬಿರದಲ್ಲಿದ್ದ ಸ್ವಯಂಸೇವಕರ ಶಿಸ್ತು ಮತ್ತು ಉತ್ಸಾಹದ ಕಡೆಗೇ ಇರುತ್ತಿತ್ತು. ವೈದ್ಯರು ಅವರಿಗೆ ಸಂಪೂರ್ಣ ವಿಶ್ರಾಂತಿ ಪಡೆಯಲು ಸೂಚಿಸಿ, ಯಾರನ್ನೂ ಭೇಟಿಯಾಗದಂತೆ ಕಠಿಣ ನಿರ್ಬಂಧ ಹೇರಿದ್ದರೂ ಅವರು ಅದಕ್ಕೆ ಒಪ್ಪಲಿಲ್ಲ, ತಮ್ಮ ಕೊನೆಯ ದಿನಗಳು ಹತ್ತಿರವಾಗುತ್ತಿವೆ ಎಂದು ಮನಗಂಡಿದ್ದ ಆ ಮಹಾಪುರುಷನಿಗೆ, ವೈಯಕ್ತಿಕ ಆರೋಗ್ಯಕ್ಕಿಂತ ದೇಶದ ತರುಣರನ್ನು ಪ್ರೇರೇಪಿಸುವುದೇ ಪರಮ ಕರ್ತವ್ಯವಾಗಿತ್ತು.

ಅಂತಿಮವಾಗಿ ಅವರು ಕಷ್ಟಪಟ್ಟು ಶಿಬಿರದ ಮೈದಾನಕ್ಕೆ ಆಗಮಿಸಿದಾಗ ಅಲ್ಲಿ ನೆರೆದಿದ್ದ ಸ್ವಯಂಸೇವಕರಲ್ಲಿ ಉಂಟಾದ ರೋಮಾಂಚನ ಮತ್ತು ಕರುಣಾಜನಕ ಸ್ಥಿತಿ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದಂತೆ ಉಳಿದಿದೆ. ಅದು ಕೇವಲ ಒಬ್ಬ ಸಂಘಟನಾ ಮುಖ್ಯಸ್ಥನ ಸಾಧಾರಣ ಭೇಟಿಯಾಗಿರಲಿಲ್ಲ; ಬದಲಿಗೆ ಇಡೀ ದೇಶದ ಭವಿಷ್ಯವನ್ನು ಕಣ್ಣಾರೆ ಕಂಡು ಹರಸಲು ಬಂದ ದ್ರಷ್ಟಾರನೊಬ್ಬನ ದಿವ್ಯ ಸನ್ನಿಧಿಯಾಗಿತ್ತು. ಈ ಸನ್ನಿಧಿಯಲ್ಲಿ ಮೂಡಿಬಂದದ್ದೇ ಸಂಘದ ಇತಿಹಾಸದ ಆ ಸುವರ್ಣ ಸಂದೇಶ.

ಅಂತಿಮ ಭಾಷಣದ ಮಹಾಸೂತ್ರ

ಜೂನ್ 9, 1940ರಂದು ಡಾಕ್ಟರ್‌ಜೀ ಅವರು ಕುಳಿತ ಸ್ಥಿತಿಯಲ್ಲೇ ಮಾಡಿದ ಆ ಕೊನೆಯ ಭಾಷಣ ಕೇವಲ 10 ರಿಂದ 15 ನಿಮಿಷಗಳಷ್ಟು ಅಲ್ಪ ಅವಧಿಯದ್ದಾಗಿತ್ತು. ಆದರೆ ಆ ಮಾತುಗಳು ಕೇವಲ ಭಾಷಣವಾಗಿರದೆ, ಸಂಘದ ಅಸ್ತಿತ್ವದ ದಿಕ್ಸೂಚಿ ಮತ್ತು ಅವರ ಇಡೀ ಜೀವಿತಾವಧಿಯ ತಪಸ್ಸಿನ ಸಾರವಾಗಿತ್ತು. ಈ ಐತಿಹಾಸಿಕ ಸಂದೇಶದಲ್ಲಿ ಅವರು ಮುಖ್ಯವಾಗಿ ಮೂರು ಸೂತ್ರಗಳನ್ನು ಸಮಾಜದ ಮುಂದಿಟ್ಟರು:



ಮೊದಲನೆಯದಾಗಿ, ದೇಶದ ಮೂಲೆ ಮೂಲೆಗಳಿಂದ, ವಿಭಿನ್ನ ಪ್ರಾಂತ್ಯ, ಭಾಷೆ ಮತ್ತು ಜಾತಿಗಳಿಂದ ಬಂದಿದ್ದ ನೂರಾರು ತರುಣರು ಶಿಸ್ತಿನಿಂದ ಒಟ್ಟಿಗೆ ನಿಂತಿರುವುದನ್ನು ನೋಡಿ ಡಾಕ್ಟರ್‌ಜೀ ಅವರು ಭಾವಪರವಶರಾಗಿ, 'ನಾನು ಇಂದು ನನ್ನ ಕಣ್ಣಮುಂದೆ ಅಖಂಡ ಹಿಂದೂ ಸಮಾಜದ ಒಂದು ಸಣ್ಣ ರೂಪವನ್ನು ನೋಡುತ್ತಿದ್ದೇನೆ' ಎಂದರು. ಭಾಷೆ, ಪ್ರಾಂತ್ಯ ಅಥವಾ ಭೌಗೋಳಿಕ ವೈವಿಧ್ಯತೆಗಳು ರಾಷ್ಟ್ರೀಯತೆಯ ಒಂದೇ ದಾರದಡಿಯಲ್ಲಿ ಒಂದಾದಾಗ ಹೇಗೆ ಕರಗಿಹೋಗುತ್ತವೆ ಎಂಬುದನ್ನು ಅವರು ಮನದಟ್ಟು ಮಾಡಿಕೊಟ್ಟರು.

ಎರಡನೆಯದಾಗಿ, ಅವರು ಸ್ವಯಂಸೇವಕರಿಗೆ ಕಠಿಣವಾದ ಎಚ್ಚರಿಕೆಯ ಸಂದೇಶ ನೀಡುತ್ತಾ, 'ಸಂಘದ ಕಾರ್ಯವನ್ನು ಕೇವಲ ಯಾವುದೋ ಒಂದು ಹವ್ಯಾಸದಂತೆ ಭಾಗಶಃ ಮಾಡಬೇಡಿ. ಸಂಘದ ಹೊರಗೆ ನಾವು ಬೇರೆ, ಸಂಘದ ಒಳಗೆ ಬೇರೆ ಎಂಬಂತಿರಬಾರದು. ಇಲ್ಲಿ ಕಲಿತ ದೇಶಸೇವೆ ಮತ್ತು ಚಾರಿತ್ರ್ಯದ ಮೌಲ್ಯಗಳು ನಿಮ್ಮ ದೈನಂದಿನ ಬದುಕಿನ ಭಾಗವಾಗಬೇಕು ಹಾಗೂ ಇದು ಇಡೀ ಜೀವನದ ವ್ರತವಾಗಬೇಕು' ಎಂದು ಕರೆ ನೀಡಿದರು.

ಮೂರನೆಯದಾಗಿ, ಶಿಬಿರದ ಮೌಲ್ಯಗಳು, ಶಿಸ್ತು ಮತ್ತು ಒಗ್ಗಟ್ಟು ಕೇವಲ ಆ ಮೈದಾನದ ಗಡಿಯೊಳಗೆ ಅಥವಾ ಆ ದಿನಗಳಿಗೆ ಮಾತ್ರ ಸೀಮಿತವಾಗಿ ರಬಾರದು, ಈ ತರಬೇತಿಯನ್ನು ಮುಗಿಸಿ ತಮ್ಮ ತಮ್ಮ ಹಳ್ಳಿ, ಪಟ್ಟಣಗಳಿಗೆ ಮರಳಿದ ನಂತರವೂ ಪ್ರತಿಯೊಬ್ಬ ಸ್ವಯಂಸೇವಕನು ದೇಶದ ಜಾಗೃತ ಸೈನಿಕನಂತೆ ಕಾರ್ಯನಿರ್ವಹಿಸಬೇಕು ಮತ್ತು ಇಡೀ ಸಮಾಜವನ್ನು ಸಂಘಟಿಸುವ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ತೆಗೆದುಕೊಳ್ಳಬೇಕು ಎಂದು ಆಶಿಸಿದರು.

ಅವರ ಈ ಕೊನೆಯ ಮಾತುಗಳು ಕೇವಲ ಭಾಷಣವಾಗಿರದೆ, ಇಡೀ ಸಂಘಟನೆಯ ಬೆಳವಣಿಗೆಗೆ ದಿಕ್ಸೂಚಿಯಾದ ಅಮೃತ ಮಂತ್ರಗಳಾಗಿದ್ದವು. ಮರಣದ ಹತ್ತಿರದಲ್ಲೂ ಸ್ವಂತ ಸುಖವನ್ನು ಮರೆತು ಸಮಾಜದ ಹಿತವನ್ನೇ ಬಯಸಿದ ಅವರ ಈ ದೂರದರ್ಶಿತ್ವವು, ಮುಂದೆ ಸಂಘದ ನಾಯಕತ್ವದ ಹಸ್ತಾಂತರದಲ್ಲೂ ಅತ್ಯಂತ ಸ್ಪಷ್ಟವಾಗಿ ಗೋಚರಿಸಿತು.

ನಾಯಕತ್ವದ ಹಸ್ತಾಂತರ ಮತ್ತು ಅಖಂಡತೆಯ ಮಂತ್ರ ಡಾಕ್ಟರ್‌ಜೀ ಅವರ ಸಾಂಸ್ಥಿಕ ಶಿಸ್ತು ಮತ್ತು ದೂರದೃಷ್ಟಿ ಎಷ್ಟಿತ್ತೆಂದರೆ, ತಮಗೆ ಕಾಲ ಹತ್ತಿರ ಬಂದಾಗ ಸಂಘಟನೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ಮುನ್ನೆಚ್ಚರಿಕೆ ವಹಿಸಿದ್ದರು. ತಾವು ಸ್ವರ್ಗಸ್ಥರಾಗುವ ಒಂದು ದಿನ ಮುಂಚೆ, ಅಂದರೆ ಜೂನ್ 20ರಂದು ಪ್ರಜ್ಞೆ ತಪ್ಪುವ ಮುನ್ನವೇ ಹಿರಿಯ ಪ್ರಮುಖರ ಸಮ್ಮುಖದಲ್ಲಿ, ಮಾಧವ ಸದಾಶಿವ ಗೋಳವಲ್ಕರ್ (ಶ್ರೀ ಗುರೂಜಿ) ಅವರನ್ನು ಹತ್ತಿರ ಕರೆದು, 'ಇನ್ನು ಮುಂದೆ ಸಂಘದ ಜವಾಬ್ದಾರಿಯನ್ನು ನೀವೇ ವಹಿಸಿಕೊಳ್ಳಬೇಕು' ಎಂದು ಅಧಿಕೃತವಾಗಿ ಆ ಮಹೋನ್ನತ ಹೊಣೆಗಾರಿಕೆಯನ್ನು ಹಸ್ತಾಂತರಿಸಿದರು. ಈ ಮೂಲಕ ವ್ಯಕ್ತಿಗಿಂತ ಸಂಘಟನೆ, ಸಂಘಟನೆಗಿಂತ ಸಿದ್ಧಾಂತ ದೊಡ್ಡದು ಎಂಬುದನ್ನು ಅವರು ಸ್ವತಃ ತಮ್ಮ ಜೀವನದ ಮೂಲಕವೇ ಸಾಬೀತುಪಡಿಸಿದರು. ಜಗತ್ತಿನ ಬಹುತೇಕ ದೊಡ್ಡ ಸಂಸ್ಥೆಗಳು ಸಂಸ್ಥಾಪಕರ ನಿಧನದ ನಂತರ ನಾಯಕತ್ವದ ಕಲಹದಿಂದ ಒಡೆದು ಹೋಗುತ್ತವೆ. ಆದರೆ ವ್ಯಕ್ತಿ ಪೂಜೆಗೆ ಆಸ್ಪದ ನೀಡದೆ, ತತ್ವ ಪೂಜೆಗೆ (ಭಗವಾಧ್ವಜ) ಮಹತ್ವ ನೀಡಿದ ಡಾಕ್ಟರ್‌ಜೀ ಅವರ ಈ ಸುಸೂತ್ರ ನಾಯಕತ್ವದ ಹಸ್ತಾಂತರವೇ ಸಂಘದ ಅಖಂಡತೆಗೆ ಮತ್ತು ಸತತ ಬೆಳವಣಿಗೆಗೆ ಭದ್ರ ಬುನಾದಿಯಾಯಿತು. ನಾಯಕರು ಬದಲಾಗಬಹುದು, ಆದರೆ ರಾಷ್ಟ್ರಕಾರ್ಯ ನಿರಂತರವಾಗಿ ಸಾಗಬೇಕು ಎಂಬ ಸತ್ಯವನ್ನು ಇದು ಇಡೀ ಜಗತ್ತಿಗೆ ಸಾರಿತು. ಈ ಭದ್ರ ಅಡಿಪಾಯದ ಮೇಲೆಯೇ ಇಂದು ಸಂಘ ತನ್ನ ನೂರು ವರ್ಷಗಳ ಯಶೋಗಾಥೆಯನ್ನು ಬರೆದಿದೆ.

ರಾಷ್ಟ್ರಧರ್ಮದ ಶತಮಾನ

ಹೀಗೆ 1925ರ ವಿಜಯದಶಮಿಯಂದು ಕೇವಲ 15-20 ಜನ ತರುಣರೊಂದಿಗೆ ಬಿತ್ತಿದ ಆ ಸಣ್ಣ ದೇಶಪ್ರೇಮದ ಬೀಜ, ಇಂದು ಶತಮಾನದ (100 ವರ್ಷಗಳ) ಹೊಸ್ತಿಲಲ್ಲಿ ನಿಂತು ಜಗತ್ತಿನ ಅತ್ಯಂತ ದೊಡ್ಡ ಸ್ವಯಂಸೇವಾ ಸಂಸ್ಥೆಯಾಗಿ ಹೆಮ್ಮರವಾಗಿದೆ. 1940ರಲ್ಲಿ ಮರಣಶಯ್ಯೆಯಲ್ಲಿದ್ದಾಗ ಆ ಮಹಾಪುರುಷ ಉದುರಿಸಿದ ಕಣ್ಣೀರಿನ ಹನಿಗಳು ಮತ್ತು ಆಡಿದ ಮಾತುಗಳು ವ್ಯರ್ಥವಾಗಲಿಲ್ಲ ಎಂಬುದಕ್ಕೆ ಇಂದಿನ ಸಂಘದ ಜಾಗತಿಕ ವಿಸ್ತಾರವೇ ಜೀವಂತ ಸಾಕ್ಷಿಯಾಗಿದೆ. ಇಂದು ದೇಶವು ಎದುರಿಸುತ್ತಿರುವ ಆಂತರಿಕ ಭದ್ರತೆಯ ಸವಾಲುಗಳು, ಸಾಂಸ್ಕೃತಿಕ ಆಕ್ರಮಣಗಳು ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ನಡುವೆ ಡಾಕ್ಟರ್‌ಜೀ ಅವರು ಅಂದು ನೀಡಿದ 'ಸಾಮಾಜಿಕ ಒಗ್ಗಟ್ಟು, ವೈಯಕ್ತಿಕ ಶಿಸ್ತು ಮತ್ತು ರಾಷ್ಟ್ರೀಯ ಚಾರಿತ್ರ್ಯದ' ಸಂದೇಶ ಇಂದಿನ ಯುವ ಪೀಳಿಗೆಗೆ ಅತ್ಯಂತ ಅಗತ್ಯವಾಗಿದೆ. ಜಾತಿ-ಮತಗಳ ಭೇದ ಮರೆತು ರಾಷ್ಟ್ರಪ್ರೇಮದ ಅಡಿಯಲ್ಲಿ ಒಂದಾಗದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಎಂಬ ಅವರ ಎಚ್ಚರಿಕೆ ಇಂದಿಗೂ ಅಷ್ಟೇ ಪ್ರಸ್ತುತವಾಗಿದೆ ಮತ್ತು ಆ ದಾರಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸಬೇಕಾದ ನಿಜವಾದ ಗೌರವವಾಗಿದೆ.

ಅಂತಿಮವಾಗಿ ಜೂನ್ 21, 1940 ರಂದು ಡಾಕ್ಟರ್‌ಜೀ ಅವರು ಭೌತಿಕವಾಗಿ ನಮ್ಮನ್ನು ಅಗಲಿದರಾದರೂ, ಅವರು ಹಚ್ಚಿದ ರಾಷ್ಟ್ರಭಕ್ತಿಯ ಜ್ಯೋತಿ ಇಂದಿಗೂ ಕೋಟ್ಯಂತರ ಹೃದಯಗಳಲ್ಲಿ ನಿರಂತರವಾಗಿ ಬೆಳಗುತ್ತಿದೆ. ಆದ್ದರಿಂದ, ಅವರ ಪುಣ್ಯಸ್ಮರಣೆಯ ಈ ಪವಿತ್ರ ಸಂದರ್ಭದಲ್ಲಿ ನಾವು ಕೇವಲ ಭಾವನಾತ್ಮಕವಾಗಿ ಕಣ್ಣೀರು ಸುರಿಸುವುದಕ್ಕಿಂತ ಅಥವಾ ಕೇವಲ ಪಟ್ಟಗಳ ಮೂಲಕ ಗೌರವ ಸಲ್ಲಿಸುವುದಕ್ಕಿಂತ, ಅವರು ನಮಗಾಗಿ ಬಿಟ್ಟುಹೋದ ತಪೋಮಯ ಸಂದೇಶವನ್ನು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ದೇಶಕ್ಕಾಗಿ ಸ್ವಾರ್ಥರಹಿತವಾಗಿ, ನಿರಹಂಕಾರದಿಂದ ಸೇವೆ ಸಲ್ಲಿಸುವುದೇ ಆ ಮಹಾ ಚೇತನಕ್ಕೆ ನಾವು ಸಲ್ಲಿಸಬಹುದಾದ ಅತ್ಯುನ್ನತ ಮತ್ತು ನಿಜವಾದ 'ಕಾರ್ಯಾಂಜಲಿ'.

ಯೋಗ: ಆರೋಗ್ಯಕರ ಸಮಾಜದ ಅಡಿಪಾಯ



ವಿಶ್ವಯೋಗ ದಿನಾಚರಣೆ

• ಡಾ. ಮೈತ್ರಿ ಭಟ್, ವಿಟ್ಲ

ವೇಗವಾಗಿ ಬದಲಾಗುತ್ತಿರುವ ಆಧುನಿಕ ಜಗತ್ತಿನಲ್ಲಿ ಮನುಷ್ಯನ ಜೀವನಶೈಲಿ, ಆಲೋಚನಾ ಕ್ರಮ ಮತ್ತು ಮೌಲ್ಯಗಳು ಗಮನಾರ್ಹವಾಗಿ ಬದಲಾಗುತ್ತಿವೆ. ತಂತ್ರಜ್ಞಾನ, ನಗರೀಕರಣ ಮತ್ತು ಜಾಗತೀಕರಣವು ಮಾನವನಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿವೆ. ಆದರೆ ಇದೇ ಸಂದರ್ಭದಲ್ಲಿ ಒತ್ತಡ, ಆತಂಕ, ಅಸಹನೆ, ಏಕಾಂಗಿತನ ಮತ್ತು ಆರೋಗ್ಯ ಸಮಸ್ಯೆಗಳೂ ಹೆಚ್ಚಾಗಿವೆ. ಜೀವನದ ಗುಣಮಟ್ಟಕ್ಕಿಂತ ಜೀವನದ ವೇಗಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಒಟ್ಟಿನಲ್ಲಿ, ಮನುಷ್ಯನ ಕೈಯಲ್ಲಿ ಎಲ್ಲ ಸೌಲಭ್ಯಗಳಿದ್ದರೂ ಮನಸ್ಸಿನಲ್ಲಿ ನೆಮ್ಮದಿ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಜ್ಞಾನಪರಂಪರೆಯ ಅಮೂಲ್ಯ ಕೊಡುಗೆಯಾದ ಯೋಗವು ಕೇವಲ ಆರೋಗ್ಯ ಸಾಧನವಲ್ಲ, ಬದುಕನ್ನು ಸಮಗ್ರವಾಗಿ ರೂಪಿಸುವ ಜೀವನದರ್ಶನವಾಗಿ ನಮ್ಮ ಮುಂದೆ ನಿಂತಿದೆ.

ಯೋಗದ ವ್ಯಾಪ್ತಿ ಬಹಳ ವಿಶಾಲವಾದುದಾಗಿದೆ. ಯೋಗವೆಂದರೆ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ನಡುವೆ ಸಮನ್ವಯ ಸಾಧಿಸುವ ಪ್ರಕ್ರಿಯೆ. ವ್ಯಕ್ತಿಯ ಒಳಜಗತ್ತು(ಅಂತರಂಗ) ಮತ್ತು ಹೊರಜಗತ್ತಿನ(ಬಹಿರಂಗ) ನಡುವೆ ಸಾಮರಸ್ಯವನ್ನು ನಿರ್ಮಿಸುವ ಮಾರ್ಗ.

ಮನುಷ್ಯನ ಜೀವನದಲ್ಲಿ ದೈಹಿಕ ಆರೋಗ್ಯ ಎಷ್ಟು ಮುಖ್ಯವೋ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವೂ ಅಷ್ಟೇ ಮುಖ್ಯ. ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ನೆಲೆಸುತ್ತದೆ ಎನ್ನುವುದು ಸತ್ಯ. ಆದರೆ ಮನಸ್ಸಿನ ನೆಮ್ಮದಿ ಇಲ್ಲದಿದ್ದರೆ ದೇಹದ ಆರೋಗ್ಯವೂ ದೀರ್ಘಕಾಲ ಉಳಿಯುವುದಿಲ್ಲ. ಆದ್ದರಿಂದ ಯೋಗವು ಕೇವಲ ದೇಹವನ್ನು ಬಲಪಡಿಸುವುದಲ್ಲ; ಮನಸ್ಸನ್ನು ಸ್ಥಿರಗೊಳಿಸುವುದನ್ನೂ ಕಲಿಸುತ್ತದೆ.

ಯೋಗಾಭ್ಯಾಸ ದೇಹದ ಪ್ರತಿಯೊಂದು ಅಂಗಕ್ಕೂ ಚೈತನ್ಯವನ್ನು ತುಂಬಿ ರಕ್ತಪರಿಚಲನೆಯನ್ನು ಸುಧಾರಿಸುತ್ತದೆ. ಉಸಿರಾಟ ವ್ಯವಸ್ಥೆ ಪರಿಣಾಮಕಾರಿಯಾಗಿ, ಸ್ನಾಯುಗಳು ಮತ್ತು ಕೀಲುಗಳು ಚುರುಕಾಗುತ್ತವೆ. ದೇಹದ ಸಮತೋಲನ ಮತ್ತು ಲವಲವಿಕೆ ಹೆಚ್ಚುತ್ತದೆ. ಇದರಿಂದ ವ್ಯಕ್ತಿಯಲ್ಲಿ ಉತ್ಸಾಹ, ಆತ್ಮವಿಶ್ವಾಸ ಮತ್ತು ಚೈತನ್ಯ ವೃದ್ಧಿಯಾಗುತ್ತದೆ.

ಇಂದಿನ ಸಮಾಜದಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ಪರೀಕ್ಷೆಯ ಒತ್ತಡದಿಂದ ಬಳಲುವ ವಿದ್ಯಾರ್ಥಿಗಳು, ಉದ್ಯೋಗದ ಅನಿಶ್ಚಿತತೆಯಿಂದ ಆತಂಕದಲ್ಲಿರುವ ಯುವಕರು, ಕೆಲಸದ ಒತ್ತಡದಲ್ಲಿ ಬದುಕುತ್ತಿರುವ ವೃತ್ತಿಪರರು ಮತ್ತು ಏಕಾಂಗಿತನದಿಂದ ನರಳುತ್ತಿರುವ ಹಿರಿಯರು ಎಲ್ಲಾ ವರ್ಗದ ಜನರ ಬದುಕಿನಲ್ಲೂ ಒತ್ತಡ ಪ್ರಮುಖ ಸಮಸ್ಯೆಯಾಗಿದೆ. ಇಂತಹ ಸಂದರ್ಭದಲ್ಲಿ ಯೋಗವು ಮನಸ್ಸಿಗೆ ವಿಶ್ರಾಂತಿಯನ್ನು ನೀಡುತ್ತದೆ. ಪ್ರಾಣಾಯಾಮ ಮತ್ತು ಧ್ಯಾನ ಮನಸ್ಸಿನ ಅಶಾಂತತೆಯನ್ನು ಶಮನಗೊಳಿಸಿ, ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಬೆಳೆಸುತ್ತವೆ.

ಯೋಗಾಭ್ಯಾಸ ಮಾಡುವವರು ಸಾಮಾನ್ಯವಾಗಿ ಹೆಚ್ಚು ಸಮಚಿತ್ತತೆ, ಸಹನೆ ಮತ್ತು ಧೈರ್ಯವನ್ನು ಹೊಂದಿರುತ್ತಾರೆ ಎಂಬುದು ಅನೇಕ ಅಧ್ಯಯನಗಳಿಂದಲೂ ತಿಳಿದುಬಂದಿದೆ. ಕೋಪ, ಆತಂಕ ಮತ್ತು ಭಯದಂತಹ ನಕಾರಾತ್ಮಕ ಭಾವನೆಗಳನ್ನು ನಿಯಂತ್ರಿಸಲು ಯೋಗವು ಸಹಕಾರಿಯಾಗಿದೆ.

ಯೋಗದ ಮಹತ್ವ ಅದರ ದೈಹಿಕ ಪ್ರಯೋಜನಗಳಲ್ಲಿ ಮಾತ್ರ ಸೀಮಿತವಾಗಿಲ್ಲ, ಅದು ಮೌಲ್ಯಯುತ ಬದುಕಿನತ್ತ ಕರೆದೊಯ್ಯುವ ಮಾರ್ಗವೂ ಆಗಿದೆ. ಪತಂಜಲಿಯ ಅಷ್ಟಾಂಗ ಯೋಗದಲ್ಲಿ ಯಮ ಮತ್ತು ನಿಯಮಗಳಿಗೆ ವಿಶೇಷ ಸ್ಥಾನವಿದೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಯಮಗಳು ವ್ಯಕ್ತಿಯ ಸಾಮಾಜಿಕ ನಡವಳಿಕೆಯನ್ನು ಶುದ್ಧಗೊಳಿಸುತ್ತವೆ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಪ್ರಣಿಧಾನ ಎಂಬ ನಿಯಮಗಳು ವ್ಯಕ್ತಿಯ ಆಂತರಿಕ ಬೆಳವಣಿಗೆಗೆ ನೆರವಾಗುತ್ತವೆ. ಇವು ಕೇವಲ ಯೋಗಾಭ್ಯಾಸಿಗಳಿಗೆ ಮಾತ್ರವಲ್ಲ, ಪ್ರತಿಯೊಬ್ಬ ಮಾನವನಿಗೂ ಅಗತ್ಯವಾದ ಸಾರ್ವಕಾಲಿಕ ಜೀವನಮೌಲ್ಯಗಳಾಗಿವೆ. ಸಮಾಜದಲ್ಲಿ ಹೆಚ್ಚುತ್ತಿರುವ ಅಸಹನೆ, ಹಿಂಸೆ, ಭ್ರಷ್ಟಾಚಾರ ಮತ್ತು ಸ್ವಾರ್ಥದ ಮನೋಭಾವಗಳಿಗೆ ಪರಿಹಾರ ಹುಡುಕಬೇಕಾದರೆ ಈ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ.

ಜೀವನ ಎಂದಿಗೂ ಒಂದೇ ರೀತಿಯಲ್ಲಿರುವುದಿಲ್ಲ. ಸುಖ ಮತ್ತು ದುಃಖ, ಯಶಸ್ಸು ಮತ್ತು ವೈಫಲ್ಯ, ಲಾಭ ಮತ್ತು ನಷ್ಟಗಳು ಜೀವನದ ಅವಿಭಾಜ್ಯ ಭಾಗಗಳು. ಆದರೆ ಈ ಎಲ್ಲ ಸಂದರ್ಭಗಳನ್ನು ಸಮಭಾವದಿಂದ ಸ್ವೀಕರಿಸುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಯೋಗವು ವ್ಯಕ್ತಿಗೆ ಸಮಚಿತ್ತತೆಯನ್ನು ಕಲಿಸುತ್ತದೆ. ಪರಿಸ್ಥಿತಿ ಹೇಗೇ ಇದ್ದರೂ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಳ್ಳುವ ಶಕ್ತಿಯನ್ನು ನೀಡುತ್ತದೆ.

ಇಂದಿನ ಮಾಹಿತಿ ಯುಗದಲ್ಲಿ ಪ್ರತಿದಿನ ಸಾವಿರಾರು ಮಾಹಿತಿಗಳು ನಮ್ಮನ್ನು ತಲುಪುತ್ತಿವೆ. ಆದರೆ ಮಾಹಿತಿಯು ಹೆಚ್ಚಳವೇ ಜ್ಞಾನವಲ್ಲ. ನಿಜವಾದ ಜ್ಞಾನವು ಅನುಭವ ಮತ್ತು ಆತ್ಮಾವಲೋಕನದಿಂದ ರೂಪುಗೊಳ್ಳುತ್ತದೆ. ಯೋಗವು ಈ ಪ್ರಕ್ರಿಯೆಗೆ ನೆರವಾಗುತ್ತದೆ. ಅದು ವ್ಯಕ್ತಿಯ ಗಮನ, ಏಕಾಗ್ರತೆ ಮತ್ತು ಆತ್ಮಜಾಗೃತಿಯನ್ನು ಹೆಚ್ಚಿಸುತ್ತದೆ. ತನ್ನನ್ನು ತಾನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಅಂತರದೃಷ್ಟಿ ಮತ್ತು ಪ್ರಜ್ಞೆ ಬೆಳೆಯುವಾಗ ಜೀವನದ ಕುರಿತು ಆಳವಾದ ಅರಿವು ಮೂಡುತ್ತದೆ. ಈ ಅರಿವೇ ವ್ಯಕ್ತಿಯನ್ನು ಹೆಚ್ಚು ಪ್ರಬುದ್ಧನನ್ನಾಗಿಸುತ್ತದೆ.

ಯೋಗದ ಪ್ರಯೋಜನಗಳು ಕೇವಲ ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗಿಲ್ಲ. ಆರೋಗ್ಯವಂತ ವ್ಯಕ್ತಿಗಳಿಂದ ಆರೋಗ್ಯವಂತ ಕುಟುಂಬಗಳು ನಿರ್ಮಾಣವಾಗುತ್ತವೆ. ಆರೋಗ್ಯವಂತ ಕುಟುಂಬಗಳಿಂದ ಸದೃಢ ಸಮಾಜ ರೂಪುಗೊಳ್ಳುತ್ತದೆ. ಯೋಗವನ್ನು ಜೀವನಶೈಲಿಯ ಭಾಗವನ್ನಾಗಿ ಮಾಡಿಕೊಂಡ ಸಮಾಜದಲ್ಲಿ ಶಿಸ್ತು, ಸಹಕಾರ, ಸಹಾನುಭೂತಿ ಮತ್ತು ಸಮತೋಲನ ಹೆಚ್ಚಾಗುತ್ತದೆ. ಮಾನಸಿಕ ಆರೋಗ್ಯ ಸುಧಾರಣೆಗೊಳ್ಳುತ್ತದೆ.

ಪ್ರತಿದಿನ ಸ್ವಲ್ಪ ಸಮಯವನ್ನು ಯೋಗಕ್ಕೆ ಮೀಸಲಿಟ್ಟರೆ ದೇಹ ಆರೋಗ್ಯಕರವಾಗುತ್ತದೆ, ಮನಸ್ಸು ಪ್ರಶಾಂತವಾಗುತ್ತದೆ ಮತ್ತು ಬದುಕು ಸಮತೋಲನದಿಂದ ಕೂಡಿರುತ್ತದೆ. ಯೋಗವು ಕೇವಲ ಆರೋಗ್ಯದ ಸಾಧನವಲ್ಲ; ಅದು ಸುಂದರ, ಸಾರ್ಥಕ ಮತ್ತು ಸಮೃದ್ಧ ಬದುಕಿನತ್ತ ಕರೆದೊಯ್ಯುವ ಸೋಪಾನ. ಯೋಗವನ್ನು ಒಂದು ದಿನದ ಆಚರಣೆಯಾಗಿ ಅಲ್ಲ, ಪ್ರತಿದಿನದ ಬದುಕಿನ ಭಾಗವಾಗಿ ಅಳವಡಿಸಿಕೊಂಡಾಗ ಮಾತ್ರ ಅದರ ನಿಜವಾದ ಅರ್ಥ ಮತ್ತು ಮಹತ್ವವನ್ನು ಅನುಭವಿಸಲು ಸಾಧ್ಯ.


ಕರ್ನಾಟಕ ಭವನ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ



• **ಬೆಂಗಳೂರು:** ಯುಪಿಎಸ್‌ಸಿ ಸೇರಿದಂತೆ ಇತರೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಒಂದೇ ಸೂರಿನಡಿ ಎಲ್ಲಾ ಅನುಕೂಲ ದೊರೆಯಬೇಕು ಎನ್ನುವ ಕಾರಣಕ್ಕೆ ಪಿಡಬ್ಲ್ಯುಡಿ ವತಿಯಿಂದ ಹೊಸದಿಲ್ಲಿಯಲ್ಲಿ ಕರ್ನಾಟಕ ಭವನ-4 ಅನ್ನು ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.

ವಿಧಾನಸೌಧದಲ್ಲಿ ಶನಿವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಅವರು ಸಭೆಯ ನಿರ್ಣಯಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಪಿಡಬ್ಲ್ಯುಡಿ ವತಿಯಿಂದ ಹೊಸದಿಲ್ಲಿಯಲ್ಲಿ ಕರ್ನಾಟಕ ಭವನ-4 ಅನು ಮಾಡಲು 80.30 ಕೋಟಿ ರೂ.ಗೆ ಅನುಮೋದನೆ ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಶೇ. 50, ಇತರೇ ಸಮುದಾಯದ ವಿದ್ಯಾರ್ಥಿಗಳಿಗೆ ಶೇ. 50 ರಷ್ಟು ಮೀಸಲು ಇಡಲಾಗಿದೆ ಎಂದು ವಿವರಿಸಿದರು. ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ ಒಟ್ಟು 235.60 ಕೋಟಿ ರೂ. ವೆಚ್ಚದಲ್ಲಿ 620 ನೂತನ ಬಸ್‌ಗಳ ಖರೀದಿಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ನೂತನ ಬಸ್ಸುಗಳ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳು ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 220 ಬಸ್ಸುಗಳನ್ನು ಒದಗಿಸಲಾಗುತ್ತದೆ. ಹೊಸ ಬಸ್ಸುಗಳು ಬಿಎಸ್-4 ಪೂರ್ಣ ನಿರ್ಮಿತ ಮೊಫುಸಿಲ್ ಬಸ್ಸುಗಳಾಗಿವೆ. ಅಲ್ಲದೇ ಎಲ್ಲಾ ಸಾರಿಗೆ ನಿಗಮಗಳ ಅಡಿಯಲ್ಲಿ 11 ಕಡೆ ಎಲೆಕ್ಟ್ರಿಕ್ ಬಸ್‌ಗಳ ಡಿಪೋಗಳನ್ನು ತೆರೆಯಲು 112.72 ಕೋಟಿ ರೂ. ವೆಚ್ಚ ಮಾಡಲಾಗುವುದು. 30 ಕೋಟಿ ರೂ. ವೆಚ್ಚದಲ್ಲಿ ಸಂಡೂರು ತಾಲೂಕು ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು ಎಂದು ವಿವರಿಸಿದರು.

ರಾಮಬಾಣ



ಜಾಗತಿಕ ಉಗ್ರ ನಿಗಾ ಸಂಸ್ಥೆಗೆ ಭಾರತೀಯ ಉಪಾಧ್ಯಕ್ಷ!

• **ಹೊಸದಿಲ್ಲಿ:** ಕೇಂದ್ರ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ವಿವೇಕ್ ಅಗರವಾಲ್ ಅವರು ಜಾಗತಿಕ ಉಗ್ರ ನಿಗಾ ಸಂಸ್ಥೆ ಎಫ್‌ಎಟಿಎಫ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಹಣಕಾಸು ಕ್ರಮ ಕಾರ್ಯಪಡೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಮೊದಲ ಭಾರತೀಯರಾಗಿದ್ದಾರೆ. 2026ರ ಜುಲೈನಿಂದ 2027ರ ಜೂನ್‌ವರೆಗೆ ವಿವೇಕ್ ಉಗ್ರ ನಿಗಾ ಸಂಸ್ಥೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ.

ವಿವೇಕ್ ಅಗರವಾಲ್ ಅವರು 1994ರ ಮಧ್ಯಪ್ರದೇಶ ಕೇಡರ್‌ನ ಭಾರತೀಯ ಆಡಳಿತ ಸೇವೆ(ಐಎಎಸ್) ಅಧಿಕಾರಿ ಆಗಿದ್ದಾರೆ. ಜಾಗತಿಕ ಉಗ್ರ ನಿಗಾ ಸಂಸ್ಥೆಗೆ ಭಾರತೀಯರೊಬ್ಬರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಭಯೋತ್ಪಾದನೆ ವಿರುದ್ಧ ಹೋರಾಟ ಸಮಿತ್ತಿ ಸಾರಿದ ಭಾರತಕ್ಕೆ ಇದೊಂದು ದೊಡ್ಡ ಗೆಲುವು. ಜಾಗತಿಕ ಭಯೋತ್ಪಾದನೆ ಹಾಗೂ ಅದರ ಹಣಕಾಸಿನ ಸಂಪರ್ಕಜಾಲಗಳ ವಿರುದ್ಧದ ಹೋರಾಟದಲ್ಲಿ ಭಾರತದ ಪಾತ್ರದ ಮಹತ್ವವನ್ನು ತೋರಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ವಿವೇಕ್ ಅಗರವಾಲ್ ಯಾರು? ಕೇಂದ್ರ ಸರ್ಕಾರ, ಪಂಜಾಬ್ ಮತ್ತು ಮಧ್ಯಪ್ರದೇಶ ಸರ್ಕಾರದ ಹಲವು ಪ್ರಮುಖ ಹುದ್ದೆಗಳನ್ನು ವಿವೇಕ್ ಅಲಂಕರಿಸಿದ್ದಾರೆ. 2025ರಲ್ಲಿ ಮಧ್ಯಪ್ರದೇಶ ಕೇಡರ್‌ನ ಮುಖ್ಯ ಕಾರ್ಯದರ್ಶಿಯಾಗಿ ಬಡ್ತಿ ಪಡೆದಿದ್ದರು. ಕಂದಾಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ವಿವೇಕ್, ಹಣಕಾಸು ಗುಪ್ತಚರ ಘಟಕ-ಭಾರತ(ಎಫ್‌ಐಯು-ಐಎನ್‌ಡಿ) ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಹಣಕಾಸು ನಿರ್ವಹಣೆ, ಸಾರ್ವಜನಿಕ ಆಡಳಿತ ಮತ್ತು ನೀತಿಗಳ ಅನುಷ್ಠಾನದಲ್ಲಿ ತಜ್ಞರಾಗಿ ಅಗರವಾಲ್ ಹೆಸರುವಾಸಿ ಆಗಿದ್ದರು. ಕಂದಾಯ ಆಡಳಿತ, ಕೃಷಿ ಸುಧಾರಣೆಗಳು, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ಗುಪ್ತಚರ ವಿಭಾಗಗಳಲ್ಲೂ ವಿವೇಕ್ ಕೊಡುಗೆ ನೀಡಿದ್ದರು.

ದಿನ ಭವಿಷ್ಯ

ಮೇಷ
ಮನೆಯಲ್ಲಿ ಕಿರಿಯರ ಸಂಬಂಧ ಸುಧಾರಣೆಗೆ ಗಮನ ಕೊಡಿ. ಬರುವಾಗ ಬಿಟ್ಟು ವ್ಯವಹಾರ. ಬಂಧು ಭೇಟಿಯಿಂದ ಸಮಾಧಾನ.

ವೃಷಭ
ನಿಮ್ಮ ಗುರಿ ಈಡೇರಲಿದೆ. ವಸ್ತುಸ್ಥಿತಿ ಅರಿಯಿರಿ. ಕೆಲ ವಿಷಯಗಳಲ್ಲಿ ಭ್ರಮೆ ಬಿಡಿ. ಮನೆಯವರ ಬೆಂಬಲ ಪಡೆಯಿರಿ.

ಮಿಥುನ
ಮಾಡುವ ಕೆಲಸದಲ್ಲಿ ಸಫಲತೆ. ಆದರೆ ಸುಲಭದಲ್ಲಿ ಆಗದು. ಅಡ್ಡಿ, ವಿಳಂಬ ಸಾಧ್ಯತೆ. ಕೌಟುಂಬಿಕ ಮನಸ್ತಾಪ ನೆಮ್ಮದಿ ಕೆಡಿಸುವುದು.

ಕಟಕ
ಭಯ್ದಾಭ್ಯಾಯ ನಿವಾರಣೆ. ಆಸಕ್ತಿಕರ ವಿದ್ಯಮಾನ ಸಂಭವಿಸುವ ಅಂಬಳಿಡಿ. ವಿಶ್ವಾಸದಿಂದ ಎದುರಿಸಿ. ನೆರೆಮನೆಯವರ ಕಿರಿಕಿರಿ.

ಸಿಂಹ
ವೃತ್ತಿಯಲ್ಲಿ ಯಶಸ್ಸು. ಮನೆಯಲ್ಲಿ ಸೌಹಾರ್ದ. ಬಂಧುಗಳ ಭೇಟಿ. ಧನವ್ಯಯ ಹೆಚ್ಚಾದರೂ ಬೇಸರ ಮೂಡದು.

ಕನ್ಯಾ
ಮಾನಸಿಕ ಅಶಾಂತಿ. ಕೆಲಸದಲ್ಲಿ ನಿರಾಸಕ್ತಿ. ವ್ಯವಹಾರದಲ್ಲಿ ತೊಡಕು. ಎಲ್ಲರ ಜತೆ ಹೊಂದಾಣಿಕೆ ಬೇಕು. ಭಿನ್ನಮತ ವಹಿಸಲು ಹೋಗದಿರಿ.

ತುಲಾ
ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ. ವ್ಯಕ್ತಿ ಸಮಸ್ಯೆಯೊಂದು ಪರಿಹಾರ ಕಾಣಲಿದೆ. ಕುಟುಂಬಸ್ಥರ ಹಿತ ಕಾಯುವಲ್ಲಿ ಸಫಲ.

ವೃಶ್ಚಿಕ
ವ್ಯಕ್ತಿ ಒತ್ತಡ ಕಡಿಮೆ ಮಾಡಿಕೊಳ್ಳಿ. ಇಲ್ಲವಾದರೆ ಆರೋಗ್ಯದ ಮೇಲೆ ಪರಿಣಾಮ. ಮೆಚ್ಚಿನ ಹವ್ಯಾಸದಲ್ಲಿ ಚಿಂತೆ ಮರೆಯಲೆತ್ನಿಸಿ.

ಧನು
ಮನೆಯಲ್ಲಿ ಶಾಂತಿ, ಸೌಹಾರ್ದ. ಹಣದ ವ್ಯವಹಾರ ಸಫಲ. ಆರೋಗ್ಯದ ಚಿಂತೆ ಪರಿಹಾರ. ಮಕ್ಕಳ ಸಾಧನೆಯ ಖುಷಿ.

ಮಕರ
ಆದಾಯ ಹೆಚ್ಚಳದ ಸಂಕೇತ ತೋರಲಿದೆ. ಎಲ್ಲರಿಂದ ಉತ್ತಮ ಸಹಕಾರ ಪಡೆಯುವಿರಿ. ಆರೋಗ್ಯದ ಸಮಸ್ಯೆ ಕಡೆಗಣಿಸಬೇಡಿ.

ಕುಂಭ
ವೃತ್ತಿಯಲ್ಲಿ ಯಾವುದೇ ಕೆಲಸ ಬಾಕಿ ಉಳಿಸಬೇಡಿ. ವಿಳಂಬ ದೊಡ್ಡ ಹಾನಿ ತಂದೀತು. ಅನಾರೋಗ್ಯಕರ ಆಹಾರ ಸೇವಿಸಬೇಡಿ.

ಮೀನ
ಇತರರ ಜತೆ ವಿನಯದಿಂದ ವರ್ತಿಸಿ. ಇಲ್ಲವಾದರೆ ನಿಷ್ಠುರ ಕಟ್ಟಿಕೊಳ್ಳುವಿರಿ. ಆರ್ಥಿಕ ವ್ಯವಹಾರ ತುಸು ಚಿಂತೆಗೆ ಕಾರಣವಾದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30
ಅದೃಷ್ಟ ಸಂಖ್ಯೆ : 3,8,2,5

ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಅಲ್ಲ: ಕೇಂದ್ರ ಸಚಿವ ಎಚ್ಡಿಕೆ
ಮೈತ್ರಿ ಬಿಕ್ಕಟ್ಟು ಸೃಷ್ಟಿಗೆ ಯತ್ನ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಲ್ಲಿ ಬಿರುಕು ಉಂಟಾಗುವುದಿಲ್ಲ, ಈ ಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯೂ ಅಲ್ಲ ಹಾಗೂ ನಮ್ಮ ನಡುವೆ ಬಿಕ್ಕಟ್ಟು ಸೃಷ್ಟಿಸಲು ಕಾಂಗ್ರೆಸ್ ವಿಫಲ ಪ್ರಯತ್ನ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು, ನಾನು ನಮ್ಮ ಅಭ್ಯರ್ಥಿಯನ್ನು ನಿಲ್ಲಿಸುವುದಕ್ಕೆ ಮೊದಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬೀನ್, ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾದ ಆರ್. ಅಶೋಕ್ ಅವರೊಂದಿಗೆ ಚರ್ಚೆ ನಡೆಸಿ ಅವರೆಲ್ಲರ ಸಹಮತದಿಂದ ಅಭ್ಯರ್ಥಿಯನ್ನು ಹಾಕಲಾಯಿತು. ಹೀಗಾಗಿ ನಮ್ಮ ಮೈತ್ರಿಯಲ್ಲಿ ಬಿರುಕು ಬರುವ ಪ್ರಶ್ನೆ ಇಲ್ಲ ಎಂದರು.

ಅನುದಾನಕ್ಕಾಗಿ ಶಾಸಕರು ಆಸೆ ಪಟ್ಟಿದ್ದಾರೆ: ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೊಟ್ಟರೆ ನಿಮಗೆ (ಶಾಸಕರಿಗೆ) 50 ಕೋಟಿ ರೂ. ಕೊಡುತ್ತೇವೆ, ಅದರ ಜೊತೆಗೆ 100 ಕೋಟಿ ರೂ. ಅನುದಾನ ಕೊಡುತ್ತೇವೆ ಎಂದು ಆಮಿಷ ಒಡ್ಡಿದ್ದಾರೆ. ಆ ಆಮಿಷಗಳು ಚುನಾವಣೆಯಲ್ಲಿ ಕೆಲಸ ಮಾಡಿವೆ ಎಂದು ಆರೋಪಿಸಿದರು. ನಮಗೆ ಇದ್ದಿದ್ದು ಕೇವಲ 18 ಸೀಟು. ಅದರಲ್ಲಿ ಒಬ್ಬರು ಈಗಾಗಲೇ ಕಾಲು ಹೊರಗೆ ಇಟ್ಟಿದ್ದಾರೆ.

ಹೀಗಾಗಿ ನಮ್ಮಲ್ಲಿ ಉಳಿದಿದ್ದು 17 ಶಾಸಕರು ಮಾತ್ರ ಹಾಗೂ ಬಿಜೆಪಿಯ ಹೆಚ್ಚುವರಿ 6 ಮತಗಳು ಬರಬಹುದು ಎನ್ನುವುದು ನಮಗಷ್ಟೇ ಅಲ್ಲ, ಎಲ್ಲರ ನಿರೀಕ್ಷೆಯೂ ಆಗಿತ್ತು. ಹೀಗೆಯೇ ಎಲ್ಲಾ ಸೇರಿ ಒಟ್ಟಾರೆ ನಮ್ಮ ಅಭ್ಯರ್ಥಿಗೆ 24 ಮತಗಳು ಬರಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿದ್ದೆವು. ಆದರೆ, ಕೆಲ ಶಾಸಕರು ಪಕ್ಷದ ಜೊತೆ ಗಟ್ಟಿಯಾಗಿ ನಿಲ್ಲಲಿಲ್ಲ, ಅನುದಾನಕ್ಕಾಗಿ ಚಂಚಲರಾಗಿದ್ದಾರೆ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಕ್ಷ ಬಿಡುವವರು ಬಿಡಲಿ

ಜೆಡಿಎಸ್ ಶಾಸಕರ ಸಭೆಯಲ್ಲಿ ಕೆಲವು ವಿಷಯಗಳನ್ನು ನಾನು ಮುಕ್ತವಾಗಿ ಮಾತನಾಡಿದ್ದೇನೆ. ಅವರ ಭವಿಷ್ಯಕ್ಕೆ ತೊಂದರೆ ಕೊಡಲು ನಾನು ಬಯಸುವುದಿಲ್ಲ, ಬೇರೆ ಕಡೆ ಅನುಕೂಲವಾಗುತ್ತದೆ, ಹೋಗುತ್ತೇನೆ ಎಂದರೆ ನಾನು ತಡೆಯುವುದಕ್ಕೆ ಹೋಗುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಸಕರು ಬೇರೆ ಕಡೆಗೆ ಹೋಗಬೇಕು ಅಂದರೆ ಧೈರ್ಯವಾಗಿ ನನಗೆ ಹೇಳಿಯೇ ಹೋಗಿ ಅಂತ ಹೇಳಿದ್ದೇನೆ. ಅದನ್ನು ಬಿಟ್ಟು ಇಂತಹ ಕೆಲಸಗಳನ್ನು ಮಾಡಿ ಪಕ್ಷಕ್ಕೆ ಧಕ್ಕೆ ತರಬೇಡಿ ಎಂದು ಹೇಳಿದ್ದೇನೆ. ಶಾಸಕರ ಸಭೆಯಲ್ಲಿ ಒಬ್ಬರು ಬಿಟ್ಟರೆ ಉಳಿದ 17 ಮಂದಿ ಹಾಜರಿದ್ದರು. ಅವರೊಂದಿಗೆ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದೇನೆ ಎಂದು ತಿಳಿಸಿದರು.



> ಕೇವಲ ಈ ಸೀಟ ಇಟ್ಟುಕೊಂಡು ನಮ್ಮ ನಡುವೆ ಬಿಕ್ಕಟ್ಟು ಸೃಷ್ಟಿಸಬಹುದು ಎಂದು ಕಾಂಗ್ರೆಸ್ ಪಕ್ಷ ನಂಬಿದ್ದರೆ ಅವರಿಗೆ ನಿರಾಶೆ ಆಗುವುದು ಖಚಿತ. ಅವರ ಆಸೆ ಖಂಡಿತಾ ಕೈಗೂಡುವುದಿಲ್ಲ, ಪರಿಷತ್ ಚುನಾವಣೆ ಮುಂದಿನ ವಿಧಾನಸಭೆಗೆ ದಿಕ್ಸೂಚಿಯೂ ಅಲ್ಲ.
> ■ **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಇಂದು ಹರಿಪ್ರಸಾದ್ ಪದಗ್ರಹಣ

• **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಅವರು ಜೂ.21ರಂದು ಪದಗ್ರಹಣ ಮಾಡಲಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭಕ್ಕೆ ಭರ್ಜರಿ ಸಿದ್ಧತೆ ಕೈಗೊಳ್ಳಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಮುಖಂಡರು ಭಾಗವಹಿಸುವ ನಿರೀಕ್ಷೆ ಇದೆ.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಬೆಳಗ್ಗೆ 11 ಗಂಟೆಗೆ ಪಕ್ಷದ ಧ್ವಜವನ್ನು ಬಿ.ಕೆ. ಹರಿಪ್ರಸಾದ್ ಅವರಿಗೆ ಹಸ್ತಾಂತರಿಸುವ ಮೂಲಕ ಅಧಿಕಾರ ವರ್ಗಾವಣೆ ನೆರವೇರಿಸಲಿದ್ದಾರೆ. ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಸೇರಿದಂತೆ ಸಚಿವರು, ಶಾಸಕರು ಮತ್ತು ಹಿರಿಯ ನಾಯಕರು ವೇದಿಕೆಯಲ್ಲಿ ಉಪಸ್ಥಿತರಿರುತ್ತಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಅವರು, ಕಾರ್ಯಕ್ರಮಕ್ಕೆ ಆಗಮಿಸುವ ಕಾರ್ಯಕರ್ತರ ಅನುಕೂಲಕ್ಕಾಗಿ 70 ಆಹಾರ ವಿತರಣಾ ಕೇಂದ್ರಗಳನ್ನು ತೆರೆಯಲಾಗಿದ್ದು, ಬೆಳಗ್ಗೆ 8 ಗಂಟೆಯಿಂದ ಉಪಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ, ಕುಡಿಯುವ ನೀರು ಮತ್ತು ಮಜ್ಜಿಗೆಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಸುಮಾರು 1,200 ಬಸ್‌ಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದ್ದು, ಸ್ಥಳದಲ್ಲಿ 6 ಆ್ಯಂಬುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ ಎಂದರು.

ನೀಟ್ ಮರುಪರೀಕ್ಷೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯಕರ್ತರು ಸಹಕರಿಸಬೇಕು ಎಂದು ಸೂಚನೆ ನೀಡಲಾಗಿದೆ.

ಪೊಲೀಸ್ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ವಿಶೇಷ ರೂಟ್‌ಮ್ಯಾಪ್ ಸಿದ್ಧಪಡಿಸಲಾಗಿದ್ದು, ಕಾರ್ಯಕ್ರಮದ ನಿರ್ವಹಣೆಗೆ ಎಂಟು ಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

ಪುಟ 1 ➡ ಅಂಚಿಪುರ, ಬನ್ನಿಗಿರಿ, ಗೊಲ್ಲಹಳ್ಳಿ ಸೇರಿದಂತೆ 8 ಗ್ರಾಮಗಳ ರೈತರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆಯಡಿ ಅಂಚಿಪುರ, ಬನ್ನಿಗಿರಿ, ಮರಳೇಗೌಡನದೊಡ್ಡಿ, ಗುಂಡುಕೋಟೆ, ಗೊಲ್ಲಹಳ್ಳಿ, ಕೊಡಿಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ 518 ಎಕರೆ ಕೃಷಿ ಭೂಮಿಗೆ ಈಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಜೊತೆಗೆ ಹೆಚ್ಚುವರಿ 7,481 ಎಕರೆ ಭೂಸ್ವಾಧೀನಕ್ಕೆ ಸರ್ಕಾರ ಮುಂದಾಗಿದೆ. ಇದರಿಂದ 755 ರೈತ ಕುಟುಂಬಗಳು, ಮಾಸಿಕ 6 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಹೈನುಗಾರಿಕೆ, ರೇಷ್ಮೆ-ತೋಟಗಾರಿಕೆ ಹಾಗೂ 10 ಲಕ್ಷ ಹಸಿರು ವೃಕ್ಷಗಳಿಗೆ ಧಕ್ಕೆಯಾಗಲಿದೆ ಎಂದು ನಿಖಿಲ್ ಹೇಳಿದ್ದಾರೆ.

ಪಕ್ಷಾತೀತ ಹೋರಾಟ: 450 ದಿನಗಳಿಂದ ರೈತರು ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಯೋಜನೆಯಿಂದ ರೈತರ ಬದುಕೇ ಹೊರಡಿಸಿಯಾಗಲಿದ್ದು, ನಮ್ಮ ಈ ಹೋರಾಟ ಪಕ್ಷಾತೀತವಾಗಿ ನಡೆಯಲಿದ್ದು, ಸರ್ಕಾರದ ಅಂತಿಮ ಅಧಿಸೂಚನೆಯನ್ನು ವಾಪಸು ಪಡೆಯಬೇಕು ಎಂದು ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದ್ದಾರೆ. ಪಾದಯಾತ್ರೆಗೆ ವಿವಿಧ ರೈತ ಸಂಘಟನೆಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಬೆಂಬಲ ಸೂಚಿಸಿದ್ದು, ನಮ್ಮ ಪಾದಯಾತ್ರೆಯಲ್ಲಿ ಭಾಗಿಯಾಗಿಯಾಗಲಿದ್ದಾರೆ ಎಂದರು.

ನಾನು ಹೇಳಿದ್ದೆಲ್ಲವೂ ದಾಖಲೆಯಲ್ಲಿದೆ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ನಾನು ಹೇಳಿದ್ದೆಲ್ಲವೂ ದಾಖಲೆಗಳಲ್ಲಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಬಗ್ಗೆ ವಿಧಾನಸಭೆಯಲ್ಲಿ ಈ ಹಿಂದೆಯೇ ಚರ್ಚೆ ಆಗಿತ್ತು. ಸದನ ಕಲಾಪದಲ್ಲಿ ಬಿಡದಿ ಟೌನ್‌ಶಿಪ್ ಮಾಡುವ ವಿಚಾರದ ಬಗ್ಗೆ ವಿಸ್ತೃತ ಚರ್ಚೆ ನಡೆದಿತ್ತು. ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸಚಿವರೊಬ್ಬರು ಸಮಿತಿ ರಚನೆ ಮಾಡಿದ್ದರು. ಆ ಬಗ್ಗೆ ನಾನು ಅಂದಿನ ಮುಖ್ಯಮಂತ್ರಿ ಆಗಿ ವಿವರ ಹೇಳಿದ್ದೇನೆ ಎಂಬುದು ದಾಖಲೆಯಲ್ಲಿದೆ ಎಂದಿದ್ದಾರೆ. ಟೌನ್‌ಶಿಪ್‌ಗಾಗಿ ರೈತರ ಒಂದಿಂಚೂ ಫಲವತ್ತಾದ ಭೂಮಿ ಸ್ವಾಧೀನ ಮಾಡುವ ವಿಚಾರ ಇಲ್ಲ ಎಂದಿದ್ದೇನೆ. ಇದ್ದರೂ ದಿನಗಳಲ್ಲಿ ಸುದ್ದಿಗೋಷ್ಠಿ ನಡೆಸಿ ಎಲ್ಲವನ್ನೂ ಹೇಳುತ್ತೇನೆ. ಆಗ ಸತ್ಯ ಏನೆ ಇದ್ದು, ಈ ಯೋಜನೆಯನ್ನು ವಿರೋಧಿಸಿದವರು ಇವತ್ತು ಬೇರೆ ಪಕ್ಷದಲ್ಲಿದ್ದು ಮಾತು ಬದಲಿಸುತ್ತಿದ್ದಾರೆ ಎಂದು ಟೀಕಿಸಿದರು. ಭೂ ಮಾಲೀಕರಿಗೆ ಶಾಸಕ ಪರಿಹಾರದ ಚೆಕ್ ಕೊಟ್ಟ ಬಗ್ಗೆ ದೇವದಾ ಮಾಡಿದ ಕೇಂದ್ರ ಸಚಿವರು, ಭೂ ಸ್ವಾಧೀನ ಅಧಿಕಾರ ಎಂಬ ವ್ಯಕ್ತಿ ಇರುತ್ತಾನೆ. ಆತನಾ ಆ ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳು ಇರುತ್ತಾರೆ, ಅವರು ಪರಿಹಾರದ ಚೆಕ್ ಕೊಡಬೇಕಾಗುತ್ತದೆ. ಕೆಲವರು ಚೆಕ್ ತೆಗೆದುಕೊಂಡಿದ್ದಾರೆ. ಆ ಹಣ ಎಷ್ಟು ದಿನ ಇರುತ್ತದೆ? 2 ಕೋಟಿ 30 ಲಕ್ಷದ ಚೆಕ್ ಕೊಟ್ಟು ರೈತರಿಗೆ ಏನೆ ಹುಟ್ಟಿಸಿದ್ದಾರೆ. 20 ವರ್ಷಕ್ಕೆ 2 ಕೋಟಿ ಹಣವನ್ನು ಎಫ್‌ಡಿ ಇಟ್ಟರೆ ಹೆಚ್ಚೆಂದರೆ 40 ಲಕ್ಷ ಬಡ್ಡಿ ಸಿಗಬಹುದು. ಅದರ ಬದಲಿಗೆ ಜಮೀನನ್ನ ಹಾಗೆ ಇಟ್ಟುಕೊಂಡರೆ 20 ಕೋಟಿ ಬೆಲೆ ಬಾಳುತ್ತದೆ ಎಂದು ಸಚಿವರು ಹೇಳಿದರು.

ರಾಜ್ಯಕ್ಕೆ ಕೇಂದ್ರದ ಯೋಜನೆ ತರಲು ಅಧಿಕಾರಿಗಳ ತಂಡ

ಪುಟ 1 ➡ ಈಗಾಗಲೇ ದಿಲ್ಲಿಗೆ ತೆರಳಿ ಕರ್ನಾಟಕದ ಅಧಿಕಾರಿಗಳ ಸಭೆ ನಡೆಸಿ ಅವರ ಸಲಹೆ ಪಡೆದಿದ್ದೇನೆ. ನಮ್ಮ ಅಧಿಕಾರಿಗಳು ಹಲವಾರು ಸಲಹೆ ನೀಡಿದ್ದು, ಕರ್ನಾಟಕದ ಏಳಿಗೆಗೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ದಿಲ್ಲಿಯಲ್ಲಿರುವ ನಮ್ಮ ಅಧಿಕಾರಿಗಳ ತಂಡವನ್ನು ರಚಿಸಿಕೊಂಡು ಇಲಾಖೆಗಳ ಅನುಗುಣವಾಗಿ ಸಲಹೆ ನೀಡಲು ಮುಂದೆ ಬಂದಿದ್ದಾರೆ. ಇದರ ಜೊತೆಗೆ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ನಿವೃತ್ತ ಅಧಿಕಾರಿಗಳನ್ನು ಈ ತಂಡಕ್ಕೆ ನೇಮಕ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ವಿದ್ಯುತ್ ಸಂಪರ್ಕಕ್ಕೆ 15 ದಿನ ಕಾಲಾವಕಾಶ

ಪುಟ 1 ➡ ಗ್ರಾಮೀಣ ಭಾಗದ ರೇಷ್ಮೆ ಸಾಕಾಣಿಕೆ ಮನೆ, ಹೈನುಗಾರಿಕೆ ಕೊಟ್ಟಿಗೆಗಳಿಗೆ ವಿನಾಯಿತಿ ನೀಡಲಾಗಿದೆ. ಹೊಸದಾಗಿ ನಿರ್ಮಾಣ ಮಾಡಿದರೆ ಅವಕಾಶವಿಲ್ಲ. ಇಂಧನ ಸಚಿವರು, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸಚಿವರ ಬಳಿ ಇದರ ಬಗ್ಗೆ ವಿವರವಾಗಿ ಚರ್ಚೆಸಲಾಗಿದೆ ಎಂದು ಮಾಹಿತಿ ನೀಡಿದರು.

224 ಕ್ಷೇತ್ರಗಳಲ್ಲೂ ಕಡ್ಡಾಯ ಸಭೆ

ಪುಟ 1 ➡ ಸ್ಥಳೀಯ ಶಾಸಕರ ಜವಾಬ್ದಾರಿ ಏನೆಂಬುದನ್ನು ಮುಂದೆ ವಿವರಿಸಲಾಗುವುದು ಎಂದು ಸಿಎಂ ಡಿಕೆಶಿ ತಿಳಿಸಿದರು. ನಮಗೆ ಜನರ ಹಿತ ಮುಖ್ಯ. ಇಲ್ಲಿ ಯಾರೂ ಸರ್ವಜ್ಞರಲ್ಲ. ಸಕಲ, ಇ- ಆಡಳಿತ ಸೇರಿದಂತೆ ಎಲ್ಲವನ್ನು ಬಳಸಿ ಜನರ ಸಮಸ್ಯೆ ನಿವಾರಿಸಲಾಗುವುದು. ಮಾಧ್ಯಮದಲ್ಲಿ ಬಂದಂತಹ ವಿಚಾರಗಳನ್ನು ತಿಳಿದು ನಾವೂ ಕ್ರಮ ತೆಗೆದುಕೊಳ್ಳುತ್ತೇವೆ. ಮಾಧ್ಯಮಗಳ ಗಮನಕ್ಕೆ ಬಂದಿದ್ದನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಯು.ಟಿ.ಖಾದರ್, ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕಾರ್ಯದರ್ಶಿ ರಾಜೇಂದ್ರ ಚೋಳನ್ ಮತ್ತಿತರರಿದ್ದರು.

ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಅನಿವಾರ್ಯ

• **ಬೆಂಗಳೂರು:** ರಾಜ್ಯದಲ್ಲಿ ಬಸ್ ಪ್ರಯಾಣ ದರ ಏರಿಕೆಯನ್ನು ಜನರ ಹಿತದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಸ್ ಟಿಕೆಟ್ ದರ ಏರಿಕೆ ವಿಚಾರವಾಗಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಖಾಸಗಿ ಹಾಗೂ ನಿಗಮದ ಡಿಪೋಗಳಲ್ಲಿನ ಡೀಸೆಲ್ ಬೆಲೆ ವ್ಯತ್ಯಾಸ ದರ ಸುಮಾರು 40 ರೂ.ಗಳಷ್ಟಿದೆ. ಇದು ಗಾಬರಿಯಾಗುವ ಸಂಖ್ಯೆ. ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಆಗಬೇಕು ಎಂದು ಈ ಹಿಂದೆ ತೀರ್ಮಾನ ಮಾಡಲಾಗಿತ್ತು. ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದರು. ಕೆಎಸ್‌ಆರ್‌ಟಿಸಿಯ ಉಳಿವಿಗೆ, ಜನರಿಗೂ ಅನುಕೂಲವಾಗಬೇಕು. ವಿಕಲಚೇತನ ಪ್ರಧಾನ ಮಂತ್ರಿಗಳೇ ಸಾರ್ವಜನಿಕ ಸಾರಿಗೆಗಳನ್ನು ಬಳಸಿ ಇಂಧನ ಉಳಿಸಿ ಎಂದು ಮಾರ್ಗದರ್ಶನ ನೀಡಿದ್ದಾರೆ. ಇದರ ಬಗ್ಗೆ ಜನರ ಹಿತ ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಲಾಗುವುದು. ಖಾಸಗಿಯವರು ಡಿಪೋಗಳ ಬದಲಾಗಿ ಸಾರ್ವಜನಿಕರಿಗೆ ಇರುವ ಬಂಕ್‌ಗಳಲ್ಲಿ ಡೀಸೆಲ್ ಖರೀದಿ ಮಾಡುತ್ತಿದ್ದಾರೆ. ಇದರ ಬಗ್ಗೆ ವರದಿ ಕೇಳಿದ್ದೇನೆ ಎಂದು ಹೇಳಿದರು.

ಇಂದು ನೀಟ್(ಯುಜಿ)

ಪುಟ 1 ➡ ಅಭ್ಯರ್ಥಿಗಳು ಪೋಸ್ಟ್‌ಕಾರ್ಡ್ ಅಳತೆಯ ಭಾವಚಿತ್ರವಿರುವ ಹೊಸ ಪ್ರವೇಶ ಪತ್ರದ (ಅಡ್ಮಿಟ್ ಕಾರ್ಡ್) ಪ್ರಿಂಟ್ ಮಾಡಿದ ಕಲರ್ ಪ್ರತಿಯನ್ನು ತರಬೇಕು. ಮೂಲ ಸರ್ಕಾರಿ ಗುರುತಿನ ಚೀಟಿ, ಹೆಚ್ಚುವರಿ ಭಾವಚಿತ್ರಗಳು ಮತ್ತು ಪಾರದರ್ಶಕ ನೀರಿನ ಬಾಟಲಿ ತರಬೇಕು. ಹಗುರ ಉಡುಪುಗಳು ಮತ್ತು ಚಪ್ಪಲಿಗಳನ್ನು ಧರಿಸಬೇಕು. ಅಭ್ಯರ್ಥಿಗಳು ಪೂರ್ಣ ತೋಳಿನ ಬಟ್ಟೆ, ಶೂಗಳು ಅಥವಾ ಆಭರಣಗಳನ್ನು ಧರಿಸುವಂತಿಲ್ಲ. ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಫೋನ್‌ಗಳು, ಸ್ಮಾರ್ಟ್‌ವಾಚ್‌ಗಳು, ಕ್ಯಾಲ್ಕುಲೇಟರ್‌ಗಳು, ವ್ಯಾಲೆಟ್‌ಗಳು ಮತ್ತು ಆಹಾರದ ಪ್ಯಾಕೆಟ್‌ಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಕೇಂದ್ರ ಸೂಪರಿಂಟೆಂಡೆಂಟ್‌ಗಳು ಮತ್ತು ವೀಕ್ಷಕರನ್ನು ನೇಮಿಸಲಾಗಿದೆ. ಮರು ಪರೀಕ್ಷೆ ಸುಗಮ ಮತ್ತು ನ್ಯಾಯಯುತವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಪೊಲೀಸ್ ಮತ್ತು ಜಿಲ್ಲಾಡಳಿತ ಅಧಿಕಾರಿಗಳು ಸೇರಿದಂತೆ 2 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

ಜನೌಷಧಿ ಕೇಂದ್ರದಲ್ಲಿ ಇತರೆ ವಸ್ತು ಮಾರಾಟ: ಪರಿಶೀಲನೆ

• **ಬೆಂಗಳೂರು:** ಜನೌಷಧಿ ಕೇಂದ್ರಗಳಲ್ಲಿ ಔಷಧಿಗಳ ಹೊರತಾಗಿ ಇತರೆ ವಸ್ತುಗಳ ಮಾರಾಟ ನಡೆಯುತ್ತಿರುವ ಕುರಿತು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ, ಅವುಗಳ ಕಾರ್ಯವೈಖರಿ ಹಾಗೂ ಸಮಸ್ಯೆಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜನೌಷಧಿ ಕೇಂದ್ರಗಳಲ್ಲಿ ಮಾರಾಟವಾಗುತ್ತಿರುವ ಔಷಧಿಗಳ ಗುಣಮಟ್ಟ ಅವುಗಳಿಗೆ ಸರ್ಕಾರದ ದೃಢೀಕರಣ ಸೇರಿದಂತೆ ವಿವಿಧ ಅಂಶಗಳನ್ನು ಪರಿಶೀಲಿಸಲಾಗುವುದು ಎಂದರು. ಇದು ಯಾವುದೇ ರೀತಿಯ ದಾಳಿ ಅಲ್ಲ, ಕೇಂದ್ರಗಳ ಕಾರ್ಯನಿರ್ವಹಣೆ ಮತ್ತು ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಅಧಿಕಾರಿಗಳು ಭೇಟಿ ನೀಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು. ಮತ್ತೊಂದೆಡೆ ಸಮುದಾಯ ಸೇವೆಯ ಔಷಧಿ ಸಂಗ್ರಹ ಮೊರೆಯುತ್ತಿಲ್ಲ ಎಂಬ ಸಮಸ್ಯೆಯನ್ನು ಕೇಂದ್ರಗಳ ಮಾಲೀಕರು ತಮ್ಮ ಗಮನಕ್ಕೆ ತಂದಿದ್ದಾರೆ ಎಂದು ಸಚಿವರು ತಿಳಿಸಿದರು.

ಕಲಬುರಗಿಯಲ್ಲೇ ಅತಿ ಹೆಚ್ಚು ಕಟ್ಟಡ ದುರಾವಸ್ಥೆ | ಜೀವ ಭಯದ ನಡುವೆ ಪಾಠ ಕೇಳುವ ವಿದ್ಯಾರ್ಥಿಗಳು
ಶಿಥಿಲಾವಸ್ಥೆಯಲ್ಲಿ ಕಲ್ಯಾಣದ 16,727 ಸರ್ಕಾರಿ ಶಾಲಾ ಕೊಠಡಿಗಳು

▪ ರಾಚಪ್ಪಾ ಜಂಬಗಿ

• **ಕಲಬುರಗಿ:** ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಕುರಿತು ಸರ್ಕಾರಗಳು ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿರುವಾಗಲೇ, ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳ ಮೂಲಸೌಕರ್ಯದ ದುಸ್ಥಿತಿ ಆತಂಕಕಾರಿ ಚಿತ್ರಣ ತೆರೆದಿಟ್ಟಿದೆ.

ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ, ಸ್ಥಾನ ಕಲಬುರಗಿ ಸೇರಿದಂತೆ ಭಾಗದ ಏಳು ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮೈನರ್, ಮೇಜರ್ ಸೇರಿ ಒಟ್ಟು 16,727 ಶಾಲಾ ಕೊಠಡಿಗಳು ಶಿಥಿಲಾವಸ್ಥೆಗೆ ತಲುಪಿದ್ದು, ಸಾವಿರಾರು ವಿದ್ಯಾರ್ಥಿಗಳು ಜೀವಭಯದ ನಡುವೆ ಪಾಠ ಕೇಳುವಂತಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ,ಬೀದರ್, ಯಾದಗಿರಿ, ರಾಯಚೂರು,ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಸೇರಿದಂತೆ ಏಳು ಜಿಲ್ಲೆಗಳಲ್ಲಿ 8,492 ಶಾಲಾ ಕೊಠಡಿಗಳು ದೊಡ್ಡ ಪ್ರಮಾಣದಲ್ಲಿ ರಿಪೇರಿ ಅಗತ್ಯವಿರುವ ಸ್ಥಿತಿಯಲ್ಲಿದ್ದರೆ, 8,235 ಕೊಠಡಿಗಳು ಸಣ್ಣ ಪ್ರಮಾಣದ ರಿಪೇರಿ ಅಗತ್ಯವಿರುವ ಸ್ಥಿತಿಯಲ್ಲಿವೆ.

ಮಳೆಗಾಲ ಆರಂಭವಾಗಿರುವ ಈ ಸಂದರ್ಭದಲ್ಲಿ ಶಾಲೆಗಳ ಮೇಲ್ಛಾವಣಿ ಸೋರುವುದು, ಗೋಡೆಗಳಲ್ಲಿ ಬಿರುಕು ಕಾಣಿಸಿಕೊಳ್ಳುವುದು, ಪ್ಲಾಸ್ಟರ್ ಉದುರುವುದು ಹಾಗೂ ಕೆಲವೆಡೆ ಕಟ್ಟಡಗಳು ಕುಸಿಯುವ ಭೀತಿ ಎದುರಾಗಿರುವುದು ಪೋಷಕರು ಮತ್ತು ಶಿಕ್ಷಕರಲ್ಲಿ ಆತಂಕ ಮೂಡಿಸಿದೆ.

ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತ ಕಚೇರಿ ಕಲಬುರಗಿ ವಿಭಾಗ ನೀಡಿದ ಮಾಹಿತಿಯಂತೆ ಜಿಲ್ಲಾವಾರು ಶಿಥಿಲ ಶಾಲಾ ಕೊಠಡಿಗಳ ಸಂಖ್ಯೆ ಗಮನಿಸಿದಾಗ ಕಲಬುರಗಿ-2,838



ತಾಲೂಕು	ಸಣ್ಣ ಪ್ರಮಾಣ	ದೊಡ್ಡ ಪ್ರಮಾಣ
ಆಳಂದ	427	340
ಅಫಜಲಪುರ	506	210
ಚಿಂಚೋಳಿ	223	293
ಚಿತ್ತಾಪುರ	764	727
ಕಲಬುರಗಿ ದಕ್ಷಿಣ	150	158
ಜೇವರ್ಗಿ	275	317
ಸೇಡಂ	216	245
ಕಲಬುರಗಿ ಉತ್ತರ	135	209

ಒಟ್ಟು 2696 ಸಣ್ಣ ಪ್ರಮಾಣದಲ್ಲಿ, 2499 ದೊಡ್ಡ ಪ್ರಮಾಣದಲ್ಲಿ ಕೊಠಡಿ ಶಿಥಿಲಗೊಂಡಿವೆ

ಮೈನರ್, 2,039 ಮೇಜರ್ ಆಗಿ ಶಿಥಿಲಗೊಂಡಿವೆ. ಅದೇ ರೀತಿ ಬೀದರ್-1,192-1,097, ಯಾದಗಿರಿ-720-969, ಕೊಪ್ಪಳ-1,009-846, ರಾಯಚೂರ-978-1,342, ವಿಜಯನಗರ -819 -1,148, ಬಳ್ಳಾರಿ-679 -1,051

ಶಾಲಾ ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ. ಈ ಪೈಕಿ ಕಲಬುರಗಿ ಜಿಲ್ಲೆಯಲ್ಲೇ ಅತಿ ಹೆಚ್ಚು ಶಿಥಿಲ ಶಾಲಾ ಕೊಠಡಿಗಳನ್ನು ಹೊಂದಿರುವ ಜಿಲ್ಲೆ ಎಂಬುದು ಆಂಕಿ-ಅಂಶಗಳಿಂದ ಸ್ಪಷ್ಟವಾಗಿದೆ.

ಕೋಟ್ಯಂತರ ಅನುದಾನ ಎಲ್ಲಿಗೆ? ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿ ಮೀಸಲಿಡುತ್ತಿದ್ದರೂ, ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಕ್ಷರ ಆವಿಷ್ಕಾರ ಯೋಜನೆಯ ಅನುದಾನದ ಶೇ.25% ಹಣ ಶಿಕ್ಷಣಕ್ಕೆ ಮೀಸಲಿಟ್ಟರೂ ಶಾಲಾ ಮೂಲಸೌಕರ್ಯಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಎಂಬುದು ಮೇಲಿನ ಅಂಕಿ ಅಂಶಗಳಿಂದಲೇ ಕಂಡುಬರುತ್ತದೆ.

ಜಿಲ್ಲೆಯಲ್ಲಿಯೇ ರಾಜ್ಯದ ಗ್ರಾಮ ಸಚಿವ ಪ್ರಿಯಾಂಕ್ ಖರ್ಗೆ ಅವರ ಸ್ವಕ್ಷೇತ್ರವಾದ ಚಿತ್ತಾಪುರ ತಾಲೂಕಿನಲ್ಲಿ ಅತಿ ಹೆಚ್ಚು ಶಿಥಿಲ ಶಾಲಾ ಕೊಠಡಿಗಳು ಕಂಡುಬಂದಿದ್ದು, 764

> ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಸಮಗ್ರ ಸಮೀಕ್ಷೆ ನಡೆಸಿ ಅಪಾಯಕಾರಿ ಕಟ್ಟಡಗಳನ್ನು ತಕ್ಷಣ ತೆರವುಗೊಳಿಸುವುದು ಹಾಗೂ ಹೊಸ ಕೊಠಡಿಗಳ ನಿರ್ಮಾಣಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಮಕ್ಕಳ ಸುರಕ್ಷತೆ ಹಾಗೂ ಗುಣಮಟ್ಟದ ಶಿಕ್ಷಣಕ್ಕಾಗಿ ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕಿದೆ. ಮಕ್ಕಳ ಭವಿಷ್ಯ ರೂಪುಗೊಳ್ಳಬೇಕಾದ ಶಾಲೆಗಳು ಇಂದು ಶಿಥಿಲ ಕಟ್ಟಡಗಳ ನೆರಳಲ್ಲಿ ನಿಂತಿರುವುದು ಶಿಕ್ಷಣ ವ್ಯವಸ್ಥೆಯ ಕಹಿ ವಾಸ್ತವವಾಗಿದೆ.
> ■ **ಎಂ.ಎಸ್.ಪಾಟೀಲ ನರಿಬೋಳ,** ಅಧ್ಯಕ್ಷ, ಕಲ್ಯಾಣ ಕರ್ನಾಟಕ ಪ್ರತ್ಯೇಕ ಹೋರಾಟ ಸಮಿತಿ

> ಕ.ಕ.ಭಾಗದಲ್ಲಿ ಒಟ್ಟು 8,235 ಶಾಲಾ ಕೊಠಡಿಗಳು ಮೈನರ್ ಆಗಿ ಹಾಗೂ 8492 ಕೊಠಡಿ ಮೇಜರ್ ಆಗಿ ಶಿಥಿಲಾವಸ್ಥೆಯಲ್ಲಿದ್ದು, ಎಲ್ಲಾ ಉಪ ನಿರ್ದೇಶಕರಿಂದ ಕ್ರಿಯಾ ಯೋಜನೆ ತರಿಸಿಕೊಂಡು ಸರ್ಕಾರಕ್ಕೆ ಹಾಗೂ ಸಂಬಂಧಪಟ್ಟ ಶಿಕ್ಷಣ ಇಲಾಖೆಗೆ ದುರಸ್ತಿ ಕಾರ್ಯಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಂತ ಹಂತಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ದುರಸ್ತಿ ಕಾರ್ಯ ನಡೆಯುತ್ತಿದೆ.
> ■ **ಗಣಪತಿ ಬಾರಾಕಟ್ಟಿ,** ಸಹ ನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಾರ್ಯಾಲಯ, ಕಲಬುರಗಿ ವಿಭಾಗ

ವಿಜಯಪುರದಲ್ಲಿ ಶಾಲಾ ಕಟ್ಟಡದ ಮೇಲ್ಛಾವಣಿ ಕುಸಿತ

• **ವಿಜಯಪುರ:** ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಕೊಠಡಿಯೊಂದರ ಶಿಥಿಲಗೊಂಡಿದ್ದ ಕಟ್ಟಡದ ಕ್ಲಾಸ್ ರೂಮ್‌ನ ಮೇಲ್ಛಾವಣಿ ಶನಿವಾರ ರಾತ್ರಿ ಕುಸಿದು ಬಿದ್ದು ಗ್ರಾಮದಲ್ಲಿ ಆತಂಕ ಮೂಡಿಸಿರುವ ಘಟನೆ ನಡೆದಿದೆ. ಈ ಕಟ್ಟಡದಲ್ಲಿ ಶಾಲಾ ತರಗತಿಗಳು ನಡೆಯುತ್ತಿರಲಿಲ್ಲ. ಈ ಕಟ್ಟಡದ ಮೇಲ್ಛಾವಣಿ ವಿಶಾಲವಾಗಿ ಕಿತ್ತು ಬಿದ್ದಿದ್ದು, ಯಾವುದೇ ರೀತಿಯ ಹಾನಿಯಾಗಿಲ್ಲ.

ಮೈನರ್ ಹಾಗೂ 727 ಮೇಜರ್ ರಿಪೇರಿ ಅಗತ್ಯವಿರುವ ಕೊಠಡಿಗಳು ದಾಖಲಾಗಿವೆ.

ಕಿರುಸುದ್ದಿ

ಆಟೋ ಪಲ್ಟಿ: 9 ಮಂದಿ ಗಾಯ



• **ಕೊಳ್ಳೇಗಾಲ:** ತಾಲೂಕಿನ ಕುಂತೂರು ಗ್ರಾಮದಲ್ಲಿ ಗೂಡ್ಸ್ ಆಟೋ ಪಲ್ಟಿಯಾಗಿ ವಾಹನದಲ್ಲಿದ್ದ 9 ಮಂದಿ ಗಾಯಗೊಂಡಿರುವ ಘಟನೆ ಜರುಗಿದೆ. ಕುಂತೂರು ಗ್ರಾಮದ ಮಹದೇವ, ಸೀರಮಾದಮ್ಮ ತೀವ್ರವಾಗಿ ಗಾಯಗೊಂಡು ಮೈಸೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕೋಣನೂರು ಗೋವಿಂದಶೆಟ್ಟಿ, ಮಂಗಳಮ್ಮ, ಕುಂತೂರು ನಿಲ್ಲಮ್ಮ, ಸಿದ್ದರಾಜು, ಪ್ರಸಾದ್, ಸೀಹಳ್ಳಿ ರಾಜಮ್ಮ, ಬಾಲಕ ದರ್ಶನ್ ಸೇರಿದಂತೆ ಇನ್ನೀತರರು ಗಾಯಗೊಂಡು ಕೊಳ್ಳೇಗಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೊಪ್ಪೇಗೌಡನಪುರ ದೇವಸ್ಥಾನದಲ್ಲಿ ದೇವರಗುಡ್ಡದ ಮಣ್ ಹಾಕುವ ಕಾರ್ಯಕ್ರಮಕ್ಕೆ ಕುಂತೂರುವಿಂದ ಹೋಗಲು ಗೂಡ್ಸ್ ವಾಹನದಲ್ಲಿ ತೆರಳುವಾಗ ಪಲ್ಟಿಯಾಗಿ ಗಾಯಗೊಂಡಿದ್ದಾರೆ. ಈ ಸಂಬಂಧ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸಿದ್ದಾರೆ.

ಆರ್ಥಿಕ ಸಹಾಯಕ್ಕಾಗಿ ಅರ್ಜಿ ಆಹ್ವಾನ

• **ದೊಡ್ಡಬಳ್ಳಾಪುರ:** ಜಿಲ್ಲಾ ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ 2026-27ನೇ ಸಾಲಿಗೆ ನೇಕಾರ ಸಮ್ಮಾನ್ ಯೋಜನೆಯಡಿ ಜಿಲ್ಲೆಯಲ್ಲಿರುವ ಪ್ರತಿ ಕೈಮಗ್ಗ/ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಲ್ಲಿ ತೊಡಗಿರುವ ನೇಕಾರರಿಗೆ ವಾರ್ಷಿಕ 5000 ರೂ.ಗಳ ಆರ್ಥಿಕ ನೆರವು ನೀಡುವ ಸಲುವಾಗಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಅನುಕೂಲವಾಗುವಂತೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಈಗಾಗಲೇ 2025-26ನೇ ಸಾಲಿನಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದ ಜಿಲ್ಲೆಯ ಕೈಮಗ್ಗ/ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳ ಮಾಲೀಕರು/ನೇಕಾರ ಕಾರ್ಮಿಕರು ಮತ್ತೊಮ್ಮೆ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ ಹಾಗೂ ಪ್ರಸ್ತುತ ಸಾಲಿನಲ್ಲಿ ಹೊಸದಾಗಿ ವಿದ್ಯುತ್ ಮಗ್ಗ ಚಟುವಟಿಕೆಯನ್ನು ಪ್ರಾರಂಭಿಸಿರುವ ಕೈಮಗ್ಗ/ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳ ಮಾಲೀಕರು/ನೇಕಾರ ಕಾರ್ಮಿಕರು ಈ ಕಚೇರಿಯಿಂದ ಅರ್ಜಿಯನ್ನು ಪಡೆದು ದಾಖಲಾತಿಗಳೊಂದಿಗೆ ಜುಲೈ 10 ರೊಳಗೆ ಉಪನಿರ್ದೇಶಕರ ಕಚೇರಿ, ಗಾರ್ಮೆಂಟ್ಸ್ ತರಬೇತಿ ಕೇಂದ್ರದ ಕಟ್ಟಡ, ಕೆಐಎಡಿಬಿ ಅಪೇರಲ್ ಪಾರ್ಕ್, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಈ ವಿಳಾಸಕ್ಕೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂ: 080-29501945 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಡ್ಡಮತದಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ: ಸಂಸದ ಯದುವೀರ್

• **ಮೈಸೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರ ಅಡ್ಡಮತದಾನ ಪ್ರಕರಣವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಶನಿವಾರ ಮೈಸೂರಿನ ಚಾಮರಾಜಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲ ಶಾಸಕರ ಅಡ್ಡ ಮತದಾನಕ್ಕೂ ಪಕ್ಷದ ನಾಯಕತ್ವಕ್ಕೂ ಯಾವುದೇ ಸಂಬಂಧವಿಲ್ಲ. ಈ ಬೆಳವಣಿಗೆಯು ನಾಯಕತ್ವದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಜೆಡಿಎಸ್-ಬಿಜೆಪಿ ಮೈತ್ರಿ ಮೇಲೂ ಕೆಟ್ಟ ಪರಿಣಾಮ ಉಂಟಾಗುವುದಿಲ್ಲ ಎಂದು ಹೇಳಿದರು.

ಇಡೀ ಪ್ರಕರಣವನ್ನು ಪಕ್ಷ ಗಂಭೀರವಾಗಿ ತೆಗೆದುಕೊಂಡಿದೆ. ಅಡ್ಡಮತದಾನ ಮಾಡಿದವರನ್ನು ಪತ್ತೆ ಹಚ್ಚುತ್ತೇವೆ. ಅದಕ್ಕೂ ಪಕ್ಷದಲ್ಲಿ ವ್ಯವಸ್ಥೆ ಇದೆ. ಅದರಂತೆ ನಡೆಯುತ್ತದೆ ಎಂದರು. ಇವೆಲ್ಲವೂ ಸಹಜ ಹಾಗೂ ರಾಜಕಾರಣದಲ್ಲಿ ನಡೆಯುವಂತಹವೇ. ಇದರಲ್ಲಿ ಮುಜುಗರ ಪಡುವಂಥದ್ದು ಅಥವಾ ಹಿನ್ನಡೆ ಎನ್ನುವುದು ಇರುವುದಿಲ್ಲ ಎಂದರು.

ಆರ್‌ಎಸ್‌ಎಸ್ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸುತ್ತಿರುವ ಕುರಿತು ಪ್ರತಿಕ್ರಿಯಿಸಿ, ಅವರ ಪ್ರಶ್ನೆಗಳಿಗೆ ಉತ್ತರಿಸುವ ಅಗತ್ಯ ಇಲ್ಲ, ರಾಜಕಾರಣಕ್ಕಾಗಿ ಏನೇನೋ ಮಾತನಾಡುತ್ತಿದ್ದಾರೆ, ಮಾತನಾಡಲಿ. ಗೃಹ ಸಚಿವರಾಗಿ ಪ್ರಶ್ನೆ ಕೇಳುವ ಹಕ್ಕಿದೆ. ಆದರೆ, ಎಲ್ಲದಕ್ಕೂ ಉತ್ತರ ಕೊಡುವ ಅವಶ್ಯಕತೆ ಇಲ್ಲ ಎಂದು ತಿರುಗೇಟು ನೀಡಿದರು.

ರಸ್ತೆ ಇಕ್ಕೆಲಗಳಲ್ಲಿ ಕಸದ ರಾಶಿ | ದುರಸ್ತಿಯಾಗದ ಚರಂಡಿ | ದುರ್ವಾಸನೆಗೆ ಜನ ಹೈರಾಣ

ಮುಗಬಾಳ ಗ್ರಾ.ಪಂ.ನಲ್ಲಿ ಸೌಲಭ್ಯ ಮರೀಚಿಕೆ

▸ ತಾವರೆಕೆರೆ ಟಿ.ನಾಗರಾಜ್

ದಿಗಂತ ವಿಶೇಷ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ಮುಗಬಾಳ ಗ್ರಾಮ ಪಂಚಾಯಿತಿಗೆ ವ್ಯಾಪ್ತಿಗೆ 12 ಗ್ರಾಮಗಳು ಒಳಪಟ್ಟಿದ್ದರೂ ಸಹ ಮೂಲಸೌಲಭ್ಯಗಳೇ ಮರೀಚಿಕೆಯಾಗಿದೆ. ಜನ ಸೌಲಭ್ಯಗಳ ಕೊರತೆಯಿಂದಾಗಿ ಹೈರಾಣಾಗಿದ್ದು ಸ್ಥಳೀಯ ಆಡಳಿತಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

ಹೊಸಕೋಟೆ ತಾಲೂಕಿನ ಮುಗಬಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆಕ್ಕಸಂದ್ರ, ಗಿಡಗೇನಹಳ್ಳಿ, ಮುಗಬಾಳ, ಎಂ.ಹೊಸಹಳ್ಳಿ, ಅಟ್ಟೂರು, ಗೊಟ್ಟಿಪುರ, ನಕ್ಕನಹಳ್ಳಿ, ಸಿದ್ದಾಪುರ, ಹಲಸಹಳ್ಳಿ, ಕೆಂಬಾಳಹಳ್ಳಿ, ನಿಡಘಟ್ಟ, ಚಿಕ್ಕಪುರ ಗ್ರಾಮಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಎದ್ದುಕಾಣುತ್ತಿದೆ.

ಒಟ್ಟಾರೆ ಜನಸಂಖ್ಯೆ ಹತ್ತು ಸಾವಿರಕ್ಕೂ ಅಧಿಕವಿದ್ದು, 21 ಗ್ರಾಮ ಪಂಚಾಯಿತಿ ಸದಸ್ಯರನ್ನು ಒಳಗೊಂಡು ವರ್ಷಕ್ಕೆ 72 ಲಕ್ಷ ತೆರಿಗೆ ವಸೂಲಿಯಾದರೂ ಕೆಲ ಗ್ರಾಮಗಳಲ್ಲಿ ಮೂಲಭೂತಸೌಲಭ್ಯಗಳೇ ಇಲ್ಲದಂತಾಗಿದ್ದು, ಜನರು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಈ ಗ್ರಾಮದಲ್ಲಿ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಗ್ರಾಮ ಪಂಚಾಯ್ತಿ ಆಡಳಿತ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎನ್ನುವುದು ಕೆಲವು ಗ್ರಾಮಗಳ ಗ್ರಾಮಸ್ಥರ ದೂರಾಗಿದೆ.

ಕಸದ ರಾಶಿ, ವಿಲೇವಾರಿಯಾಗದ ತ್ಯಾಜ್ಯ, ಚರಂಡಿ ಅವ್ಯವಸ್ಥೆ ಸೇರಿದಂತೆ ಸಮಸ್ಯೆಗಳು ಕೆಲವು ಗ್ರಾಮಗಳಲ್ಲಿ ಬೆಟ್ಟದಷ್ಟಿವೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಗ್ರಾಮೀಣ ಪ್ರದೇಶಗಳ ಜನತೆಗೆ ಯಕ್ಷಪ್ರಶ್ನೆಯಾಗಿದೆ.

ಚರಂಡಿ ಹೂಳು ತುಂಬಿ ತುಂಬಿದ್ದು, ಹಲ ತಿಂಗಳು ಸ್ವಚ್ಛಗೊಳಿಸದೇ ಇರುವುದರಿಂದ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದೆ. ಇನ್ನೊಂದೆಡೆ ಚರಂಡಿಯ ನಿರ್ಮಾಣವೇ ಇಲ್ಲದಾಗಿದ್ದು, ಗ್ರಾಮಗಳ ರಸ್ತೆ ಅಂಚಿನಲ್ಲಿ ಕಸದ ರಾಶಿ ಬೆಟ್ಟದಂತೆ ಬಿದ್ದಿರುವುದು ಎದ್ದು ಕಾಣುತ್ತದೆ. ಸಾರ್ವಜನಿಕರು ಮತ್ತು ದ್ವಿಚಕ್ರ ವಾಹನಸವಾರರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.





> ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಡಘಟ್ಟ ಇನ್ನಿತರೆ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳು ಮರೀಚಿಕೆಯಾಗಿವೆ. ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ನೈರ್ಮಲ್ಯ, ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟಡಗಳು, ಆಸ್ಪತ್ರೆ ಕಟ್ಟಡಗಳು, ಅಂಗನವಾಡಿ ಕಟ್ಟಡಗಳು, ನ್ಯಾಯಬೆಲೆ ಅಂಗಡಿಗಳು ಎಲ್ಲಿ ನೋಡಿದರೂ ಕಸದ ರಾಶಿಯೋ ರಾಶಿ. ಸ್ಥಳೀಯರ ಸಮಸ್ಯೆಗಳನ್ನು ವಿಚಾರಣೆ ಮಾಡಲು ಗ್ರಾಮಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದರೆ ಸೂಕ್ತ ಇಲ್ಲದಿದ್ದರೆ ಅಧಿಕಾರಿಗಳದ್ದೇ ದರ್ಬಾರು.
> ■ **ನಾಗರಾಜ್,** ಮುಗಬಾಳ ನಿವಾಸಿ

> ಮುಗಬಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ 12 ಗ್ರಾಮಗಳು ಬರುತ್ತವೆ. ವರ್ಷಕ್ಕೆ 72 ಲಕ್ಷ ತೆರಿಗೆ ವಸೂಲಿ ಆಗಲಿದ್ದು ಅಭಿವೃದ್ಧಿಯಲ್ಲಿ ಕೆಲವು ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಮೋದನೆಗೆ ಕಳಿಸಲಾಗಿದೆ. ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಪಡೆದು ಅನುಕೂಲ ಮಾಡಲಾಗುವುದು.
> ■ **ಲೋಕೇಶ್,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಗಬಾಳ

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಹುತೇಕ ಗ್ರಾಮಗಳಲ್ಲಿ ಚರಂಡಿ ಸ್ವಚ್ಛತೆ ಇಲ್ಲದೆ ದುರ್ವಾಸನೆಯಿಂದಾಗಿ ನೈರ್ಮಲ್ಯದ ಸಮಸ್ಯೆ ಎದುರಾಗಿದೆ. ಗ್ರಾಮದ ಮಧ್ಯಭಾಗದಲ್ಲಿ ದೇವಾಲಯ, ಹಾಲಿನ ಡೈರಿ, ಅಂಗನವಾಡಿ ಮುಂಭಾಗದಲ್ಲಿ ಚರಂಡಿ ಸ್ವಚ್ಛಗೊಳಿಸದೆ ಕಸ ತುಂಬಿ ತುಳುಕುತ್ತಿದೆ.

ಗ್ರಾಮದಲ್ಲಿ ಕೇವಲ ಒಂದೇ ಒಂದು ನ್ಯಾಯಬೆಲೆ ಅಂಗಡಿಯವೂ ಇಲ್ಲ, ಪಂಚಾಯಿತಿಗೆ ಸೇರಿದ ಘನತ್ಯಾಜ್ಯಕ್ಕೆ ಕಟ್ಟಿರುವ ಕಟ್ಟಡದಲ್ಲಿ ದಿನಸಿ ವಿತರಣೆ ಮಾಡಲಾಗುತ್ತಿದೆ. ನಿಡಘಟ್ಟ ಒಂದೇ ಗ್ರಾಮದಲ್ಲಿ ವೇರ್‌ಹೌಸ್ ಕಂಪನಿಗಳಿದ್ದು ವರ್ಷಕ್ಕೆ 20 ಲಕ್ಷಕ್ಕೂ ಅಧಿಕ ತೆರಿಗೆ ವಸೂಲಿಯಾದರೂ ಅಭಿವೃದ್ಧಿಯಲ್ಲಿ ಕುಂಠಿತವಾಗಿದೆ ಎಂದು ಆರೋಪ ಮತ್ತು ಕೆಂಬಾಳಹಳ್ಳಿಯಲ್ಲಿ ಚರಂಡಿ ಸ್ವಚ್ಛತೆ ಇಲ್ಲದೆ ಮತ್ತು ಸ್ಮಶಾನಕ್ಕೆ ರಸ್ತೆ ಇಲ್ಲದೆ ಪರದಾಡುವ ಪರಿಸ್ಥಿತಿ ಎದುರಾಗಿದೆ.

ಸೋರುತ್ತಿದೆ ಅಂಗನವಾಡಿ ಕಟ್ಟಡ

ನಿಡಘಟ್ಟ ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿದ್ದು, 92 ಮಕ್ಕಳು ದಾಖಲಾಗಿವೆ. ಆದರೆ ಒಂದೇ ಕೊಠಡಿಯಲ್ಲಿ 42 ಮಕ್ಕಳನ್ನು ಕೂರಿಸುತ್ತಿದ್ದು ಇರುವ ಕಟ್ಟಡವು ಮಳೆ ಬಂದರೆ ನೀರು ಒಳಗಡೆ ನುಗ್ಗುತ್ತದೆ. ಗೋಡೆಗಳೆಲ್ಲ ಶಿಥಿಲಗೊಂಡಿದ್ದು ಬಿದ್ದು ಹೋಗುವ ಹಂತದಲ್ಲಿದ್ದು ಪೋಷಕರು ಚುನಾಯಿತ ಪ್ರತಿನಿಧಿಗಳ ಮತ್ತು ಮುಖಂಡರುಗಳ ಮೇಲೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.



ಬೆಸ್ಕಾಂ ಖಾಸಗೀಕರಣಕ್ಕೆ ಸಿಬ್ಬಂದಿ ವಿರೋಧ: ಕಾರ್ಯನಿರ್ವಹಣಾಧಿಕಾರಿ

ಖಾಸಗೀಕರಣ ವಿರೋಧಿಸಿ ಬೆಸ್ಕಾಂ ಸಿಬ್ಬಂದಿ ಪ್ರತಿಭಟನೆ

• **ತಾವರೆಕೆರೆ:** ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಸಂಸ್ಥೆಯನ್ನು ಕಂಪನೀಕರಣ ಹಾಗೂ ಖಾಸಗೀಕರಣದ ಹೆಸರಿನಲ್ಲಿ ಖಾಸಗಿ ಸಂಸ್ಥೆಗೆ ಹಸ್ತಾಂತರಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಆತಂಕದ ಹಿನ್ನೆಲೆಯಲ್ಲಿ ಹೊಸಕೋಟೆ ತಾಲೂಕಿನ ಮುಗಬಾಳ ಗ್ರಾಮ ಸಹಾಯಕ ಅಭಿಯಂತರ ವಿದ್ಯುತ್ ಘಟಕದ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿ ವರ್ಗ ಶನಿವಾರ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯಲ್ಲಿ ಮುಗಬಾಳ ಬೆಸ್ಕಾಂ ಸಹಾಯಕ ಅಭಿಯಂತರ, ವಿದ್ಯುತ್ ಘಟಕದ ಕಾರ್ಯನಿರ್ವಹಣಾಧಿಕಾರಿ ನಿಂಗೇಗೌಡ ಅವರು ಮಾತನಾಡಿ, ಬೆಸ್ಕಾಂ ಸಂಸ್ಥೆಯು ಲಕ್ಷಾಂತರ ಗ್ರಾಹಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಸೇವೆ ಒದಗಿಸುತ್ತಿದ್ದು, ಸಾರ್ವಜನಿಕ ವಲಯದ ಈ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಯಾವುದೇ ಕ್ರಮವು ಜನಸಾಮಾನ್ಯರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇದೆ.

ಖಾಸಗಿ ಕಂಪನಿಗಳ ಮುಖ್ಯ ಉದ್ದೇಶ ಲಾಭವಾಗಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸೇವೆಯ ಗುಣಮಟ್ಟ ಹಾಗೂ ಸಿಬ್ಬಂದಿ ಭದ್ರತೆ ಮೇಲೆ ಪರಿಣಾಮ ಬೀಳುವ ಆತಂಕವಿದೆ ಎಂದು ಹೇಳಿದರು.

ಸರ್ಕಾರವು ವಿದ್ಯುತ್ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಮೂಲಸೌಕರ್ಯ ಹಾಗೂ ಸಿಬ್ಬಂದಿ ಸೌಲಭ್ಯಗಳನ್ನು ಹೆಚ್ಚಿಸುವತ್ತ ಗಮನ ಹರಿಸಬೇಕೇ ಹೊರತು ಸಾರ್ವಜನಿಕ ಸಂಸ್ಥೆಗಳನ್ನು ಖಾಸಗಿ ವಲಯಕ್ಕೆ ಒಪ್ಪಿಸುವ ನಿರ್ಧಾರ ಕೈಗೊಳ್ಳಬಾರದು ಎಂದು ಅವರು ಒತ್ತಾಯಿಸಿದರು. ಬೆಸ್ಕಾಂ ಸಿಬ್ಬಂದಿ ಹಲವು ವರ್ಷಗಳಿಂದ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದು, ಸಂಸ್ಥೆಯ ಅಭಿವೃದ್ಧಿಗೆ ಹಮ್ಮುದೇ ಅದ ಕೊಡುಗೆ ನೀಡುತ್ತಿದ್ದಾರೆ. ಆದ್ದರಿಂದ ಸಿಬ್ಬಂದಿ ಅಭಿಪ್ರಾಯಗಳನ್ನು ಪರಿಗಣಿಸಿ ನಿರ್ಧಾರ ಕೈಗೊಳ್ಳಬೇಕು ಎಂದು ಹೇಳಿದರು.



ಪ್ರಸ್ತಾವನೆ ಕೈಬಿಡಲು ಮನವಿ

ವಿದ್ಯುತ್ ಸೇವೆಯು ಜನರ ಮೂಲಭೂತ ಅಗತ್ಯವಾಗಿದ್ದು, ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಬೆಸ್ಕಾಂ ಖಾಸಗೀಕರಣದ ಪ್ರಸ್ತಾವನೆಯನ್ನು ಕೈಬಿಡುವಂತೆ ಸರ್ಕಾರಕ್ಕೆ ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಿಬ್ಬಂದಿ ಬೆಸ್ಕಾಂ ಉಳಿಸಿ, ಸಾರ್ವಜನಿಕ ವಿದ್ಯುತ್ ಸೇವೆಯನ್ನು ಬಲಪಡಿಸಿ ಎಂಬ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಬಾಕಿ ಕಡತಗಳ ಪರಿಶೀಲನೆ

• **ಆನೇಕಲ್:** ತಾಲೂಕು ಕಚೇರಿಯಲ್ಲಿ ಸಾರ್ವಜನಿಕರ ಕೆಲಸಗಳು ವಿನಾಕಾರಣ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿ ವಿಶ್ವನಾಥ್ ಭೇಟಿ ನೀಡಿ ಕಚೇರಿಯಲ್ಲಿ ಬಾಕಿ ಇರುವ ಕಡತಗಳ ಬಗ್ಗೆ ಪರಿಶೀಲನೆ ನಡೆಸಿ ಮಾಹಿತಿ ಪಡೆದರು.

ಇನ್ನು ಸಿಬ್ಬಂದಿ 10ಗಂಟೆಗೆ ಸರಿಯಾಗಿ ಕಚೇರಿಗೆ ಬರಬೇಕು ಎಲ್ಲರೂ ಕಡ್ಡಾಯವಾಗಿ ಗುರುತಿನಕಾರ್ಡ್ ಹಾಗೂ ಹುದ್ದೆಯ ಹೆಸರಿನ ಬೋರ್ಡ್ ಹಾಕಬೇಕು ಎಂದು ಸೂಚನೆ ನೀಡಿದರು. ಇನ್ನು ಕಚೇರಿಯಲ್ಲಿ ಎಲ್ಲಾ ಅರ್ಜಿಗಳು ಇ ಆಫೀಸ್ ಮೂಲಕ ತೆಗೆದುಕೊಳ್ಳಬೇಕು. ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಂಶವೃಕ್ಷ ಹಾಗೂ ವೃದ್ಧಾಪ್ಯವೇತನ, ವಿಧವಾ ವೇತನ ಹಾಗೂ ಸಂಧ್ಯಾ ಸುರಕ್ಷಾ ವೇತನಗಳ ಅರ್ಜಿಗಳು ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲ ಎಂದು ಆರೋಪಗಳು ಕೇಳಿಬಂದಿದೆ, ಇದರ ಬಗ್ಗೆ 2 ತಿಂಗಳಿಂದ ಎಷ್ಟು ಅರ್ಜಿಗಳು ವಿಲೇವಾರಿಯಾಗಿದೆ, ಇನ್ನು ಎಷ್ಟು ಬಾಕಿ ಇದೆ ಎಂಬುದು ಮಾಹಿತಿ ಪಡೆಯಲಾಗಿದೆ. ಒಟ್ಟಾರೆಯಾಗಿ ಸಿಬ್ಬಂದಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುವಂತೆ ತಿಳಿಸಲಾಗಿದೆ. ಒಂದು ವೇಳೆ ವಿನಾಕಾರಣ ಯಾವುದೇ ಕಡತಗಳನ್ನು ಬಾಕಿ ಉಳಿಸಿಕೊಂಡರೆ ಅಂತಹ ಸಿಬ್ಬಂದಿಯ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಸಾರ್ವಜನಿಕರು ಎಸಿ ಅವರಿಗೆ ಅಹವಾಲು ಸಲ್ಲಿಸಿದರು. ಗ್ರೇಡ್ 2 ತಹಸೀಲ್ದಾರ್ ನೀಲಾಬಾಯಿ ಲಂಬಾಣಿ, ಶಿರಸ್ತೇದಾರ್ ಮೋಹನ್ ಹಾಜರಿದ್ದರು.



▸▸ ತಾಲೂಕು ಕಚೇರಿಗೆ ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿ ವಿಶ್ವನಾಥ್ ಭೇಟಿ

ಯೋಜನಾ ನಿರ್ದೇಶಕ ವಿಠಲ್ ಕವಾಳೆ ಅಭಿಮತ

ಮಾಸಿಕ ಸಂತೆಯಿಂದ ಆರ್ಥಿಕಾಭಿವೃದ್ಧಿ

• **ದೊಡ್ಡಬಳ್ಳಾಪುರ:** ಸಂಜೀವಿನಿ ಯೋಜನೆಯಡಿ ಶ್ರೀ ಪ್ರಕೃತಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಕಸಾಘಟ್ಟ ಗ್ರಾಮ ಪಂಚಾಯಿತಿ ವತಿಯಿಂದ ಸಂಜೀವಿನಿ ಮಾಸಿಕ ಸಂತೆಯನ್ನು ತಾಲೂಕಿನ ಕನಸವಾಡಿಯ ಶ್ರೀ ಶನಿಮಹಾತ್ಮಸ್ವಾಮಿ ದೇವಸ್ಥಾನದ ಅನ್ನದಾಸೋಹ ಮುಂದೆ ಆಯೋಜಿಸಿದ್ದ ಮಾಸಿಕ ಸಂತೆಗೆ ಯೋಜನಾ ನಿರ್ದೇಶಕ ವಿಠಲ್ ಕವಾಳೆ ಚಾಲನೆ ನೀಡಿದರು.

ಗ್ರಾಮೀಣ ಭಾಗದ ಸ್ವ-ಸಹಾಯ ಸಂಘಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರು ತಯಾರಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ವೇದಿಕೆ ಕಲ್ಪಿಸಿ, ಅವರು - ಆರ್ಥಿಕವಾಗಿ ಅಭಿವೃದ್ಧಿ ಪಡಿಸಲು ಉತ್ತೇಜನ ನೀಡುವುದಕ್ಕಾಗಿ 'ಮಾಸಿಕ ಸಂತೆ'ಕಾರ್ಯಕ್ರಮ ಅನುಷ್ಠಾನಗೊಳಿಸಿದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ (ಎನ್‌ಆರ್‌ಎಲ್‌ಎಂ) ಸಂಜೀವಿನಿ ಯೋಜನೆ ಯಡಿ ಆರ್ಥಿಕ ನೆರವು ಪಡೆದಿರುವ ಮಹಿಳಾ ಸ್ವಸಹಾಯ ಗುಂಪುಗಳು ತಯಾರಿಸಿರುವ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕಾಗಿ ಈ ಸಂತೆಯನ್ನು ಆಯೋಜಿಸಲಾಗುತ್ತಿದೆ.

ಪಂಚಾಯಿತಿ ವ್ಯಾಪ್ತಿಯ 42 ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯೆಯರು ಭಾಗವಹಿಸಿದರು. ಸಂಘದ ಸದಸ್ಯರು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇಟ್ಟಿದ್ದರು. ಆಹಾರ ಉತ್ಪನ್ನಗಳು, ಕರಕುಶಲ ವಸ್ತುಗಳು, ಹೂ, ತೆಂಗಿನಕಾಯಿ, ಜ್ಯೂಟ್ ಬ್ಯಾಗ್, ಜೇನುತುಪ್ಪ, ಸೀರೆ, ಸೊಪ್ಪು ಕಾಯಿ-ಸೊಪ್ಪು, ಚುರುಮುರಿ, ಅಗರಬತ್ತಿ, ಬೆಂಬಲ ಮಹಿಳಾ ಕಿಸಾನ್ ಪ್ರೊಡ್ಯೂಸರ್ ಕಂಪನಿಯ ವಿಷಪಾರಿ ಲಭ್ಯವಿದ್ದವು.



ಎನ್‌ಆರ್‌ಎಲ್‌ಎಂ ಸಂಜೀವಿನಿ ಯೋಜನೆಯಡಿ ಆರ್ಥಿಕಸೌಲಭ್ಯ ಪಡೆದಿರುವಮಹಿಳಾಸ್ವಸಹಾಯಗುಂಪುಗಳ ಸದಸ್ಯರು ಮನೆಗಳಲ್ಲಿಯೇ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಈ ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಮಾಸಿಕ ಸಂತೆಯನ್ನು ಗ್ರಾಮೀಣ ಭಾಗದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಜಿಲ್ಲಾ ಯೋಜನಾಧಿಕಾರಿ ರವೀಂದ್ರ, ಪಿಡಿಒ ರಾಮಯ್ಯ, ಪಂಚಾಯಿತಿ ಸಿಬ್ಬಂದಿ ಒಕ್ಕೂಟದ ಸದಸ್ಯರು, ತಾಲೂಕು ಅಭಿಯಾನ ನಿರ್ವಹಣಾ ಘಟಕದ ಸಿಬ್ಬಂದಿ ಉಪಸ್ಥಿತರಿದ್ದರು.

ರೈತರಿಗೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಗುಣವಂತ ಸಲಹೆ

ದ್ರಾಕ್ಷಿ, ಮಾವು ಬೆಳೆಗೆ ವಿಮೆ ಮಾಡಿಸಿ

• **ದೊಡ್ಡಬಳ್ಳಾಪುರ:** ತೋಟಗಾರಿಕೆ ಇಲಾಖೆ ವತಿಯಿಂದ ಪ್ರಸ್ತ ಸಾಲಿನ ಮುಂಗಾರು ಹಂಗಾಮಿನ ಮರು ವಿನ್ಯಾಸಗೊಳಿಸಲಾದ ಹವಾಮಾನಆಧಾರಿತಬೆಳೆವಿಮೆಯೋಜನೆಯಡಿ ದ್ರಾಕ್ಷಿ ಮತ್ತು ಮಾವು ಬೆಳೆಯುವ ರೈತರು ತಮ್ಮ ಬೆಳೆಗಳಿಗೆ ವಿಮೆ(ಇನ್ಸುರೆನ್ಸ್) ಮಾಡಿಸಲು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಗುಣವಂತ ತಿಳಿಸಿದ್ದಾರೆ.

ಮಾವು, ದ್ರಾಕ್ಷಿ ಬೆಳೆಯುವ ರೈತರು ಪ್ರಸ್ತ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳಾದ ಮಾವು ಬೆಳೆಗೆ ಪ್ರತಿ ಹೆಕ್ಟೇರಿಗೆ 80,000 ವಿಮಾ ಮೊತ್ತ ನಿಗದಿಯಾಗಿದ್ದು, ರೈತರು ಶೇ.5ರಂತೆ ಹೆಕ್ಟೇರಿಗೆ 4,000 ಅಥವಾ ಒಂದು ಎಕರೆಗೆ 1600 ರೂ. ಮಾತ್ರ ವಿಮೆ(ಇನ್ಸುರೆನ್ಸ್) ಪಾವತಿ ಮಾಡಬೇಕು.

ದ್ರಾಕ್ಷಿ ಬೆಳೆಗೆ ಪ್ರತಿ ಹೆಕ್ಟೇರಿಗೆ 2,80,000 ರೂ. ವಿಮಾ ಮೊತ್ತ ನಿಗದಿಯಾಗಿದ್ದು, ರೈತರು ಪ್ರತಿ ಹೆಕ್ಟೇರಿಗೆ ಶೇ.5 ರಂತೆ 14,000 ಅಥವಾ ಎಕರೆಗೆ 5600 ರೂ. ವಿಮೆ ಪಾವತಿ ಮಾಡಬೇಕು. ಪ್ರಕೃತಿ ವಿಕೋಪದಿಂದ ಬೆಳೆಗಳು ನಷ್ಟವಾದಾಗ ವಿಮಾ ಮೊತ್ತ ಸಹಾಯವಾಗಲಿದೆ. ಬೆಳೆ ವಿಮೆಗೆ ಅರ್ಜಿ ಸಲ್ಲಿಸಲು ಮತ್ತು ಬೆಳೆ ವಿಮಾ ಕಂತು ನೋಂದಾಯಿಸಿಕೊಳ್ಳಲು ಜುಲೈ 31 ಕೊನೆಯ ದಿನವಾಗಿದೆ.



ಹೆಚ್ಚಿನ ಮಾಹಿತಿಗೆ ತಾಲೂಕು ತೋಟಗಾರಿಕೆ ಇಲಾಖೆ ಕಚೇರಿ ದೇವನಹಳ್ಳಿ-9480461234, ದೊಡ್ಡಬಳ್ಳಾಪುರ-9482129648, ಹೊಸಕೋಟೆ-9880210892, ನೆಲಮಂಗಲ-9902581532 ಹಾಗೂ ಹತ್ತಿರದ ರೈತ ಸಂಪರ್ಕ ಕೇಂದ್ರ, ಹತ್ತಿರದ ಬ್ಯಾಂಕ್ ಶಾಖೆ ಹಾಗೂ ವಿಮಾ ಕಂಪನಿಯನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗತ್ಯ ದಾಖಲೆಗಳೊಂದಿಗೆ ನೋಂದಾಯಿಸಿ

ಬೆಳೆ ಸಾಲ ಪಡೆಯದ ರೈತರು ಯೋಜನೆಯಡಿ ಭಾಗವಹಿಸಲು ನಿಗದಿತ ಅರ್ಜಿಯೊಂದಿಗೆ ಪ್ರಸ್ತ ಸಾಲಿನ ಪಹಣಿ/ಕಂದಾಯ ರಶೀದಿ/ಖಾತೆ ಪುಸ್ತಕ/ ಬ್ಯಾಂಕ್ ಖಾತೆ ಪುಸ್ತಕ, ಆಧಾರ್ ಕಾರ್ಡ್ ನಕಲು ಪ್ರತಿ ಮತ್ತು ಸ್ವಯಂ ಘೋಷಿತ ಬೆಳೆ ವಿವರಗಳನ್ನು ಹತ್ತಿರದ ರಾಷ್ಟ್ರೀಯ ಅಧಿಕೃತ ಬ್ಯಾಂಕ್ /ಸಾಮಾನ್ಯ ಸೇವಾ ಕೇಂದ್ರ/ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಾಯಿಸಬಹುದು. ವಿಮೆ ಮಾಡಿಸುವ ರೈತರು ಕಡ್ಡಾಯವಾಗಿ ತಂತ್ರಾಂಶದ ನೋಂದಣಿ ಸಂಖ್ಯೆಯನ್ನು ಹೊಂದಿರಬೇಕಿದ್ದು, ನೋಂದಣಿ ಸಂಖ್ಯೆಗೆ ಪಹಣಿ ವಿವರಗಳನ್ನು ಜೋಡಿಸಬೇಕಿರುತ್ತದೆ. ನೋಂದಣಿ ಸಂಖ್ಯೆ ಇಲ್ಲದ ರೈತರು ನೋಂದಣಿ ಸಂಖ್ಯೆಯನ್ನು ಮಾಡಿಕೊಂಡು ವಿಮೆಯಲ್ಲಿ ಪಾಲ್ಗೊಳ್ಳಬೇಕು ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಖಾಸಗೀಕರಣಕ್ಕೆ ವಿರೋಧ | ನೌಕರರು , ರೈತರು, ದಲಿತಪರ ಸಂಘಟನೆಗಳ ಸಹಕಾರ

ಬೆಸ್ಕಾಂ ನೌಕರರ ಪ್ರತಿಭಟನೆಗೆ ಸಂಘಟನೆಗಳ ಬೆಂಬಲ

• **ಆನೇಕಲ್:** ಬೆಸ್ಕಾಂ ಖಾಸಗೀಕರಣ ಮಾಡುವುದನ್ನು ವಿರೋಧಿಸಿ ತಾಲೂಕಿನ ಚಂದಾಪುರ ಬೆಸ್ಕಾಂ ನೌಕರರು, ರೈತರು ಹಾಗೂ ದಲಿತಪರ ಸಂಘಟನೆಯ ಮುಖಂಡರು ಜಂಟಿಯಾಗಿ ಪ್ರತಿಭಟನೆ ನಡೆಸಿದರು.

ಕೆಟಿಪಿಎಲ್ ಫೆಡರೇಷನ್ ವತಿಯಿಂದ ಪ್ರತಿ ಭಟನೆ ಹಮ್ಮಿಕೊಳ್ಳಲಾಗಿದೆ ಹಾಗಾಗಿ ಗ್ರಾಹಕರಿಗೆ ಅರಿವು ಮೂಡಿಸುವ ಸಲುವಾಗಿ ಸೆಕ್ಷನ್ 41 ಮತ್ತು 15 ಅಡಿಯಲ್ಲಿ ಟಾಟಾ ಪವರ್ ಖಾಸಗಿ ಕಂಪನಿ (ಕೆಇಆರ್‌ಸಿ)ಗೆ ಅರ್ಜಿ ಸಲ್ಲಿಸಲಾಗಿದೆ. ಈ ಖಾಸಗಿ ಕಂಪನಿಯು 19 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಇದು ರೈತರಿಗೆ, ಕೈಗಾರಿಕಾ ಮಾಲೀಕರಿಗೆ ಹಾಗೂ ಸಾಮಾನ್ಯ ಜನರಿಗೆ ಯಾವುದೇ ಉಪಯೋಗ ಆಗುವುದಿಲ್ಲ. ಇದು ಕೇವಲ ಲಾಭದಾಯಕವಾಗಿರುತ್ತದೆ, ಇನ್ನೂ ಟಾಟಾ ಪವರ್ ಕಂಪನಿ ನಷ್ಟದಲ್ಲಿ ಇದೆ. ಗ್ರಾಹಕರಿಗೆ ಸರಿಯಾದ ಸೇವೆ ಒದಗುವುದಿಲ್ಲ ಹಾಗಾಗಿ ಇಂತಹ ಖಾಸಗಿ ಕಂಪನಿಗಳಿಗೆ ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಎಂದು ಚಂದಾಪುರ ಬೆಸ್ಕಾಂ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಧನಂಜಯ್ ಒತ್ತಾಯಿಸಿದರು.

ಕೇಂದ್ರ ಸಮಿತಿ ಸದಸ್ಯರು ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಸಂಘದ ಅಧ್ಯಕ್ಷ ಆರ್.ಎಸ್.ಮುರಳೀಧರ ಮಾತನಾಡಿ, ಟಾಟಾ ಪವರ್ ಕಂಪನಿ ಲಾಭ ಮೂಲಕ ಸರ್ಕಾರಿ ಅಧೀನದಲ್ಲಿ ಇರುವ ಕೆಲವನ್ನು ಖಾಸಗೀಕರಣ ಮಾಡುವುದಕ್ಕೆ ಮುಂದಾಗಿರುವುದು ಖೇದಕರ ಸಂಗತಿ ಎಂದರು.

ಆನೇಕಲ್ ಕೆಇಬಿ ವಿಭಾಗದ ಜೆ.ಚಂದ್ರಶೇಖರ್ ಮಾತನಾಡಿ, ಸರ್ಕಾರ ಖಾಸಗೀಕರಣ ಮಾಡಿದರೆ ನೌಕರರು ಬೀದಿಗೆ ಬರುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಕೀಲರಾದ ಪುರುಷೋತ್ತಮ್ ಮಾತನಾಡಿ, ಸರ್ಕಾರಗಳು ಬಂಡವಾಳಶಾಹಿಗಳ ಪರ ನಿಲ್ಲದೆ ರೈತರ, ಕಾರ್ಮಿಕರ, ನೌಕರರು ಹಾಗೂ ಗ್ರಾಹಕರ ಪರವಾಗಿ ನಿಲ್ಲಬೇಕು. ಟಾಟಾ ಪವರ್ ಕಂಪನಿಗೆ ಅನುಮತಿ ನೀಡಿದರೆ ಅನೇಕ ರೀತಿಯ ಸಮಸ್ಯೆಗಳು ಉಂಟಾಗುತ್ತದೆ. ಹಾಗಾಗಿ ಕೂಡಲೇ ಸರ್ಕಾರ ಮಧ್ಯ ಪ್ರವೇಶಿಸಿ ಖಾಸಗೀಕರಣಕ್ಕೆ ಅವಕಾಶ ನೀಡದಂತಹ ಕಾಯ್ದೆಯನ್ನು ರೂಪಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಅನುಮತಿ ಪಡೆದ ಗುತ್ತಿಗೆದಾರರ ಸಂಘದ ತಾಲೂಕು ಅಧ್ಯಕ್ಷ ಶಿವಾನಂದರೆಡ್ಡಿ, ರೈತ ಸಂಘದ ಮುಖಂಡರಾದ ರಘು, ಮಂಜುನಾಥ್, ಸುಬ್ರಮಣಿ, ಡಿಎಸ್‌ಎಸ್ ಮುಖಂಡ ಶ್ರೀರಾಮ್, ರೆಡ್ಡಿ ಜನ ಸಂಘದ ಮುಖಂಡ ನುಗ್ಗಿನ್ ರೆಡ್ಡಿ, ಕೆಇಬಿ ಅಧಿಕಾರಿಗಳಾದ ಸಹಾಯಕ ನಿರ್ವಾಹಕ ಇಂಜಿನಿಯರ್ ರಾಜಕುಮಾರ್, ಸ್ವಾಮಿ, ಜೋನ್ಸ್, ಭೀಮಾನಗೌಡ, ಪ್ರಸನ್ನ ಕುಮಾರ್, ಚಂದಾಪುರ ವಿಭಾಗದ ನೌಕರರ ಸಂಘದ ಜೆ.ತಿಪ್ಪೇಸ್ವಾಮಿ, ಕೆಇಬಿ ನೌಕರರು ಹಾಜರಿದ್ದರು.



ಆಕ್ಷೇಪಣೆ ಸಲ್ಲಿಕೆಗೆ ಜೂ.23 ಕೊನೆ ದಿನ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಟಾಟಾ ಪವರ್ ಕಂಪನಿ ಸಲ್ಲಿಸಿದ ಅರ್ಜಿಗೆ ಮಂಗಳವಾರ 23ರಂದು ಇದಕ್ಕೆ ಆಕ್ಷೇಪಣೆ ಸಲ್ಲಿಸುವುದಕ್ಕೆ ಕೊನೆಯ ದಿನವನ್ನು ಘೋಷಣೆ ಮಾಡಲಾಗಿದೆ, ಹಾಗಾಗಿ ಕೆಇಬಿ ನೌಕರರು, ಸಂಘ ಸಂಸ್ಥೆಯವರು ಹಾಗೂ ರೈತ ಸಂಘಟನೆಗಳು ಜೊತೆಗೆ ಗ್ರಾಹಕರು ಸೇರಿ ಹೆಚ್ಚು ಆಕ್ಷೇಪಣೆ ಸಲ್ಲಿಸುವ ಮೂಲಕ ಖಾಸಗೀಕರಣವಾಗುವುದನ್ನು ವಿರೋಧಿಸಬೇಕು, ಹಾಗೂ ಸರ್ಕಾರದ ಅಧೀನದಲ್ಲಿ ಸಂಸ್ಥೆಯನ್ನು ಮುಂದುವರಿಸಲು ಸರ್ಕಾರ ಕೂಡಲೇ ಕ್ರಮವಹಿಸಬೇಕು ಇಲ್ಲದಿದ್ದರೆ ಸಂಸ್ಥೆಯ 50 ಸಾವಿರ ನೌಕರರು ಹಾಗೂ ಸಾರ್ವಜನಿಕರು ಬೀದಿಗೆ ಬಂದು ತೀವ್ರ ಪ್ರತಿಭಟನೆ ರೂಪಿಸಲಾಗುವುದು ಎಂದು ಚಂದಾಪುರ ಬೆಸ್ಕಾಂ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಧನಂಜಯ ಎಂದು ಎಚ್ಚರಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಸ್ಪಷ್ಟನೆ | ಸುಳ್ಳು ವದಂತಿ

ನನ್ನ ಮತ ಅಸಿಂಧು ಆಗಿಲ್ಲ

• **ಮೈಸೂರು:** ವಿಧಾನಪರಿಷತ್ ಚುನಾವಣೆಯಲ್ಲಿ ನಾನು ಚಲಾಯಿಸಿದ ಮತ ಅಸಿಂಧು ಆಗಿಲ್ಲ, ನಾನು ಮತ ಚಲಾಯಿಸದಷ್ಟು ಅಪ್ರಬುದ್ಧನಲ್ಲ, ಈ ಬಗ್ಗೆ ಸತ್ಯ ಶೋಧನ ಸಮಿತಿಯಿಂದ ಬಹಿರಂಗವಾಗಲಿದೆ ಎಂದು ಮೈಸೂರಿನ ಕೆ.ಆರ್.ಕ್ಷೇತ್ರದ ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಶನಿವಾರ ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಷತ್ ಚುನಾವಣೆಯಲ್ಲಿ ನಾನು ಚಲಾಯಿಸಿದ ಮತ ಅಸಿಂಧು ಆಗಿದೆ ಎಂದು ಯಾರೋ ಸುಳ್ಳು ವದಂತಿ ಹಬ್ಬಿಸಿದ್ದಾರೆ. ಇದೊಂದು ವ್ಯವಸ್ಥಿತ ಷಡ್ಯಂತ್ರ. ನಾನು ಮತ ಚಲಾಯಿಸಲು ಆಗದಷ್ಟು ಅಪ್ರಬುದ್ಧನಲ್ಲ, ನಾನು ವಿವೇಚನೆಯಿಂದ ಮತ ಚಲಾಯಿಸಿದ್ದೇನೆ. ನನ್ನ ಮತ ಅಸಿಂಧು ಆಗಿದೆ ಎಂದು ಹೇಳಿದವರು ಯಾರು, ಈ ಬಗ್ಗೆ ಚುನಾವಣಾ ಆಯೋಗ ಏನಾದರೂ ತಿಳಿಸಿದೆಯಾ. ಇದು ಗೌಪ್ಯ ಮತ ದಾನ ಆಗಿದೆ. ನನ್ನ ವಿರುದ್ಧ ಪಿತೂರಿ ನಡೆಸಿದ್ದಾರೆ ಎಂದು ಕಿಡಿಕಾರಿದರು. ಎಲ್ಲವನ್ನು ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇನೆ. ಅಡ್ಡ ಮತದಾನ ನಡೆದಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬುದಕ್ಕೆ ಸತ್ಯಶೋಧನಾ ಸಮಿತಿ ರಚಿಸಿದೆ. ಸದ್ಯದಲ್ಲೇ ಎಲ್ಲ ಬಹಿರಂಗ ಆಗಲಿದೆ ಎಂದು ಖಾರವಾಗಿಯೇ ನುಡಿದರು. ವಿಧಾನ ಪರಿಷತ್ ಸದಸ್ಯ ರಘು ಆರ್. ಮಾತನಾಡಿ, ಉಪ್ಪು ತಿಂದವರು ನೀರು ಕುಡಿಯಲೇಬೇಕು. ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕುದುರೆ ವ್ಯಾಪಾರ ಮಾಡಿದೆ. ಕೆಲ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಈ ಬಗ್ಗೆ ಸತ್ಯಶೋಧನಾ ಸಮಿತಿ ರಚಿಸಿದೆ. ಅಡ್ಡ ಮತದಾನ ಮಾಡಿರುವವರನ್ನು ಪತ್ತೆ ಹಚ್ಚಲಾಗುತ್ತದೆ. ನನ್ನಂತೆಯೇ ಅತಿ ಹಿಂದುಳಿದ ನಾಯಕರನ್ನು ಪಕ್ಷ ಗುರುತಿಸಿ ಸ್ಥಾನ ಕಲ್ಪಿಸಿದೆ. ಎರಡು ಬಾರಿ ಎಂಎಲ್ಸಿ ಚುನಾವಣೆಯಲ್ಲಿ ಸೋತಿದ್ದ ನನ್ನನ್ನು ಪಕ್ಷ ಈಗ ಎಂಎಲ್ಸಿ ಮಾಡಿದೆ. ಇದಕ್ಕೆ ಪಕ್ಷದ ಹಿರಿಯ ನಾಯಕರು ಕಾರಣರು. ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.



ಕಿರುಸುದ್ದಿ

ಇಂದು, ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

• **ದೊಡ್ಡಬಳ್ಳಾಪುರ:** ಭಾನುವಾರ ಮತ್ತು ಸೋಮವಾರದಂದು 66/11ಕೆವಿ ಡಿ.ಕ್ರಾಸ್ ಉಪ ವಿದ್ಯುತ್ ಕೇಂದ್ರದ ವ್ಯಾಪ್ತಿಗೆ ಎಫ್21 -ಕೆವಿ ಫೀಡರ್‌ನಲ್ಲಿ ದುರಸ್ತಿ ಕೆಲಸ ಕೈಗೊಳ್ಳುವ ಹಿನ್ನೆಲೆಯಲ್ಲಿ ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಪೂರೈಕೆ ಸ್ಥಗಿತವಾಗಲಿದೆ ಎಂದು ಬೆಸ್ಕಾಂ ನಗರ ಉಪವಿಭಾಗದ ಕಾರ್ಯಪಾಲಕ ಎಂಜಿನಿಯರ್ ವಿನಯ್ ಕುಮಾರ್ ತಿಳಿಸಿದ್ದಾರೆ. ನಾಗದೇನಹಳ್ಳಿ, ರಘುನಾಥಪುರ, ಮೇಲಿನಜೂಗಾನಹಳ್ಳಿ, ಆದಿನಾರಾಯಣಹೊಸಹಳ್ಳಿ, ಇಸ್ಲೋಸೆಟಿ-1 ಮತ್ತು 2, ಆದಿನಾರಾಯಣಹೊಸಹಳ್ಳಿ ಫೇಸ್ -2 ಕೈಗಾರಿಕಾ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾನುವಾರ ವಿದ್ಯುತ್ ಸರಬರಾಜು ಸ್ಥಗಿತವಾಗಲಿದೆ. ದೊಡ್ಡಬಳ್ಳಾಪುರ ನಗರದ, ಡಿಕ್ರಾಸ್, ಮುತ್ತೂರು, ಟಿ.ಬಿ.ಬಡಾವಣೆ, ಪ್ರಿಯದರ್ಶಿನಿ ಬಡಾವಣೆ, ರೋಜಿಪುರ, ಗಂಗಾಧರಪುರ, ವಿನಾಯಕನಗರ, ಸೋಮೇಶ್ವರ ಬಡಾವಣೆ, ಬಸವೇಶ್ವರನಗರ, ಮಾರುತಿನಗರ, ಕುಂಭಾರಪೇಟೆ, ದರ್ಜಿಪೇಟೆ, ನಾಗರಕೆರೆಪೇಟೆ, ವಡ್ಡರಪೇಟೆ, ದೇಶದಪೇಟೆ, ಸಿನಿಮಾ ರಸ್ತೆ, ಹಳೇಬಸ್ ನಿಲ್ದಾಣ, ಕಚೇರಿಪಾಳ್ಯ, ಚಿಕ್ಕಾಂಜಿಪುರ, ಕಲ್ಲುಪೇಟೆ, ತ್ಯಾಗರಾಜನಗರ, ದೇವರಾಜನಗರ, ಶಾಂತಿನಗರ, ಕರೇನಹಳ್ಳಿ, ದರ್ಗಾಜೋಗಿಹಳ್ಳಿ, ಕುರುಬರಹಳ್ಳಿ, ಕೊಡಿಗೇಹಳ್ಳಿ, ಪಾಲನಜೋಗಿಹಳ್ಳಿ, ಕುರುಬರಹಳ್ಳಿಮುದ್ದನಾಯಕನಹಳ್ಳಿ ಸೇರಿದಂತೆ ಇತರ ಪ್ರದೇಶಗಳಲ್ಲಿ ಸೋಮವಾರ ವಿದ್ಯುತ್ ಸರಬರಾಜು ಸ್ಥಗಿತವಾಗಲಿದ್ದು ಗ್ರಾಮಸ್ಥರು ಸಹಕರಿಸುವಂತೆ ವಿನಯ್ ಕುಮಾರ್ ಕೋರಿದ್ದಾರೆ.

ನಾಯಿಗಳಿಗೆ ಆಹಾರ ನೀಡುವವರಿಗೆ ತೊಂದರೆ ನೀಡಬೇಡಿ: ಡಾ.ಶ್ರೀನಾಥ್

• **ಬೆಂಗಳೂರು:** ಬೀದಿ ನಾಯಿಗಳಿಗೆ ಆಹಾರ ನೀಡುವ ವ್ಯಕ್ತಿಗಳಿಗೆ ತೊಂದರೆ ಕೊಡಬೇಡಿ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಪಶುವೈದ್ಯಾಧಿಕಾರಿ ಡಾ.ಶ್ರೀನಾಥ್ ಮನವಿ ಮಾಡಿದ್ದಾರೆ. ಬೀದಿನಾಯಿಗಳ ವ್ಯವಸ್ಥಿತ ನಿರ್ವಹಣೆ, ಸುರಕ್ಷಿತ ಆಹಾರ ಕೇಂದ್ರಗಳ ಗುರುತಿಸುವಿಕೆ, ಸಾರ್ವಜನಿಕರ ಸಹಭಾಗಿತ್ವ ಹಾಗೂ ಪ್ರಾಣಿ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿಯ ಕುರಿತು ಸಭೆ ನಡೆಸಿದ ಅವರು, ಇತ್ತೀಚೆಗಷ್ಟೇ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಮಾಧ್ಯಮ ಪ್ರಕಟಣೆ ಹೊರಡಿಸಿ, ಬೀದಿನಾಯಿಗಳಿಗೆ ಆಹಾರ ನೀಡುವುದು ಅಪರಾಧವಲ್ಲ ಮತ್ತು ಅದು ಕಾನೂನುಬಾಹಿರವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಾಯಿಗಳಿಗೆ ನಿರಂತರವಾಗಿ ಆಹಾರ ನೀಡುವ ಪ್ರಾಣಿ ಪಾಲಕರಿಗೆ ಸಾರ್ವಜನಿಕರು ಯಾವುದೇ ರೀತಿಯ ಕಿರುಕುಳ ಅಥವಾ ಅನಗತ್ಯ ತೊಂದರೆ ನೀಡಬಾರದು ಎಂದು ಮನವಿ ಮಾಡಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ ಆಹಾರ ಪೂರೈಕೆ ಸ್ಥಳಗಳ ಗುರುತಿಸಿ : ಬೀದಿನಾಯಿಗಳಿಗೆ ಎಲ್ಲೆಂದರಲ್ಲಿ ಆಹಾರ ನೀಡುವ ಬದಲು ಸುರಕ್ಷಿತವಾಗಿ ಆಹಾರ ನೀಡಲು ಅನುಕೂಲವಾಗುವಂತೆ ಸೂಕ್ತವಾದ ಆಹಾರ ಕೇಂದ್ರಗಳನ್ನು ವ್ಯವಸ್ಥಿತವಾಗಿ ಗುರುತಿಸಲು ಸೂಚನೆ ನೀಡಿದ್ದಾರೆ.ಸಭೆಯಲ್ಲಿ ಪ್ರಾಣಿ ಕಲ್ಯಾಣ ಸಂಘಟನೆಗಳ ಪ್ರತಿನಿಧಿಗಳು, ಪ್ರಾಣಿ ರಕ್ಷಣಾ ಕಾರ್ಯಕರ್ತರು, ಸ್ವಯಂಸೇವಕರು, ಬೀದಿ ನಾಯಿಗಳ ಆಹಾರ ಪೂರೈಕೆದಾರರು ಉಪಸ್ಥಿತರಿದ್ದರು.

ಫೋನ್-ಇನ್‌ನಲ್ಲಿ 1,898 ಅಹವಾಲು ಇತ್ಯರ್ಥ

• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯ ನಾಗರಿಕರ ಕುಂದುಕೊರತೆಗಳನ್ನು ಆಲಿಸಿ, ಅವುಗಳಿಗೆ ತ್ವರಿತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಆಯೋಜಿಸಲಾಗುವ ಫೋನ್-ಇನ್ ಕಾರ್ಯಕ್ರಮದಲ್ಲಿ ಇದುವರೆಗೆ ಒಟ್ಟು 2,320 ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, 1,898 ಅಹವಾಲುಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಪಾಲಿಕೆ ಮಾಹಿತಿ ನೀಡಿದೆ. ಈ ಬಗ್ಗೆ ಮಾಹಿತಿ ನೀಡಿರುವ ಉತ್ತರ ನಗರ ಪಾಲಿಕೆ, ರಸ್ತೆ ನಿರ್ವಹಣೆ ಹಾಗೂ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಅಹವಾಲುಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿರುವ ಹಿನ್ನೆಲೆಯಲ್ಲಿ, ಸಂಬಂಧಿತ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಸೂಚಿಸಿದ್ದಾರೆ ಎಂದು ಮಾಹಿತಿ ನೀಡಿದೆ. ಬೆಂಗಳೂರು ಉತ್ತರ ನಗರ ಪಾಲಿಕೆಯಲ್ಲಿ 2025 ರ ಸೆಪ್ಟೆಂಬರ್ 26ರಿಂದ ಫೋನ್-ಇನ್ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸಲಾಗುತ್ತಿದ್ದು, ಇದುವರೆಗೆ ಒಟ್ಟು 1,804 ಕರೆಗಳನ್ನು ಸ್ವೀಕರಿಸಲಾಗಿದ್ದು, ಒಟ್ಟು 2,320 ಅಹವಾಲುಗಳನ್ನು ದಾಖಲಿಸಿಕೊಳ್ಳಲಾಗಿದೆ. ಇದರಲ್ಲಿ 1,898 ಅಹವಾಲುಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಪಾಲಿಕೆ ತಿಳಿಸಿದೆ. ಪ್ರಗತಿಯಲ್ಲಿರುವ ಅಹವಾಲುಗಳು – 6 ಪ್ರಗತಿಯಲ್ಲಿದ್ದರೆ, 5 ರೀಫಾರ್ವರ್ಡ್ ಪರಿಹಾರಕ್ಕೆ ಸಂಬಂಧಿಸಿದ್ದಾಗಿದೆ. 146 ಅಹವಾಲುಗಳು ಇತರ ಪಾಲಿಕೆಗೆ ಸಂಬಂಧಿಸಿದ್ದಾಗಿವೆ. 260 ಅಹವಾಲುಗಳು ಬಾಕಿ ಇವೆ ಎಂದು ಮಾಹಿತಿ ನೀಡಿದೆ. ಒಟ್ಟಾರೆಯಾಗಿ ಬಾಕಿ ಇರುವ ಅಹವಾಲುಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಪಡಿಸಿ, ನಾಗರಿಕರಿಗೆ ಗುಣಮಟ್ಟದ ಸೇವೆಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ಆಗಸ್ಟ್ 7, 8ರಂದು ವಿದ್ಯಾಗಿರಿ ಆವರಣದಲ್ಲಿ ಮೇಳ ಆಯೋಜನೆ | ಗ್ರಾಮೀಣ ಪ್ರತಿಭೆಗಳಿಗೆ ಉದ್ಯೋಗಾವಕಾಶ

ಆಳ್ವಾಸ್‌ನಲ್ಲಿ 16ನೇ ಉದ್ಯೋಗ ಮೇಳ

• **ಮಂಗಳೂರು:** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ 16ನೇ ಆವೃತ್ತಿಯ ಉದ್ಯೋಗ ಮೇಳ ಆಗಸ್ಟ್ 7 ಮತ್ತು 8ರಂದು ಮೂಡುಬಿದಿರೆಯ ವಿದ್ಯಾಗಿರಿ ಆವರಣದಲ್ಲಿ ನಡೆಯಲಿದ್ದು, ಮೇಳದ ಪೂರ್ವಭಾವಿ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಎಲ್ಲ ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್ ನೋಂದಣಿ ಮಾಡಿಕೊಳ್ಳಬೇಕು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಮೋಹನ್ ಆಳ್ವ ತಿಳಿಸಿದರು.

ಗ್ರಾಮೀಣ ಪ್ರತಿಭೆಗಳಿಗೆ ಗುಣಮಟ್ಟದ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಆರಂಭಗೊಂಡ ಆಳ್ವಾಸ್ ಪ್ರಗತಿ ಉದ್ಯೋಗ ಮೇಳವು ಕರ್ನಾಟಕ ಸೇರಿದಂತೆ ನಾಲ್ಕು ರಾಜ್ಯಗಳ ಅಭ್ಯರ್ಥಿಗಳಿಗೆ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಉದ್ಯೋಗಾವಕಾಶಗಳನ್ನು ಒದಗಿಸುವ ವೇದಿಕೆಯಾಗಿದೆ. ಪ್ರತಿಷ್ಠಾನದ ಸಿಎಸ್‌ಆರ್ ಚಟುವಟಿಕೆಯ ಭಾಗವಾಗಿ ನಡೆಯುವ ಈ ಉದ್ಯೋಗ ಮೇಳ ಸಂಪೂರ್ಣ ಉಚಿತ. ಇದುವರೆಗೆ ಪ್ರತಿಷ್ಠಾನದಿಂದ ನಡೆದಿರುವ ಉದ್ಯೋಗ ಮೇಳಗಳಲ್ಲಿ 250ಕ್ಕೂ ಅಧಿಕ ಪ್ರತಿಷ್ಠಿತ ಕಂಪನಿಗಳು ಭಾಗಿಯಾಗುತ್ತಿದ್ದು, ಇಲ್ಲಿಯವರೆಗೆ 66,432 ಅಭ್ಯರ್ಥಿಗಳು ಶಾರ್ಟ್ ಲಿಸ್ಟ್‌ಗೊಂಡು 40848 ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ಉದ್ಯೋಗದ ಆಫರ್ ದೊರಕಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ಈ ಬಾರಿಯ ಉದ್ಯೋಗ ಮೇಳದಲ್ಲಿ 300ಕ್ಕೂ ಅಧಿಕ ಕಂಪನಿಗಳು, 20 ಸಾವಿರಮಂದಿ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಬ್ಯಾಂಕಿಂಗ್ ಹಾಗೂ ಹಣಕಾಸು, ಮಾಹಿತಿ ತಂತ್ರಜ್ಞಾನ, ಉತ್ಪಾದನೆ, ಶಿಕ್ಷಣೋದ್ಯಮ, ಮಾರಾಟ ಮತ್ತು ಚಿಲ್ಲರೆ ವ್ಯಾಪಾರ, ಆತಿಥ್ಯ, ದೂರಸಂಪರ್ಕ, ಆರೋಗ್ಯ, ಮಾಧ್ಯಮ, ನಿರ್ಮಾಣ, ಇಲೆಕ್ಟ್ರಾನಿಕ್ಸ್, ಶಿಕ್ಷಣ ಹಾಗೂ ಎನ್‌ಜಿಒ ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖ ಸಂಸ್ಥೆಗಳು ನೇಮಕಾತಿ ನಡೆಸಲಿವೆ. ವೈದ್ಯಕೀಯ ಮತ್ತು ಪ್ಯಾರಾಮೆಡಿಕಲ್, ಇಂಜಿನಿಯರಿಂಗ್, ಕಲಾ, ವಾಣಿಜ್ಯ, ನಿರ್ವಹಣೆ, ವಿಜ್ಞಾನ, ನರ್ಸಿಂಗ್, ಐಟಿಐ, ಡಿಪ್ಲೊಮಾ, ಕೌಶಲ್ಯಾಧಾರಿತ ವ್ಯಕ್ತಿಗಳು, ಪಿಯುಸಿ, ಎಸ್ಎಸ್ಎಲ್‌ಸಿ ಹಾಗೂ ಇತರ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳು ಲಭ್ಯವಾಗಲಿವೆ ಎಂದು ಅವರು ಹೇಳಿದರು.

ಆನ್‌ಲೈನ್ ನೋಂದಣಿ ಕಡ್ಡಾಯ

ಭಾಗವಹಿಸುವ ಕಂಪನಿಗಳ ವಿವರಗಳನ್ನು www.alvaspragati.com ವೆಬ್‌ಸೈಟ್‌ನಲ್ಲಿ ನಿರಂತರವಾಗಿ ನವೀಕರಿಸಲಾಗುವುದು. ಅಭ್ಯರ್ಥಿಗಳು ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಉದ್ಯೋಗಾಕಾಂಕ್ಷಿಗಳಿಗೆ ಆನ್‌ಲೈನ್ ನೋಂದಣಿ ಕಡ್ಡಾಯವಾಗಿದೆ. www.alvaspragati.com/candidate-registrationನಲ್ಲಿ ಉಚಿತವಾಗಿ ನೋಂದಣಿ ಮಾಡಬಹುದು. ಅಭ್ಯರ್ಥಿಗಳಿಗೆ ವಿವಿಧ ಹುದ್ದೆಗಳ ವಿವರ, ಅರ್ಹತೆ ಹಾಗೂ ವೃತ್ತಿ ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡುವ ಸಲುವಾಗಿ ಆಳ್ವಾಸ್ ತಜ್ಞರ ತಂಡ ಅವಿಭಜಿತ ದ.ಕ. ಜಿಲ್ಲೆಯ ವಿವಿಧ ತಾಲೂಕು ಕೇಂದ್ರಗಳಲ್ಲಿ ವಿಶೇಷ ಓರಿಯಂಟೇಶನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡು ಅಗತ್ಯ ಮಾಹಿತಿ ಪಡೆದುಕೊಳ್ಳಬೇಕು ಎಂದು ಡಾ. ಮೋಹನ್ ಆಳ್ವ ಮನವಿ ಮಾಡಿದರು.

ಹೊರಜಿಲ್ಲೆ ಹಾಗೂ ಹೊರರಾಜ್ಯಗಳಿಂದ ಆಗಮಿಸುವ ಅಭ್ಯರ್ಥಿಗಳಿಗೆ ಆಗಸ್ಟ್ 6ರಿಂದ ಉಚಿತ ವಸತಿ ವ್ಯವಸ್ಥೆ ಮಾಡಲಾಗುವುದು. ಜತೆಯ ಅಭ್ಯರ್ಥಿಗಳಿಗೆ ವಿಶೇಷ ಬಸ್ ವ್ಯವಸ್ಥೆ ಮಾಡಲಾಗುವುದು. ಅಭ್ಯರ್ಥಿಗಳು ಆ.7ರಂದು ಬೆಳಗ್ಗೆ 8 ಗಂಟೆಗೆ ಮೂಡುಬಿದಿರೆಯ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಹಾಜರಿರಬೇಕು. 10 ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ನವೀಕರಿಸಿದ ಬಯೋಡೇಟಾ, ಅಂಕಪಟ್ಟಿಗಳ ದೃಢೀಕೃತ ಜೆರಾಕ್ಸ್ ಪ್ರತಿಗಳು, ಆನ್‌ಲೈನ್ ನೋಂದಣಿ ಸಂಖ್ಯೆಯನ್ನು ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು 9741440490, 9611750531 ಸಂಪರ್ಕಿಸಬಹುದು. ಕಂಪನಿಗಳು ನೋಂದಣಿಗಾಗಿ 9731953123 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಡಾ. ಮೋಹನ್ ಆಳ್ವ ಮಾಹಿತಿ ನೀಡಿದರು.

ಪ್ರತಿಷ್ಠಾನದ ಆಡಳಿತ ಟ್ರಸ್ಟಿ ವಿವೇಕ್ ಆಳ್ವ, ನೇಮಕಾತಿ ವಿಭಾಗದ ಮುಖ್ಯಸ್ಥೆ ರಂಜಿತಾ ಆಚಾರ್ಯ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು.

ಸಚಿವರ ಹೇಳಿಕೆಗೂ ಕಿಮ್ಮತ್ತಿಲ್ಲ | ಕ್ರಮವಹಿಸದ ತಾಲೂಕು ಆರೋಗ್ಯ ಅಧಿಕಾರಿ

ರಸ್ತೆ ತಡೆದು ಗ್ರಾಮಸ್ಥರ ಧರಣಿ, ಸಾಕ್ಷಿ ನಾಶಕ್ಕೆ ಯತ್ನ

• **ನೆಲಮಂಗಲ:** ಕೆರೆಯಲ್ಲಿ ವೈದ್ಯಕೀಯ ತ್ಯಾಜ್ಯ ಸುರಿದವರ ಮೇಲೆ ಕಾನೂನು ಕ್ರಮಕ್ಕೆ ಸಚಿವ ಈಶ್ವರ್ ಖಂಡ್ರೆ ಸೂಚಿಸಿದರೂ ಕ್ರಮಕೈಗೊಳ್ಳದ ಟಿಎಚ್‌ಒ ವಿರುದ್ಧ ಗ್ರಾಮಸ್ಥರು ರಸ್ತೆ ತಡೆದು ಧರಣಿ ನಡೆಸಿದರು.

ತಾಲೂಕಿನ ಯಂಟಗಾನಹಳ್ಳಿ ಗ್ರಾಮದ ಕೆರೆಯಲ್ಲಿ ತ್ಯಾಜ್ಯ ಸುರಿದ ಬಗ್ಗೆ ಗ್ರಾಮಸ್ಥರು ಸಚಿವರಿಗೆ ದೂರು ನೀಡಿದಾಗ, ಸ್ಥಳ ಪರಿಶೀಲಿಸಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಇಒಗೆ ಸೂಚನೆ ನೀಡಿದ್ದರು. ತ್ಯಾಜ್ಯದ ಸುರಿದ ಸ್ಥಳಕ್ಕೆ ಬಂದ ಇಒ ಸಮಸ್ಯೆಯ ಗಂಭೀರತೆಯನ್ನು ಕಂಡು ಟಿಎಚ್‌ಒರವರಿಗೆ ತಕ್ಷಣ ಕ್ರಮವಹಿಸುವಂತೆ ಸೂಚನೆ ನೀಡಿದ್ದರು, ಆದರೆ ಟಿಎಚ್‌ಒ ಕ್ರಮವಹಿಸದೇ ವೈದ್ಯನಿಗೆ ಕರೆ ಮಾಡಿ ತ್ಯಾಜ್ಯವನ್ನು ಜೆಸಿಬಿಯಲ್ಲಿ ಮುಚ್ಚುವಂತೆ ತಿಳಿಸಿದ್ದು, ಅದರಂತೆ ಖಾಸಗಿ ಕ್ಲಿನಿಕ್ ವೈದ್ಯ ಕೆರೆಯಲ್ಲಿ ಗುಂಡಿ ತೆಗೆದು ಮುಚ್ಚುವ ಪ್ರಯತ್ನ ಮಾಡಿದಾಗ ಗ್ರಾಮಸ್ಥರು ಹಿಡಿದು ಸ್ಥಳಕ್ಕೆ ಟಿಎಚ್‌ಒ ಬರುವಂತೆ ಧರಣಿ ನಡೆಸಿದರು. ತ್ಯಾಜ್ಯ ಸುರಿದ ಆಸ್ಪತ್ರೆ ಎದುರು ಗ್ರಾಮಸ್ಥರು ಪ್ರತಿಭಟನೆ ಮಾಡಿದರು.

ಸಾಕ್ಷಿನಾಶಕ್ಕೆ ಪ್ರಯತ್ನ: ವೈದ್ಯಕೀಯ ತ್ಯಾಜ್ಯವನ್ನು ಆರೋಗ್ಯ ಇಲಾಖೆ ನಿಯಮದಂತೆ ತೆರವು ಮಾಡಬೇಕಿತ್ತು, ಆದರೆ ನಿರ್ಲಕ್ಷ್ಯ ಮಾಡಿದ್ದು, ಟಿಎಚ್‌ಒ ಮೌನ ಹೇಳಿದರು ಎಂದು ವೈದ್ಯಕೀಯ ತ್ಯಾಜ್ಯವನ್ನು ಹಾಕಿದ್ದ ಖಾಸಗಿ ವೈದ್ಯ ಕೆರೆಗೆ ಜೆಸಿಬಿಯನ್ನು ತಂದು ಗುಂಡಿ ತೋಡಿ ಮುಚ್ಚುವುದಕ್ಕೆ ಮುಂದಾಗಿದ್ದಾನೆ. ಸ್ಥಳಕ್ಕೆ ಟಿಎಚ್‌ಒ ಕರೆಸಿದ ಗ್ರಾಮಸ್ಥರು ಪ್ರಶ್ನೆ ಮಾಡಿದಾಗ ತಪ್ಪಾಗಿದೆ ಸರಿಯಾಗಿ ವಿಲೇವಾರಿ ಮಾಡಲಾಗುತ್ತದೆ ಎಂದು ತಪ್ಪು ಒಪ್ಪಿಕೊಂಡಿದ್ದಾರೆ.



ದೂರು ದಾಖಲು ಮಾಡದ ಅಧಿಕಾರಿಗಳು

ಖಾಸಗಿ ಕ್ಲಿನಿಕ್‌ಗೆ ಹೋಗಿ ಬಂದ ಇಒ, ಟಿಎಚ್‌ಒ ಪೊಲೀಸ್ ಠಾಣೆಗೆಹೋಗಿ ದೂರು ನೀಡದೆ ವಾಪಸ್ ಆಗಿದ್ದಾರೆ. ಕಾರಣ ಕೇಳಿದರೆ ಟೈಪಿಂಗ್ ಮಾಡಿಕೊಡಿ ಕೈ ಬರಹ ಬೇಡ ಎಂದರೂ ಅದಕ್ಕೆ ವಾಪಸ್ ಬಂದೆವು ಎಂದು ಟಿಎಚ್‌ಒ ಪದ್ಮಿನಿ ಗ್ರಾಮಸ್ಥರ ಎದುರು ಹೇಳಿದ್ದು, ಶನಿವಾರ ಸಂಜೆ 7ಗಂಟೆಯಾದರೂ ದೂರು ದಾಖಲಾಗಿರಲಿಲ್ಲ.

ಟಿಎಚ್‌ಒ ಸ್ಥಳಕ್ಕೆ ಬಂದು ಪರಿಶೀಲನೆ ಮಾಡುವ ಮೊದಲೇ ವೈದ್ಯಕೀಯ ತ್ಯಾಜ್ಯವನ್ನು ತೆರವು ಮಾಡಲು ಖಾಸಗಿ ವೈದ್ಯ ಮುಂದಾಗಿದ್ದು, ಸಾಕ್ಷಿ ನಾಶಕ್ಕೆ ಪ್ರಯತ್ನ ಮಾಡಿರುವುದು ಕಂಡುಬಂದಿದೆ. ಸಾಕ್ಷಿ ನಾಶಕ್ಕೆ ಪ್ರಯತ್ನ ಮಾಡಿದ ವೈದ್ಯನಿಗೆ ಹಲವು ಬಾರಿ ಟಿಎಚ್‌ಒ ಕರೆ ಮಾಡಿ ಮಾರ್ಗದರ್ಶನ ಮಾಡಿರುವುದು ಅವರ ಮೊಬೈಲ್ ದಾಖಲಾತಿಯಲ್ಲಿ ಬಯಲಾಗಿದೆ.

ಲಿಖಿತವಾಗಿ ದೂರು ನೀಡಿ ಎಂದು ನಿರ್ಲಕ್ಷ್ಯ: ಸಚಿವರಿಗೆ ದೂರು ನೀಡಲಾಗಿದೆ, ಇಒ ರವರು ಟಿಎಚ್‌ಒ ರವರಿಗೆ ಮಾಹಿತಿ ನೀಡಿದ್ದಾರೆ. ಆದರೂ ತಾಲೂಕು ಆರೋಗ್ಯಾಧಿಕಾರಿಗಳಿಗೆ ಸ್ಥಳಕ್ಕೆ ಬರುವಂತೆ ಗ್ರಾಮಸ್ಥರು ಶುಕ್ರವಾರ ಸಂಜೆ ತಿಳಿಸಿದರೆ ನನಗೆ ಲಿಖಿತವಾಗಿ ದೂರು ಬಂದರೆ ಬರುತ್ತೇನೆ, ಅನಂತರ ಕ್ರಮಕೈಗೊಳ್ಳಲಾಗುತ್ತದೆ ಎಂದು ನಿರ್ಲಕ್ಷ್ಯ ಮಾಡಿದ್ದು ಗ್ರಾಮಸ್ಥರು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಐಎನ್‌ಟಿಯುಸಿ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಣೆ

• **ದೇವನಹಳ್ಳಿ:** ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಮಿತಿಯಿಂದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರ ನೀಡಲಾಗುತ್ತಿದ್ದು ಪಕ್ಷದ ಹಿತದೃಷ್ಟಿಯಿಂದ ಯುವಕರು ಶ್ರಮವಹಿಸಿ ಕೆಲಸ ನಿರ್ವಹಿಸಬೇಕು ಎಂದು ಬಯಪ ಅಧ್ಯಕ್ಷ ವಿ.ಶಾಂತಕುಮಾರ್ ತಿಳಿಸಿದರು. ,ಅವರು ಪಟ್ಟಣದ ಪರಿವೀಕ್ಷಣಾ ಮಂದಿರದಲ್ಲಿ ಏರ್ಪಡಿಸಲಾಗಿದ್ದ ನೇಮಕಾತಿ ಪತ್ರ ವಿತರಣೆ ಹಾಗೂ ಸದಸ್ಯತ್ವ ನೋಂದಣಿ ಕಾರ್ಯಕ್ರಮದಲ್ಲಿ ಮಾತನಾಡಿ ಕೆಟಿಯುಸಿಗೆ ನೂತನ ಅಧ್ಯಕ್ಷರಾಗಿರುವ ಹರಿಪ್ರಸಾದ್‌ರವರು ಎಲ್ಲಾ ಕಾಂಗ್ರೆಸ್ ಸಮಿತಿಗಳು ಚುರುಕಾಗಬೇಕು, ಹೆಚ್ಚಿನ ಸದಸ್ಯತ್ವ ಮಾಡಿ ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮಗಳಲ್ಲೂ ಕಾಂಗ್ರೆಸ್ ಸಮಿತಿಗೆ ಹೊಸ ಸದಸ್ಯರನ್ನು ಸೇರಿಸಿ ಎಂದು ಪದಾಧಿಕಾರಿಗಳಿಗೆ ಸೂಚನೆ ನೀಡಿದರು. ವಿಜಯಪುರ ಬ್ಲಾಕ್ ಅಧ್ಯಕ್ಷ ದಿನ್ನೂರು ವೆಂಕಟೇಶ್ ಮಾತನಾಡಿ, ಐಎನ್‌ಟಿಯುಸಿ ಹಳೆಯ ಸಂಘಟನೆಯಾಗಿದ್ದು ಅದನ್ನು ಬಲಿಷ್ಠಗೊಳಿಸಲು ಸದಸ್ಯತ್ವ ನೋಂದಣಿ ಹಾಗೂ ನೂತನ ಪದಾಧಿಕಾರಿಗಳಿಗೆ ಆದೇಶಪತ್ರ ನೀಡಲಾಗುತ್ತಿದ್ದು, ಬಿಸಿ ಪದಾಧಿಕಾರಿಯಾದರೆ ಸಾಲದು ಪಕ್ಷದ ಸಂಘಟನೆಯಲ್ಲಿ ಹೆಚ್ಚು ಶ್ರಮವಹಿಸಬೇಕು ಆಗ ಮುಂದಿನ ಚುನಾವಣೆಗಳಲ್ಲಿ ಜಯ ಸಾಧಿಸಲಾಗುವುದು ಎಂದರು. ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪ್ರವೀಣ್ ಮಾತನಾಡಿ, ರಾಜ್ಯ ಕಾಂಗ್ರೆಸ್‌ಗೆ ನೂತನಸಾರಥಿಯಾಗಿ ಬಿ.ಕೆ.ಹರಿಪ್ರಸಾದ್ ನೇಮಕವಾದಾಗಿನಿಂದ ಪಕ್ಷದ ಕಾರ್ಯಚಟುವಟಿಕೆ ಚುರುಕಾಗಿ ಕೆಲಸ ಮಾಡಬೇಕು, ಎಲ್ಲಾ ವಿಭಾಗಳ ಸಮಿತಿಗಳಿಗೆ ಪದಾಧಿಕಾರಿಗಳನ್ನು ನೇಮಿಸಿ ಆದೇಶಪತ್ರ ನೀಡಬೇಕೆಂದು ತಿಳಿಸಿದ್ದಾರೆ. ಅದ್ದರಿಂದ ಸದಸ್ಯತ್ವ ನೋಂದಣಿ ಹಾಗೂ ದೇವನಹಳ್ಳಿ ತಾಲೂಕು ಹಾಗೂ ಪಟ್ಟಣದ ನೂತನವಾಗಿ ಪದಾಧಿಕಾರಿಗಳಿಗೆ ಮುಖಂಡರ ಸಮ್ಮುಖದಲ್ಲಿ ಆದೇಶ ಪತ್ರ ನೀಡುತ್ತಿದ್ದೇವೆ ಎಂದು ತಿಳಿಸಿದರು.



ಕೃಷಿಕರ ಆರ್ಥಿಕ ಸ್ಥಿತಿ ಸುಧಾರಣೆ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿಯವರ ಹನ್ನೆರಡು ವರ್ಷಗಳ ಆಡಳಿತಾವಧಿಯಲ್ಲಿ ಕೃಷಿಕರ ಆರ್ಥಿಕ ಪರಿಸ್ಥಿತಿ ಗಣನೀಯ ಸುಧಾರಣೆ ಕಂಡಿದೆ. ಆದಕ್ಕೆ ಕಿಸಾನ್ ಸಮ್ಮಾನ್ ಯೋಜನೆಯ ಕೊಡುಗೆಯೂ ಇದೆ ಎಂದು ಕೇಂದ್ರದ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಪಿಎಂ-ಕಿಸಾನ್ ಯೋಜನೆಯ 23ನೇ ಕಂತಿನ ಹಣವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಪ್ರಧಾನಿ ನರೇಂದ್ರ ಮೋದಿ ವರ್ಗಾವಣೆ ಮಾಡುವ ಪಕ್ರಿಯಾ ಬಂಗಾಳದ ಹುಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ ನಡೆದ ಮುಖ್ಯ ಕಾರ್ಯಕ್ರಮಕ್ಕೆ ಬೆಂಗಳೂರಿನ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ವರ್ಚುಯಲ್ ವೇದಿಕೆ ಮೂಲಕ ಹಾಜರಾಗಿ ಮಾತನಾಡಿದರು.

ಪಿಎಂ ಕಿಸಾನ್ ಯೋಜನೆಯ ಮೂಲಕ ಪ್ರಧಾನಿಗಳು ರೈತ ಸಮುದಾಯಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಈ ಯೋಜನೆಯ 23ನೇ ಕಂತಿನ 18,800 ಕೋಟಿ ರೂ.ಹಣವನ್ನು ಮೋದಿ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ. ಬಿತ್ತನೆ ಸಂದರ್ಭದಲ್ಲಿ ರೈತರಿಗೆ ಬಿತ್ತನೆ ಬೀಜ, ಗೊಬ್ಬರ ಖರೀದಿಗೆ ಈ ಹಣವು ನೆರವಿಗೆ ಬರುತ್ತದೆ ಎಂದು ಹೇಳಿದರು.

ಯಾವುದೇ ರೀತಿಯ ಮಧ್ಯವರ್ತಿಗಳು ಇಲ್ಲದೆ, ಸೋರಿಕೆ ಇಲ್ಲದ ರೀತಿಯಲ್ಲಿ ಹಣವನ್ನು ರೈತರ ಖಾತೆಗಳಿಗೆ ನೇರ ವರ್ಗಾವಣೆ ಆಗಿದೆ. 9.44 ಕೋಟಿ ರೈತರಿಗೆ ತಲಾ 2,000 ರೂ. ಜಮೆ ಆಗಿದೆ. ದೇಶಕ್ಕೆ ಅನ್ನ ನೀಡುವ ಅನ್ನದಾತರ ಸಬಲೀಕರಣ ಆಗದಿದ್ದರೆ ಅಭಿವೃದ್ಧಿಗೆ ಅರ್ಥ ವಿರುವುದಿಲ್ಲ. ಕಳೆದ ಹನ್ನೆರಡು ವರ್ಷಗಳಲ್ಲಿ ಇಂತಹ ವಿವೇಚನೆಯುಕ್ತ ಯೋಜನೆಗಳ ಕಾರಣಕ್ಕೇ ತಾಂತ್ರಿಕವಾಗಿ ಇಷ್ಟು ಪ್ರಧಾನಿ ನರೇಂದ್ರ ಮೋದಿ ರೈತರ ಕಲ್ಯಾಣಕ್ಕಾಗಿ ದುಡಿಯುತ್ತಿದ್ದಾರೆ ಎಂದು ತಿಳಿಸಿದರು.



ಕೇಂದ್ರ ಸರ್ಕಾರದ ಯೋಜನೆಗಳಿಗೆ ಎಲ್ಲರ ಸಹಕಾರ ಮುಖ್ಯ: ಸಚಿವ ವಿ.ಸೋಮಣ್ಣ

ಮೋದಿ ಕಿಸಾನ್ ಸಮ್ಮಾನ್ ನಿಧಿ ಹಣ ಬಿಡುಗಡೆ

• **ತುಮಕೂರು:** ರೈತರೂ ಸೇರಿದಂತೆ ದೇಶದ ಎಲ್ಲಾ ವರ್ಗದ ಜನರ ಒಳಿತಿಗಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೂಪಿಸುವ ಯೋಜನೆಗಳಿಗೆ ಎಲ್ಲರೂ ಕೈಜೋಡಿಸಬೇಕೆಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಕರೆ ನೀಡಿದ್ದಾರೆ.

ನಗರದ ಕೇಂದ್ರ ಗ್ರಂಥಾಲಯದಲ್ಲಿ ಶನಿವಾರ ಕೃಷಿ ಇಲಾಖೆ ಆಯೋಜಿಸಿದ್ದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 23ನೇ ಕಂತಿನ ಆರ್ಥಿಕ ನೆರವು ಬಿಡುಗಡೆಗೊಳಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಾಮಾನ್ಯ ರೈತರು ದೇಶದ ಸುಭಿಕ್ಷತೆ ರೈತರಾಗಿ ಬೆಳೆಯಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದು, ಈ ಯೋಜನೆಗಳ ಸದುಪಯೋಗಕ್ಕಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೈಜೋಡಿಸಬೇಕು ಎಂದು ಅವರು ಹೇಳಿದರು.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ಫೆಬ್ರವರಿ 19 ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಅರ್ಹ ರೈತ ಕುಟುಂಬಕ್ಕೆ ವಾರ್ಷಿಕ 6,000 ರೂ.ಗಳ ಆರ್ಥಿಕ ನೆರವನ್ನು 3 ಕಂತುಗಳಲ್ಲಿ 4 ತಿಂಗಳಿಗೊಮ್ಮೆ ನೀಡುವ ಯೋಜನೆಯಾಗಿದೆ. ಈ ಯೋಜನೆಯ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಆಗಲಿದ್ದು, ಯಾವುದೇ ಮಧ್ಯವರ್ತಿಯ ಲೇವಡಿಯಿಲ್ಲದೆ ನಿಜವಾದ ಫಲಾನುಭವಿಗೆ ನೇರವಾಗಿ ಸೇರುವ ಯೋಜನೆಯಾಗಿದೆ ಎಂದರು.



ನೇರ ಹಣ ವರ್ಗಾವಣೆ ಪ್ರಕ್ರಿಯೆಗೆ ಚಾಲನೆ

ಪಶ್ಚಿಮ ಬಂಗಾಳದ ಹುಗ್ಲಿಯಾದ ತಾರಕೇಶ್ವರ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 23ನೇ ಕಂತನ್ನು ಬಿಡುಗಡೆಗೊಳಿಸುವ ಕಾರ್ಯಕ್ರಮದಲ್ಲಿ 9.4ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ 18,800 ಕೋಟಿ ರೂ.ಗಳಿಗೂ ಅಧಿಕ ಮೊತ್ತದ ನೇರ ಹಣ ವರ್ಗಾವಣೆ ಪ್ರಕ್ರಿಯೆಗೆ ಅವರು ಚಾಲನೆ ನೀಡಿದರು.

ತುಮಕೂರು ಜಿಲ್ಲೆಯಲ್ಲಿ 22 ಕಂತುಗಳ ಮೂಲಕ ಒಟ್ಟು 2,28,543 ರೈತ ಫಲಾನುಭವಿಗಳಿಗೆ 1136.64 ಕೋಟಿ ರೂ.ಗಳ ಆರ್ಥಿಕ ನೆರವು ನೀಡಲಾಗಿದೆ. 2026-27ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ 2,30,941 ಫಲಾನುಭವಿಗಳಿಗೆ ಕೇಂದ್ರ ಸರ್ಕಾರದಿಂದ 23ನೇ ಕಂತಿನ ಮೂಲಕ 46.19 ಕೋಟಿ ರೂ.ಗಳ ಆರ್ಥಿಕ ನೆರವು ಬಿಡುಗಡೆಯಾಗಿದೆ ಎಂದರು.

ತುಮಕೂರು ಜಿಲ್ಲೆ ಬುದ್ಧಿಜೀವಿಗಳ, ಸಂಸ್ಕಾರವಂತರ ಜಿಲ್ಲೆಯಾಗಿದ್ದು, ಈ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಕೇಂದ್ರ ಸರ್ಕಾರದ ಎಲ್ಲಾ ಯೋಜನೆಗಳನ್ನು ತರಲು ಪ್ರಯತ್ನ ನಡೆಸಲಾಗಿದೆ. ಅಂತೆಯೇ, ತಿಮ್ಮರಾಜನಹಳ್ಳಿಯಲ್ಲಿ ಕಂಟೈನರ್ ಕಾರ್ಪೋರೇಷನ್ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ಅಗತ್ಯವಿರುವ ಎರಡೂವರೆ ಎಕರೆ ಭೂಮಿಯನ್ನು ನೀಡಲು ಕ್ರಮವಹಿಸುವಂತೆ ಜಿಲ್ಲಾಡಳಿತಕ್ಕೆ ಸಚಿವರು ಸೂಚಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ಇಂದು

34,500 ಜನರಿಗೆ ಡಯಾಲಿಸಿಸ್ ಉಚಿತ

• **ದೊಡ್ಡಬಳ್ಳಾಪುರ:** ಲಯನ್ಸ್ ಕ್ಲಬ್ ಆಫ್ ದೊಡ್ಡಬಳ್ಳಾಪುರದ 54ನೇ ಅಧ್ಯಕ್ಷರಾಗಿ ವಾಮದೇವನ್ ಅವರು ಜೂನ್ 21 ಭಾನುವಾರ ಪದವಿ ಸ್ವೀಕರಿಸಲಿದ್ದು, ನಗರದ ಒಕ್ಕಲಿಗರ ಸಮುದಾಯ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ದೊಡ್ಡಬಳ್ಳಾಪುರ ಲಯನ್ಸ್ ಕ್ಲಬ್‌ನ ಸಂಚಾಲಕ ಡಾ.ಹುಲಿಕಲ್ ನಟರಾಜ್ ತಿಳಿಸಿದರು.

ನಗರದ ಲಯನ್ಸ್ ಕ್ಲಬ್ ಚಾರಿಟೇಬಲ್ ಟ್ರಸ್ಟ್ ನ ಡಯಾಲಿಸಿಸ್ ಆಸ್ಪತ್ರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೊಡ್ಡಬಳ್ಳಾಪುರ ಲಯನ್ಸ್ ಕ್ಲಬ್ ಚಾರಿಟೇಬಲ್ ಟ್ರಸ್ಟ್ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಪಿಪಿಪಿ ಮಾದರಿಯಲ್ಲಿ 34,500 ಮಂದಿಗೆ ಉಚಿತ ಡಯಾಲಿಸಿಸ್ ಸೇವೆಯನ್ನು ಒದಗಿಸಲಾಗಿದೆ. ಡಯಾಲಿಸಿಸ್ ಆಸ್ಪತ್ರೆಯಲ್ಲಿ ಪ್ರತಿ ನಿತ್ಯ 12 ರಿಂದ 18 ಮಂದಿಗೆ ಡಯಾಲಿಸಿಸ್ ಸೇವೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರ ಜತೆಗೆ 53 ವರ್ಷದಿಂದ ನಿರಂತರವಾಗಿ ಪ್ರತಿ ಗುರುವಾರ 100 ರಿಂದ 120 ಮಂದಿಗೆ ಉಚಿತ ಕಣ್ಣಿನ ತಪಾಸಣೆ ನಡೆಸಲಾಗುತ್ತಿದೆ. ಪ್ರತಿ ತಿಂಗಳ ಮೊದಲನೇ ಸೋಮವಾರ ಸುಮಾರು 75 ರಿಂದ 100 ಮಂದಿಗೆ ಕಣ್ಣಿನ ಪೊರೆ ಚಿಕಿತ್ಸೆಯನ್ನು ಮತ್ತು ಐಒಎಲ್ ಚಿಕಿತ್ಸೆ ಮಾಡಲಾಗುತ್ತಿದೆ. ಸಂಸ್ಥೆಯ ವತಿಯಿಂದ ರಾಷ್ಟ್ರೀಯ ಮತ್ತು ನಾಡಹಬ್ಬಗಳ ಆಚರಣೆ, ಪಶು ಆರೋಗ್ಯ ತಪಾಸಣೆ, ಮಕ್ಕಳ ಆರೋಗ್ಯ ತಪಾಸಣೆ, 10 ಸಾವಿರ ಮಕ್ಕಳಿಗೆ ದಂತ ತಪಾಸಣೆ, ರಕ್ತದಾನ ಶಿಬಿರ, ಪರಿಸರ ಸಂರಕ್ಷಣೆ, ಉಚಿತ ನೋಟ್ ಪುಸ್ತಕ ವಿತರಣೆ, ಮೊಬೈಲ್ ಬಡಿ ಪುಸ್ತಕ ಹಿಡಿ ಅಭಿಯಾನ, ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ ಎಂದರು. ಇದೇ ವೇಳೆ ದೊಡ್ಡಬಳ್ಳಾಪುರ ಲಯನ್ಸ್ ಸಂಸ್ಥೆಯ ಅಧ್ಯಕ್ಷ ಎಲ್.ಎನ್. ವಾಸುದೇವರಾವ್ ಮಾತನಾಡಿದರು. ದೊಡ್ಡಬಳ್ಳಾಪುರ ಲಯನ್ಸ್ ಕ್ಲಬ್ ಕಾರ್ಯದರ್ಶಿ ರೇಖಾ ವೆಂಕಟೇಶ್, ಕೋಶಾಧಿಕಾರಿ ನಿರ್ಮಲಾ.ಬಿ, ಸಹಕಾರ್ಯದರ್ಶಿ ಭಾರತಿ ಮಂಜುನಾಥ್, ನಿಯೋಜಿತ ಮಹಿಳಾ ಜಗದೀಶ್ ರೆಡ್ಡಿ, ಪ್ರೋಗ್ರಾಮ್ ಕಮಿಟಿ ಎಂಜಿಸಿ ವೆಂಕಟೇಶ್ ಇದ್ದರು.



54ನೇ ಅಧ್ಯಕ್ಷೆ

ಲಯನ್ಸ್ ಕ್ಲಬ್ ಆಫ್ ದೊಡ್ಡಬಳ್ಳಾಪುರದ 54ನೇ ಅಧ್ಯಕ್ಷರಾಗಿ ವಾಮದೇವನ್ ಅವರು ಭಾನುವಾರ ಪದವಿ ಸ್ವೀಕರಿಸಲಿದ್ದಾರೆ. ನಗರದ ಒಕ್ಕಲಿಗರ ಸಮುದಾಯ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ. 25 ಮಂದಿ ಮಹಿಳೆಯರು ಹಾಗೂ 25 ಮಂದಿ ಪುರುಷರು ನಿರ್ದೇಶಕರಾಗಿ ಪದವಿ ಸ್ವೀಕರಿಸಲಿದ್ದಾರೆ.

ಬೆಂ. ಗ್ರಾ. ಜಿಲ್ಲೆಗೆ 99.39% ಫಲಿತಾಂಶ | ಕ್ಷೇತ್ರ ಶಿಕ್ಷಣಾಧಿಕಾರಿ ಲಲಿತಮ್ಮ ಪ್ರಶಂಸೆ

ಎಸ್ಎಸ್ಎಲ್‌ಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

• **ದೇವನಹಳ್ಳಿ:** 2025–26 ಮಾರ್ಚ್‌ನಲ್ಲಿ ನಡೆದ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯಲ್ಲಿ 99.39% ಫಲಿತಾಂಶ ಪಡೆದಿದ್ದು ಅದರಲ್ಲಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುತ್ತಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಲಲಿತಮ್ಮ ತಿಳಿಸಿದರು.

ಅವರು ಪಟ್ಟಣದ ಗುರುಭವನದಲ್ಲಿ ಕರ್ನಾಟಕ ಸರ್ಕಾರ ಜಿಲ್ಲಾ ಸಾಕ್ಷರತಾ ಇಲಾಖೆ ಮತ್ತು ಜಿಲ್ಲಾ ಪಂಚಾಯತಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಮುಖ್ಯೋಪಾಧ್ಯಾಯರ ಸಂಘ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದಿಂದ ಆಯೋಜಿಸಲಾಗಿದ್ದ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಮಕ್ಕಳಿಗೆ ಉಪಯುಕ್ತ ಪದ ಚಟುವಟಿಕೆ ಪುಸ್ತಕ ಅನಾವರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲೆಯಾದ್ಯಂತ 3,091 ವಿದ್ಯಾರ್ಥಿಗಳು ಎಸ್ಎಸ್ಎಲ್‌ಸಿ ಪರೀಕ್ಷೆ ಬರೆದಿದ್ದು ಅದರಲ್ಲಿ 3,072 ವಿದ್ಯಾರ್ಥಿಗಳು ಉತ್ತೀರ್ಣರಾಗಿ 99.39% ಫಲಿತಾಂಶ ಬಂದಿದೆ, 72 ಪ್ರೌಢಶಾಲೆಗಳ ಪೈಕಿ 62 ಶಾಲೆಗಳಲ್ಲಿ ಅದರಲ್ಲಿ 15ಶಾಲೆ ಸರ್ಕಾರಿ ಶಾಲೆಗಳಾಗಿದ್ದು, 6 ವಸತಿ ಶಾಲೆ, 9 ಅನುದಾನಿತ ಶಾಲೆ, ಇತರೆ 35 ಶಾಲೆಗಳಲ್ಲಿ 100% ಫಲಿತಾಂಶ ಬಂದಿದೆ, 64 ವಿದ್ಯಾರ್ಥಿಗಳು 60% ಗಿಂತ ಹೆಚ್ಚು ಅಂಕ ಪಡೆದಿದ್ದರೆ, ಗಿರೀಶ್ ಎಂಬ ವಿದ್ಯಾರ್ಥಿ 625ಕ್ಕೆ 620, ಸಾನಿಯಾ 618 ಅಂಕ ಪಡೆದಿದ್ದಾರೆ, ಇದಕ್ಕೆ ಕಾರಣ ನಾವು ರಜಾ ದಿನಗಳಲ್ಲೂ ವಿಶೇಷ ತರಗತಿಗಳನ್ನು ತೆಗೆದುಕೊಂಡು ತರಬೇತಿ ನೀಡಿದ ಪಾಠದ ಹೆಚ್ಚು ಪರಿಣಾಮ ಬಂದಿದೆ ಎಂದರು. ಇದೇ ಸಮಯದಲ್ಲಿ ಚಟುವಟಿಕೆ ಪುಸ್ತಕ ಮುದ್ರಣಕ್ಕೆ ಸಮಾಜಸೇವಕರು ಹಾಗೂ ದಾನಿಗಳು ಸಹಕಾರ ನೀಡಿದ್ದಾರೆ. ಇಂದಿನ ಕಾರ್ಯಕ್ರಮಕ್ಕೆ ಹೆಚ್ಚು ಸಹಕಾರ ನೀಡಿರುವ ಬಟ್ಟನಹಳ್ಳಿ ಚೇತನ್‌ಗೌಡ ಅವರನ್ನು ಶ್ಲಾಘಿಸಲೇಬೇಕು, ಮತ್ತೊಬ್ಬ ದಾನಿ ಮಲ್ಲೇಪುರದ ಎಂ.ಪಿ.ಗಿರೀಶ್ ಎಂದರು.



ಸಮಾಜಸೇವಕ ಬಟ್ಟನಹಳ್ಳಿ ಚೇತನ್‌ಗೌಡ ಮಾತನಾಡಿ, ಪ್ರತಿಭಾ ಪುರಸ್ಕಾರ ಸ್ವೀಕರಿಸಲು ಬಂದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವರನ್ನು ಕರೆತಂದಿರುವ ಶಿಕ್ಷಕರು ಹಾಗೂ ಪೋಷಕರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಕೆ.ಹನುಮಂತಪ್ಪ, ಇ.ಒ.ಮುನಿರಾಜು, ರಾಜ್ಯಸಮಿತಿ ಸದಸ್ಯ ನಾರಾಯಣಗೌಡ, ಉಪಾಧ್ಯಕ್ಷ ಆರ್ಚರ್ ಇದ್ದರು.

ಕಳಪೆ ಕಾಮಗಾರಿ: ಎಇ ಅಮಾನತಿಗೆ ಆದೇಶ

• **ಬೆಂಗಳೂರು:** ನಗರದ ಕಳಪೆ ರಸ್ತೆ ಕಾಮಗಾರಿಗಳ ವಿರುದ್ಧ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದ ಬೆನ್ನಲ್ಲೇ, ಅವರ ನಿರ್ದೇಶನದಂತೆ ಮೊದಲ ತಲೆದಂಡವಾಗಿದೆ. ಕಳಪೆ ಡಾಂಬರೀಕರಣ ಕಾಮಗಾರಿಗೆ ಹಿನ್ನೆಲೆ ಸಹಾಯಕ ಅಭಿಯಂತರರೊಬ್ಬರ ಅಮಾನತು ಗೊಳಿಸಿ ಆದೇಶ ನೀಡಲಾಗಿದೆ. ಜೊತೆಗೆ ಗುತ್ತಿಗೆದಾರ ಸಂಸ್ಥೆಯನ್ನು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 110 ರ ಸಂಪಂಗಿರಾಮನಗರ ವ್ಯಾಪ್ತಿಯಲ್ಲಿ ನಡೆದ ಕಳಪೆ ಡಾಂಬರೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ಸಹಾಯಕ ಅಭಿಯಂತರ ಪೂಜಾರಪ್ಪ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ನಿಯಮ ಗಾಳಿಗೆ ತೂರಿ ಕಾಮಗಾರಿ: 'ಇನ್ಫ್ರಾಸ್ಟ್ರಕ್ಚರ್ ಪ್ರೋಗ್ರಾಮ್' ಅಡಿಯಲ್ಲಿ ಸಂಪಂಗಿರಾಮನಗರ ವ್ಯಾಪ್ತಿಯ ಮುಖ್ಯ ಮತ್ತು ಉಪ-ಮುಖ್ಯ ರಸ್ತೆಗಳಲ್ಲಿ ಕೈಗೊಳ್ಳಲಾಗಿದ್ದ ಅಸ್ಫಾಲ್ಟಿಂಗ್ ಅಂದರೆ ಡಾಂಬರೀಕರಣ ಕಾಮಗಾರಿಗಳಲ್ಲಿ ಭಾರೀ ಪ್ರಮಾಣದ ಕಳಪೆ ನಿರ್ಮಾಣ ಮಾಡಿರುವುದು ತಪಾಸಣೆಯ ವೇಳೆ ಪತ್ತೆಯಾಗಿತ್ತು. ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಸರಕಾರದ ಅಧಿಕೃತ ಕ್ರಿಯಾಯೋಜನೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ. ರಸ್ತೆಗೆ ಹಾಕಬೇಕಾಗಿದ್ದ ಡಾಂಬರಿನ ಸರಿಯಾದ ಪ್ರಮಾಣ ಹಾಗೂ ದಪ್ಪವನ್ನು ಕಾಯ್ದುಕೊಳ್ಳದೆ, ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಾಮಗಾರಿ ನಡೆಸಿ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ತಪಾಸಣೆ ವೇಳೆ ದೃಢಪಟ್ಟಿತ್ತು. ಜವಾಬ್ದಾರಿಯುತ ಅಧಿಕಾರಿಯಾಗಿ ಗುತ್ತಿಗೆದಾರರ ಜೊತೆ ಶಾಮೀಲಾಗಿ ಕರ್ತವ್ಯ ಲೋಪ ಎಸಗಿದ ಕಾರಣಕ್ಕೆ ಸಚಿವ ಕೃಷ್ಣ ಬೈರೇಗೌಡರ ಕಟ್ಟುನಿಟ್ಟಿನ ಆದೇಶದಂತೆ ಸಹಾಯಕ ಅಭಿಯಂತರ ಪೂಜಾರಪ್ಪ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ನಿಯಮದ ಪ್ರಕಾರ ಸೇವೆಯಿಂದ ತಕ್ಷಣದಿಂದಲೇ ಅಮಾನತುಗೊಳಿಸಿ ಆದೇಶಿಸಲಾಗಿದೆ.



ಗುತ್ತಿಗೆ ಕಂಪನಿ ಬ್ಲಾಕ್ ಲಿಸ್ಟ್‌ಗೆ

ಅಧಿಕಾರಿಯ ಅಮಾನತಿನ ಜೊತೆಗೆ, ಕಳಪೆ ಕಾಮಗಾರಿ ನಡೆಸಿ ಸಾರ್ವಜನಿಕರ ಸುರಕ್ಷತೆಯೊಂದಿಗೆ ಆಟವಾಡಿದ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ ಗುತ್ತಿಗೆದಾರ ಕಂಪನಿಯ ವಿರುದ್ಧವೂ ಸಚಿವರು ಕಠಿಣ ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಿದ್ದು, ಸದರಿ ಗುತ್ತಿಗೆದಾರ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದ್ದು, ದಂಡ ವಿಧಿಸಲಾಗಿದೆ.

ಜಯನಗರ: ಟೋಯಿಂಗ್ ಕಾರ್ಯಾಚರಣೆಗೆ ಸೂಚನೆ

• **ಬೆಂಗಳೂರು:** ಜಯನಗರ ವಲಯ ವ್ಯಾಪ್ತಿಯಲ್ಲಿ ಮುಂದಿನ ವಾರದಿಂದ ಟೋಯಿಂಗ್ ಕಾರ್ಯಾಚರಣೆ ನಡೆಸುವಂತೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸೂಚನೆ ನೀಡಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಹಾಗೂ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ. ಎನ್. ರಮೇಶ್ ಜಯನಗರ ವಲಯದ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗೆ ಇಳಿಯಲಿರುವ ಟೋಯಿಂಗ್ ವಾಹನಗಳನ್ನು ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಆಯುಕ್ತ ಕೆ. ಎನ್. ರಮೇಶ್, ಅನಧಿಕೃತ ವಾಹನ ಪಾರ್ಕಿಂಗ್ ನಿಂದ ವಾಹನ ಸವಾರರಿಗೆ ಹಾಗೂ ಪಾದಚಾರಿಗಳಿಗೆ ಉಂಟಾಗುತ್ತಿರುವ ಕಿರಿಕಿರಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಜಯನಗರ ವಲಯದ ವ್ಯಾಪ್ತಿಯಲ್ಲಿ ಮುಂದಿನ ವಾರದಿಂದ ಒಟ್ಟು ಮೂರು ಟೋಯಿಂಗ್ ವಾಹನಗಳ ಕಾರ್ಯಾಚರಣೆಗೆ ಇಳಿಯಲಿವೆ ಎಂದು ತಿಳಿಸಿದರು. ಜಯನಗರ ವಲಯದ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಅಸಮರ್ಪಕ ಪಾರ್ಕಿಂಗ್ ತಡೆಯಲು ದಕ್ಷಿಣ ಪಾಲಿಕೆ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಪಡೆದಿರುವ ಮೂರು ನೂತನ ಟೋಯಿಂಗ್ ವಾಹನಗಳು ಸಾರಿಗೆ ಇಲಾಖೆಯಿಂದ ಫಿಟ್ನೆಸ್ ಪ್ರಮಾಣ ಪತ್ರ ಪಡೆದಿವೆ. ಅಧಿಕೃತವಾಗಿ ಸಂಚಾರ ಪೊಲೀಸರಿಗೆ ಹಸ್ತಾಂತರಿಸಲಾಗುವುದು.

ಉದ್ಘಾಟನೆ



ಶನಿವಾರ ಮಲ್ಲೇಶ್ವರ ಬೀಗಲ್ಸ್ ಬಾಸ್ಕೆಟ್‌ಬಾಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾದ ಭಾರತೀಯ ಯಂತ್ರ ಕ್ರೀಡಾ ಮಹೋತ್ಸವ (ಬಿಕೆವೈಎಂ)- 2026 ನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ದೇಶದ ವಿವಿಧೆಡೆಯಿಂದ ಆಗಮಿಸಿದ್ದ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನ ಗಮನ ಸೆಳೆಯಿತು.

ಕಿರುಸುದ್ದಿ

ಸಿಎಂ ವಿರುದ್ಧ ಅಪಪ್ರಚಾರ: ಎಫ್‌ಐಆರ್ ದಾಖಲು

• **ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ನಡೆಸಿದ ಆರೋಪದ ಮೇಲೆ ಕುಮಾರಸ್ವಾಮಿ ಫಾರ್ ಸಿಎಂ ಸೋಶಿಯಲ್ ಮೀಡಿಯಾ ಪೇಜ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ವಕೀಲ ದೀಪು ಸಿ.ಆರ್.ಅವರು ನೀಡಿದ ಅಧಿಕೃತ ದೂರಿನ ಮೇರೆಗೆ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜೆಡಿಎಸ್ ಪಕ್ಷದ ಅಧಿಕೃತ ಜಾಲತಾಣದ ಪುಟಗಳಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶವವಾಗಿ ಚಿತ್ರಿಸುವ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಸಿದ್ಧಪಡಿಸಲಾದ ವಿಡಿಯೋವೊಂದನ್ನು ಪ್ರಸಾರ ಮಾಡಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಸಿಎಂ ಡಿ.ಕೆ.ಶಿವಕುಮಾರ್ ಅವರ ತೇಜೋವಧೆ ಮಾಡಲು ಮತ್ತು ಅವರ ಘನತೆಗೆ ಧಕ್ಕೆ ತರಲು ಈ ವಿಡಿಯೋ ಬಳಸಲಾಗಿದೆ. ಸಮಾಜದಲ್ಲಿ ತಪ್ಪು ಸಂದೇಶ ರವಾನಿಸುವ ಮೂಲಕ ಸಾರ್ವಜನಿಕ ಶಾಂತಿ ಭಂಗಕ್ಕೆ ಯತ್ನಿಸಲಾಗಿದೆ ಎಂದು ದೂರುದಾರರು ಆರೋಪಿಸಿದ್ದಾರೆ. ಸದ್ಯ ಸದಾಶಿವನಗರ ಪೊಲೀಸರು ಪ್ರಕರಣವನ್ನು ಕೈಗೆತ್ತಿಕೊಂಡಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ನೀಟ್ ಪರೀಕ್ಷೆ ಇಂದು: ಸುಗಮ ಸಂಚಾರಕ್ಕೆ ಕ್ರಮ

• **ಬೆಂಗಳೂರು:** ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜೂ.21ರಂದು ನೀಟ್ ಪರೀಕ್ಷೆ ನಡೆಯಲಿದ್ದು, ಆದರಿಂದ ಸಾರ್ವಜನಿಕರ ಸುಗಮ ಸಂಚಾರ ದೃಷ್ಟಿಯಿಂದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಬೆಂಗಳೂರು ಸಂಚಾರ ಪೊಲೀಸರು ತಿಳಿಸಿದ್ದಾರೆ. ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ, ಮ್ಯಾರಥಾನ್ ಕಾರ್ಯಕ್ರಮ ಹಾಗೂ ರಾಜಕೀಯ ಪಕ್ಷದ ಪ್ರಮುಖ ಕಾರ್ಯಕ್ರಮಗಳು ಆಯೋಜನೆಗೊಂಡಿರುತ್ತವೆ. ಕಾರ್ಯಕ್ರಮಗಳು ಆಯೋಜನೆಗೊಂಡಿರುವ ಸ್ಥಳಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಬೆಂಗಳೂರು ಸಂಚಾರ ವಿಭಾಗದಿಂದ ಕೆಲವು ಸಂಚಾರ ನಿರ್ಬಂಧ/ ಮಾರ್ಪಾಡುಗಳನ್ನು ಮಾಡಲಾಗಿರುತ್ತದೆ. ಇದರೊಂದಿಗೆ ನೀಟ್ ಪರೀಕ್ಷೆ ನಡೆಯಲಿದ್ದು, ಆದರಿಂದ ಸಾರ್ವಜನಿಕರ ಸುಗಮ ಸಂಚಾರ ದೃಷ್ಟಿಯಿಂದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಗಳೂರು ನಗರದ ಕೇಂದ್ರಗಳಲ್ಲಿ ನೀಟ್ ಪರೀಕ್ಷೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು, ಸಂಚಾರ ವಿಭಾಗದಿಂದ ಪ್ರಕಟಿಸಲಾಗುವ ಸಂಚಾರ ಸಲಹೆಗಳ ಬಗ್ಗೆ ಗಮನಹರಿಸಿ ತಮ್ಮ ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ತಲುಪಲು ತಮ್ಮ ಪ್ರಯಾಣವನ್ನು ಯೋಜಿಸಿಕೊಳ್ಳಲು ಹಾಗೂ ಸುಗಮ ಸಂಚಾರಕ್ಕೆ ಸಹಾಯಕ್ಕಾಗಿ ಸಂಚಾರ ನಿಯಂತ್ರಣ ಕೋಣೆಯ ದೂ.ಸಂಖ್ಯೆ: 22943131, 22943030 ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದೆ.

ಜೂ.23ಕ್ಕೆ ಕೃತಿ ಬಿಡುಗಡೆ

• **ಬೆಂಗಳೂರು:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಹತ್ವದ ಪ್ರಕಟಣೆಯಾಗಿ ಭಾರತದ ಸಂವಿಧಾನದಲ್ಲಿ ಭಾಷೆಗಳು ನಡೆದ ಹಾದಿಯ ಕುರಿತು ಸಂವಿಧಾನ ನುಡಿ ಸಂಹಿತೆ ಕೃತಿಯು ಜೂ.23ರಂದು ನಗರದ ನಯನ ಸಭಾಂಗಣದಲ್ಲಿ ಬಿಡುಗಡೆಯಾಗಲಿದೆ. ಡಾ. ಸಂತೋಷ ಹಾನಗಲ್ಲ ಅವರು ಸಂಪಾದಿಸಿರುವ ಈ ವಿಶಿಷ್ಟ ಕೃತಿಯಲ್ಲಿ ಸಂವಿಧಾನದಲ್ಲಿ ಭಾಷೆಗಳ ಕುರಿತು ನೀಡಲಾದ ಸ್ಥಾನಮಾನ, ಹಕ್ಕುಗಳು, ಜವಾಬ್ದಾರಿಗಳು ಮತ್ತು ಮೌಲ್ಯಗಳು ಹೇಗೆ ದೇಶದ ಏಕತೆಗೆ ಆಧಾರಭೂತವಾಗಿವೆ ಮತ್ತು ಇಲ್ಲಿನ ವೈವಿಧ್ಯತೆಯನ್ನು ಗೌರವಿಸುವ ನಮ್ಮ ಸಂಸ್ಕೃತಿಯ ವಿಶೇಷತೆಯನ್ನು ಪ್ರತಿಬಿಂಬಿಸಿವೆ ಎಂಬ ಅಂಶಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ.

ಸಚಿವ ಕೃಷ್ಣ ಬೈರೇಗೌಡ ಹೇಳಿಕೆ | ಜನರ ನಿರೀಕ್ಷೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ

ಸಾರಿಗೆ ವ್ಯವಸ್ಥೆ ಬಲವರ್ಧನೆಗೆ ಮೆಟ್ರೋಗೆ ವೇಗ

• **ಬೆಂಗಳೂರು:** ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೋ ವಿಸ್ತರಣಾ ಕಾಮಗಾರಿಗೆ ವೇಗ ನೀಡುವುದು ನನ್ನ ಮೊದಲ ಆದ್ಯತೆಯಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ಅಧಿಕಾರಿಗಳೊಂದಿಗೆ ನಮ್ಮ ಮೆಟ್ರೋ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಮೆಟ್ರೋ ಮೇಲೆ ಜನರಿಗೆ ಬಹಳ ನಿರೀಕ್ಷೆ ಹಾಗೂ ಭಾವನೆಯನ್ನು ಹೊಂದಿದ್ದಾರೆ. ಅವರ ಭಾವನೆ ಹಾಗೂ ನಿರೀಕ್ಷೆಯನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಅದರಲ್ಲೂ ಬಿಎಂಆರ್‌ಸಿಎಲ್ ಸ್ವಾಯತ್ತದೊಂದಿಗೆ ಉತ್ತರದಾಯಿತ್ವಹೊಂದಿರಬೇಕು. ಇಲ್ಲದಿದ್ದರೆ ಅದು ಸ್ವೇಚ್ಛಾಚಾರವಾಗುತ್ತದೆ ಎಂದರು.

25 ವರ್ಷಗಳ ಹಿಂದೆ ಶಂಕುಸ್ಥಾಪನೆಗೊಂಡ ನಮ್ಮ ಮೆಟ್ರೋ ಯೋಜನೆಯ ಯಾವ ಕಾಮಗಾರಿಯೂ ಕಾಲಮಿತಿಯೊಳಗೆ ಪೂರ್ಣಗೊಳಿಸಿಲ್ಲ. ನಿಗದಿತ ಕಾಲಾವಧಿಯ ಯಾಕೆ ಕೆಲಸಗಳು ವಿಳಂಬ ಆಗುತ್ತಿದೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಬೇಕೆಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಹಾಗೇ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೋ ವಿಸ್ತರಣಾ ಕಾಮಗಾರಿಗೆ ವೇಗ ನೀಡುವುದು ಆದ್ಯತೆಯಾಗಿದೆ ಎಂದು ಹೇಳಿದ್ದಾರೆ.

ಜನರ ನಿರೀಕ್ಷೆ ಈಡೇರಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಾಗುವುದು. ಕೆಲಸ ಮಾಡುವ ಸ್ಥಳದಲ್ಲಿ ಅನಗತ್ಯವಾದ ಜಾಗವನ್ನು ಬಳಕೆ ಮಾಡುವುದರಿಂದ ಟ್ರಾಫಿಕ್ ಸಮಸ್ಯೆ ಆಗುತ್ತಿದೆ. ಆದರಿಂದ ಅಗತ್ಯವಿರುವ ಜಾಗವನ್ನು ಮಾತ್ರ ತೆಗೆದುಕೊಳ್ಳಬೇಕು. ಜೊತೆಗೆ ಕಬ್ಬಿಣದ ತುಂಡು ಸೇರಿದಂತೆ ಇನ್ನಿತರ ಸಾಮಾಗ್ರಿಗಳನ್ನು ರಸ್ತೆಯಲ್ಲಿಯೇ ಉಳಿಸುವುದರಿಂದ ಜನರು ಅಲ್ಲಿಗೆ ಹೆಚ್ಚಿನ ಕಸವನ್ನು ಹಾಕುತ್ತಿದ್ದಾರೆ. ಇದರಿಂದ ಬೆಂಗಳೂರಿನ ಸೌಂದರ್ಯ ಕಡಿಮೆಯಾಗುತ್ತದೆ. ಆದರಿಂದ ವರ್ಕ್‌ಸೈಟ್ ಮ್ಯಾನೇಜ್‌ಮೆಂಟ್ ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ ಎಂದರು.

ಗುಲಾಬಿ ಬಣ್ಣದ 7.5 ಕಿಮೀ ಎತ್ತರದ ಮಾರ್ಗವು ಆ.15 ರೊಳಗೆ ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ, ಆದರೆ ತಾವರೆ ಕೆರೆಯಿಂದ ನಾಗವಾರವರೆಗಿನ 13.7 ಕಿಮೀ ಭೂಗತ ಮಾರ್ಗವು ಮಾರ್ಚ್ 2027 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದರು.



» ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೋ ವಿಸ್ತರಣಾ ಕಾಮಗಾರಿಗೆ ವೇಗ ನೀಡುವುದು ಆದ್ಯತೆ

ಪ್ರಾಯೋಗಿಕ ಸಂಚಾರ ಆರಂಭಿಸಲು ಸೂಚನೆ

ಕೆ.ಆರ್.ಪುರದಿಂದ ಮಾರತ್ತಹಳ್ಳಿಯವರೆಗೆ ಮಾರತಹಳ್ಳಿಯಿಂದ ಎಚ್‌ಎಸ್‌ಆರ್ ಲೇಔಟ್ ಮಾರ್ಗದಲ್ಲಿ ಅಕ್ಟೋಬರ್ ವೇಳೆಗೆ ಪ್ರಾಯೋಗಿಕ ಸಂಚಾರವನ್ನು ಆರಂಭಿಸಲು ಸೂಚಿಸಲಾಗಿದೆ. ಮಾರತ್ತಹಳ್ಳಿ ಮತ್ತು ಸಿಲ್ಕ್ ಬೋರ್ಡ್ ನಿಲ್ದಾಣಗಳಲ್ಲಿ ನಿರ್ಮಾಣ ಕಾರ್ಯಗಳು ಇನ್ನೂ ಬಾಕಿ ಉಳಿದಿವೆ, ಆದರೆ ಅಕ್ಟೋಬರ್‌ನಲ್ಲಿ ಪ್ರಾಯೋಗಿಕ ಸಂಚಾರ ಪ್ರಾರಂಭವಾಗುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ವಿಮಾನ ನಿಲ್ದಾಣ ಮಾರ್ಗದಲ್ಲಿ ರೈಲು ಸಂಚಾರ ಆರಂಭ

ಹೆಬ್ಬಾಳ- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ಮಾರ್ಗದಲ್ಲಿ ರೈಲು ಸಂಚಾರ ಜೂನ್ 2027ರ ವೇಳೆಗೆ ಕಾರ್ಯಾರಂಭ ಮಾಡುವ ಗುರಿಯನ್ನು ಹೊಂದಿದ್ದು, ಉಳಿದ ಹೆಬ್ಬಾಳ-ಕೆಆರ್ ಪುರ ಮಾರ್ಗವು ಡಿಸೆಂಬರ್ 2027 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಪೊಲೀಸರಿಂದ ಕಿರುಕುಳ: ವ್ಯಕ್ತಿ ಆತ್ಮಹತ್ಯೆ

• **ಬೆಂಗಳೂರು:** ನಗರದ ಕಾಡುಗೋಡಿಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜಾತಿನಿಂದನೆ ಪ್ರಕರಣ ದಾಖಲಿಸಿ, ಹಣಕ್ಕೆ ಬೇಡಿಕೆಯಿಟ್ಟು ಕಿರುಕುಳ ನೀಡಿದ ಒತ್ತಡದಲ್ಲಿ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾಡುಗೋಡಿಯ ಚನ್ನಸಂದ್ರ ಮೂಲದ ಪಾಪಣ್ಣ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪಾಪಣ್ಣ ಅವರ ತಂಗಿ ಭಾಗ್ಯಶ್ರೀ ನೀಡಿದ ದೂರಿನ ಮೇಲೆ ಜೋಗಿ ಸೀನಾ, ಪ್ರಶಾಂತ್, ಸಂತೋಷ್‌ನನ್ನು ವಶಕ್ಕೆ ಪಡೆಯಲಾಗಿದೆ ಎಂದು ಕಾಡುಗೋಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸಾವಿಗೂ ಮುನ್ನ ಪಾಪಣ್ಣ ವಿಡಿಯೋ ಮಾಡಿ ನಯನಾ ಎಂಬಾಕೆ ವಿರುದ್ಧ ಹಣಕ್ಕೆ ಬೇಡಿಕೆಯಿಟ್ಟು ಆರೋಪ ಮಾಡಿದ್ದಾರೆ. ನಯನಾ ನನ್ನ ಮೇಲೆ ಸುಳ್ಳು ಜಾತಿನಿಂದನೆ ಪ್ರಕರಣ ದಾಖಲು ಮಾಡಿಸಿ, 10 ಲಕ್ಷ ರೂ. ಹಣ ನೀಡುವಂತೆ ಒತ್ತಾಯ ಮಾಡುತ್ತಿದ್ದಾರೆ. ಇವರಿಂದ ನಮ್ಮ ಕುಟುಂಬವನ್ನು, ನನ್ನ ತಂಗಿಯನ್ನು ಕಾಪಾಡಿ ಎಂದು ವಿಡಿಯೋದಲ್ಲಿ ಮನವಿ ಮಾಡಿದ್ದಾರೆ. ಕಳೆದ 2021ರಲ್ಲಿ ಜಾತಿನಿಂದನೆ ಪ್ರಕರಣ ದಾಖಲಿಸಿ ಪ್ರಕರಣ ವಾಪಸ್ ಪಡೆಯಲು 10 ಲಕ್ಷ ರೂ.ವರೆಗೂ ಬೇಡಿಕೆಯಿಟ್ಟಿದ್ದರು. ಇದೀಗ ಮತ್ತೊಂದು ಬಾರಿ ನಕಲಿ ಜಾತಿನಿಂದನೆ ಪ್ರಕರಣ ದಾಖಲಿಸಿ ಹಣಕ್ಕೆ ಬೇಡಿಕೆಯಿಟ್ಟಿದ್ದಾರೆ. ನಾನೊಬ್ಬ ಬಡ ವ್ಯಾಪಾರಿ, ಮನೆಯಲ್ಲಿ ಬೇರೆ ಯಾರೂ ಕೆಲಸಕ್ಕೆ ಹೋಗಲ್ಲ, ಈ ರೀತಿ ನಕಲಿ ಜಾತಿನಿಂದನೆ ಪ್ರಕರಣ ಹಾಕಿ ಹಣ ಮಾಡುತ್ತಿರುವ ನಯನಾ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪಾಪಣ್ಣ ಆತ್ಮಹತ್ಯೆಗೂ ಮುನ್ನ ವಿಡಿಯೋದಲ್ಲಿ ಮನವಿ ಮಾಡಿದ್ದಾರೆ. ಈ ಸಂಬಂಧ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಚ್.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಬೋರೇಗೌಡ ಅಭಿಮತ

ಗ್ರಾಮಾಭಿವೃದ್ಧಿಯಾದರೆ ದೇಶಾಭಿವೃದ್ಧಿ ಸಾಧ್ಯ

• **ಕೆಂಗೇರಿ:** ಹಳ್ಳಿಗಳು ಅಭಿವೃದ್ಧಿ ಹೊಂದಿದ್ದಲ್ಲಿ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಎಚ್. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಎಸ್.ಬೋರೇಗೌಡ ಹೇಳಿದರು.

ಬೆಂಗಳೂರು ದಕ್ಷಿಣ ತಾಲೂಕು ಎಚ್.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಆಯೋಜಿಸಿದ್ದ 2026-27ನೇ ಸಾಲಿನ ಮೊದಲ ಸುತ್ತಿನ ಗ್ರಾಮ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ನೀರಿನ ಬವಣೆ ನೀಗಿಸಲು ಕುಡಿಯುವ ನೀರು ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.



ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವ ಗ್ರಾಮೀಣ ಪ್ರದೇಶದ ಯುವಕರಿಗೆ ಅನುಕೂಲವಾಗಲೆಂದು ಐಎಎಸ್, ಕೆಎಎಸ್ ಹಾಗೂ ಐಪಿಎಸ್ ಪರೀಕ್ಷೆಗೆ ಅನುಕೂಲ ಆಗುವಂತೆ ಗ್ರಂಥಾಲಯಗಳಿಗೆ ಬೇಕಾಗುವ ಪುಸ್ತಕಗಳು ಒದಗಿಸಲಾಗುತ್ತಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು, ಬೀದಿದೀಪ, ರಸ್ತೆ, ಚರಂಡಿ, ಕಸ ವಿಲೇವಾರಿ ಮಾಡುವ ಮೂಲಕ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಗ್ರಾಮೀಣ ಪ್ರದೇಶದ 14 ವರ್ಷ ವಯಸ್ಸಿನ ಹೆಣ್ಣುಮಕ್ಕಳಿಗೆ ಗರ್ಭಕಂಠಕ್ಯಾನ್ಸರ್, ಎಚ್‌ಪಿವಿ ವ್ಯಾಕ್ಸಿನ್ ಹಾಗೂ ಪಲ್ಸ್ ಪೋಲಿಯೋ ಬಗ್ಗೆ ಪ್ರಾಥಮಿಕ ಸುರಕ್ಷೆ ಅಧಿಕಾರಿ ಅನಿತಾ ಅರಿವು ಮೂಡಿಸಿದರು.

ಎಚ್.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ರಾಧಿಕಾ ದೇವರಾಜ್, ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶಿವಕುಮಾರ್ ಗೌಡ, ಗ್ರಾ.ಪಂ. ಮಾಜಿ ಸದಸ್ಯರಾದ ರಾಜಪ್ಪ, ಕುಮಾರ್, ಉಮಾಶಂಕರ್, ಬೆಂಗಳೂರು ನಗರ ಜಿಲ್ಲೆ ಉಪ ಕಾರ್ಯದರ್ಶಿ ಡಾ.ಎನ್.ಸೋಮೇಶ್ ಕುಮಾರ್ ಸೇರಿದಂತೆ ಇತರರಿದ್ದರು.

ಇಡಿ ದಾಳಿ: 6 ಕೋಟಿ ರೂ. ಜಪ್ತಿ

• **ಬೆಂಗಳೂರು:** ಅಕ್ರಮ ಹಣ ವರ್ಗಾವಣೆ ಮಾಡಿದ ಆರೋಪದ ಹಿನ್ನೆಲೆಯಲ್ಲಿ ನಗರದಲ್ಲಿರುವ 9 ಖಾಸಗಿ ಕಂಪನಿಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿ, 6 ಕೋಟಿ ರೂ.ಜಪ್ತಿ ಮಾಡಿದ್ದಾರೆ.

ಟ್ರಾನ್ಸ್‌ಕ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಕರ್ಶ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್, ಮೊಕ್ಷಿತ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್, ಬೈಪಾಸ್ಕೆ ಇಂಟರ್‌ನೆಟ್ ಪ್ರೈವೇಟ್ ಲಿಮಿಟೆಡ್ ಹಾಗೂ ಅಭಿಭಾ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗಳಿಗೆ ಸೇರಿದ 6 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ.

ವರ್ಚುವಲ್ ಡಿಜಿಟಲ್ ಆಸ್ತಿಗಳ ಬಳಕೆಯ ಮೂಲಕ ಅನೇಕ ಸಂಸ್ಥೆಗಳು ಅನಧಿಕೃತವಾಗಿ ದೇಶದ ಗಡಿ ದಾಟಿ ಹಣ ವರ್ಗಾವಣೆ ಮಾಡಿರುವ ಆರೋಪಗಳ ಹಿನ್ನೆಲೆಯಲ್ಲಿ ಈ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಶೋಧ ಕಾರ್ಯಾಚರಣೆಯ ವೇಳೆ ಅನಧಿಕೃತ ಗಡಿದಾಟುವ ಹಣ ವರ್ಗಾವಣೆಗೆ ಬಳಸಲಾಗಿದೆ ಎಂದು ಶಂಕಿಸಲಾದ ಕೆಲವು ಸಂಸ್ಥೆಗಳ ಬ್ಯಾಂಕ್ ಖಾತೆಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ. ಈ ಸಂಸ್ಥೆಗಳಿಗೆ ಸೇರಿದ ಖಾತೆಗಳಲ್ಲಿರುವ ಒಟ್ಟು ಸುಮಾರು 6 ಕೋಟಿ ರೂ. ಜಪ್ತಿ ಮಾಡಲಾಗಿದ್ದು, ಬ್ಯಾಂಕ್ ಖಾತೆಗಳಲ್ಲಿನ ಹಣವನ್ನು ತನಿಖೆ ಪೂರ್ಣಗೊಳ್ಳುವವರೆಗೆ ವರ್ಗಾವಣೆ ಅಥವಾ ಬಳಕೆ ಮಾಡದಂತೆ ತಡೆಯಲಾಗಿದೆ.

ಅಂತಾರಾಷ್ಟ್ರೀಯ ಸಿಸ್ಟಮ್ಸ್ ಎಂಜಿನಿಯರಿಂಗ್ ಸಮ್ಮೇಳನ ಯಶಸ್ವಿ

• **ಬೆಂಗಳೂರು:** ಏರೋಸ್ಪೇಸ್, ರಕ್ಷಣಾ ಮತ್ತು ಡಿಜಿಟಲ್ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಉದಯೋನ್ಮುಖ ತಂತ್ರಜ್ಞಾನಗಳು ಹಾಗೂ ಸಿಸ್ಟಮ್ಸ್ ಆಧಾರಿತ ವಿಧಾನಗಳ ಕುರಿತು ಚರ್ಚಿಸಲು ಕ್ರೈಸ್ಟ್ ಯುನಿವರ್ಸಿಟಿಯ ಕೆಂಗೇರಿ ಕ್ಯಾಂಪಸ್‌ನಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ಸಿಸ್ಟಮ್ಸ್ ಎಂಜಿನಿಯರಿಂಗ್ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ಈ ಸಮ್ಮೇಳನದಲ್ಲಿ ದೇಶ-ವಿದೇಶಗಳ ವಿಜ್ಞಾನಿಗಳು, ಇಂಜಿನಿಯರ್‌ಗಳು, ಸಂಶೋಧಕರು ಹಾಗೂ ಕೈಗಾರಿಕಾ ತಜ್ಞರು ಭಾಗವಹಿಸಿದರು. ಸಮಾರೋಪ ಸಮಾರಂಭದಲ್ಲಿ ಇಸ್ರೋದ ಮಾಜಿ ಅಧ್ಯಕ್ಷ ಡಾ. ಕೆ. ಶಿವನ್ ಮಾತನಾಡಿ, ಸಂಕೀರ್ಣ ಎಂಜಿನಿಯರಿಂಗ್ ಸವಾಲುಗಳಿಗೆ ಅಂತರಶಿಸ್ತೀಯ ಸಹಕಾರ ಮತ್ತು ಪ್ರತಿಭೆಗಳ ಅಭಿವೃದ್ಧಿ ಅಗತ್ಯ ಎಂದು ಹೇಳಿದರು.



ಮಾನವ ಬಾಹ್ಯಾಕಾಶ ಯಾನ, ರಾಕೆಟ್ ಪ್ರೊಪಲ್ಷನ್, ಕೃತಕ ಬುದ್ಧಿಮತ್ತೆ ಆಧಾರಿತ ಸಿಸ್ಟಮ್ಸ್ ಎಂಜಿನಿಯರಿಂಗ್, ಡಿಜಿಟಲ್ ಟ್ವಿನ್ಸ್ ಹಾಗೂ ಯೋಜನಾ ನಿರ್ವಹಣೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಯಿತು. ಮುಂದಿನ ತಲೆಮಾರಿನ ತಂತ್ರಜ್ಞಾನ ಅಭಿವೃದ್ಧಿಗೆ ಶೈಕ್ಷಣಿಕ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಸರ್ಕಾರಿ ಸಂಸ್ಥೆಗಳ ನಡುವಿನ ಸಹಭಾಗಿತ್ವವನ್ನು ಬಲಪಡಿಸುವ ಅಗತ್ಯವನ್ನು ಸಮ್ಮೇಳನ ಒತ್ತಿ ಹೇಳಿತು.

ಈ ಸಮ್ಮೇಳನದಲ್ಲಿ ಇಸ್ರೋ, ಡಿಫೆನ್ಸ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಟೆಕ್ನಾಲಜಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಕೇರಳ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಶನ್, ಇಂಟರ್‌ನ್ಯಾಷನಲ್ ಕೌನ್ಸಿಲ್ ಆನ್ ಸಿಸ್ಟಮ್ಸ್ ಎಂಜಿನಿಯರಿಂಗ್ ಹಾಗೂ ಅಮೆರಿಕದ ಬಿಂಗ್ಹ್ಯಾಮ್ಟನ್ ವಿಶ್ವವಿದ್ಯಾಲಯದ ತಜ್ಞರು ಭಾಗವಹಿಸಿದ್ದರು.

ಮಾದರಿ ಕ್ಷೇತ್ರವಾಗಿಸಲು ಎಲ್ಲರ ಸಹಕಾರ ಅಗತ್ಯ: ಲಿಂಬಾವಳಿ

• **ಮಹದೇವಪುರ:** ಮುಂದಿನ ದಿನಗಳಲ್ಲಿ ಇನ್ನಷ್ಟು ಜನಪರ ಕಾರ್ಯಕ್ರಮಗಳ ಮೂಲಕ ಮಹದೇವಪುರ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸಲು ಎಲ್ಲರ ಸಹಕಾರ ಅಗತ್ಯ ಎಂದು ಶಾಸಕಿ ಮಂಜುಳಾ ಅರವಿಂದ್ ಲಿಂಬಾವಳಿ ಹೇಳಿದರು.

ಮೆಡಿಕವರ್ ಆಸ್ಪತ್ರೆಯ ಉಚಿತ ಆಂಬುಲೆನ್ಸ್ ಸೇವೆಗೆ ಚಾಲನೆ ನೀಡಿದ ಅವರು, ಮೆಡಿಕವರ್ ಆಸ್ಪತ್ರೆಯ ಈ ಸಾಮಾಜಿಕ ಕಳಕಳಿ ಮತ್ತು ಜನಪರ ಆರೋಗ್ಯ ಸೇವಾ ಉಪಕ್ರಮ ಶ್ಲಾಘನೀಯವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯಂತ ಸಂತೋಷದ ವಿಷಯ. ಮುಂದಿನ ದಿನಗಳಲ್ಲಿ ಇನ್ನಷ್ಟು ಜನಪರ ಕಾರ್ಯಕ್ರಮಗಳ ಮೂಲಕ ಮಹದೇವಪುರ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸಲು ಎಲ್ಲರ ಸಹಕಾರ ಅಗತ್ಯ ಎಂದು ತಿಳಿಸಿದರು.

ಮೆಡಿಕವರ್ ಆಸ್ಪತ್ರೆ ವೈಟ್‌ಫೀಲ್ಡ್ ಹಾಗೂ ಮಹದೇವಪುರ ವಿಧಾನಸಭಾ ಕ್ಷೇತ್ರದ ಕನ್ನಮಂಗಲ, ಸೀಗೆಹಳ್ಳಿ ವಾರ್ಡ್ ವಿವಿಧ ಅಪಾರ್ಟ್‌ಮೆಂಟ್ ಸಂಘಗಳ ನಡುವೆ ಆರೋಗ್ಯ ಸೇವೆಗಳನ್ನು ಜನಸಾಮಾನ್ಯರಿಗೆ ಮತ್ತಷ್ಟು ಹತ್ತಿರಕ್ಕೆ ತಲುಪಿಸುವ ಉದ್ದೇಶದಿಂದ ಈ ಒಪ್ಪಂದ ಮಾಡಲಾಗಿದೆ. ಆ ಮೂಲಕ ಕನ್ನಮಂಗಲ ವಾರ್ಡ್ ವ್ಯಾಪ್ತಿಯ ಸುಮಾರು 70ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳ ಸಾವಿರಾರು ನಿವಾಸಿಗಳಿಗೆ ಆರೋಗ್ಯ ಸೇವೆಗಳು ಲಭ್ಯವಾಗಲಿದ್ದು, ಪ್ರತಿಯೊಬ್ಬ ಕುಟುಂಬಕ್ಕೂ ಉಚಿತ ಫ್ಯಾಮಿಲಿ ಹೆಲ್ತ್ ಕಾರ್ಡ್, 24/7 ಉಚಿತ ಆಂಬ್ಯುಲೆನ್ಸ್ ಸೇವೆ, ನಿಯಮಿತ ಆರೋಗ್ಯ ತಪಾಸಣಾ ಶಿಬಿರಗಳು, ಆಸ್ಪತ್ರೆಯಲ್ಲಿ ಆದ್ಯತಾ ಚಿಕಿತ್ಸಾ ಸೌಲಭ್ಯ ಹಾಗೂ ವೈದ್ಯಕೀಯ ಸೇವೆಗಳಲ್ಲಿ ವಿಶೇಷ ರಿಯಾಯಿತಿಗಳನ್ನು ಒದಗಿಸಲಾಗುತ್ತದೆ ಎಂದರು.



ದರೋಡೆ ಪ್ರಕರಣ: ಇನ್‌ಸ್ಪೆಕ್ಟರ್ ಸೇರಿ ಮೂವರ ಬಂಧನ

• **ಬೆಂಗಳೂರು:** ಮಡಿವಾಳದಲ್ಲಿ ನಡೆದ ಕೇರಳ ಮೂಲಕ ಉದ್ಯಮಿಗಳಿಂದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧ ತನಿಖಾ ಇಲಾಖೆ(ಸಿಐಡಿ) ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಸೇರಿ ಮೂವರು ಆರೋಪಿಗಳನ್ನು ಬೆಂಗಳೂರು ನಗರ ಆಗ್ನೇಯ ಭಾಗದ ಮಡಿವಾಳ ಪೊಲೀಸರು ದಸ್ತಗಿರಿ ಮಾಡಿದ್ದಾರೆ.

ವ್ಯಾಪಾರ ಉದ್ದೇಶಗಳಿಗಾಗಿ ಹಣವನ್ನು ತಂದಿದ್ದ ಕೇರಳದ ಉದ್ಯಮಿಗಳು ಮಡಿವಾಳದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಈ ಬಗ್ಗೆ ನಿಖರ ಮಾಹಿತಿ ಪಡೆದಿದ್ದ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಅವರು, ಕುಪೇಂದ್ರರೆಡ್ಡಿ, ವಸಂತ್‌ಕುಮಾರ್ ಎಂಬುವವರ ಜೊತೆಗೂಡಿ ದರೋಡೆಗೆ ಯೋಜನೆ ರೂಪಿಸಿದ್ದರು. ಯೋಜನೆಯಂತೆ ಹೋಟೆಲ್ ಕೋಣೆಗೆ ನುಗ್ಗಿದ ಆರೋಪಿಗಳು ತಾವು ಪೊಲೀಸರೆಂದು ಇನ್‌ಸ್ಪೆಕ್ಟರ್ ಅವರ ಅಧಿಕೃತ ಗುರುತಿನ ಚೀಟಿ ತೋರಿಸಿ, ಉದ್ಯಮಿಗಳನ್ನು ಬೆದರಿಸಿ, ಅವರಿಂದ 20 ಲಕ್ಷ ರೂ. ನಗದನ್ನು ಕಸಿದುಕೊಂಡಿದ್ದರು. ಹಣ ಕಳೆದುಕೊಂಡ ಯುವಕರು ಜೂ.19ರಂದು ಬೆಳಗಿನ ಜಾವ ಮಡಿವಾಳ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಾದ ಕೆಲವು ಗಂಟೆಗಳಲ್ಲೇ ಪೊಲೀಸರು ಕುಪೇಂದ್ರರೆಡ್ಡಿ ಅವರನ್ನು ಬಂಧಿಸಿದ್ದರು. ವಿಷಯ ತಿಳಿದ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಪರಾರಿಯಾಗಿದ್ದರು. ಆದರೆ ನಿಖರ ಮಾಹಿತಿಯನ್ನು ಆಧರಿಸಿ ಪೊಲೀಸರು ಆರೋಪಿಗಳಾದ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಮತ್ತು ವಸಂತ್‌ಕುಮಾರ್ ಅವರನ್ನು ಶುಕ್ರವಾರ ತಡರಾತ್ರಿ ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.


ಅಧಿಕಾರಿಗಳಿಗೆ ಜಿಬಿಎ ಮುಖ್ಯ ಆಯುಕ್ತ ಸೂಚನೆ

ಕೆರೆ ನೀರು ಗುಣಮಟ್ಟ ಸುಧಾರಣೆಗೆ ಕ್ರಮ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ವ್ಯಾಪ್ತಿಯಲ್ಲಿ ಕ್ಲಾಸ್ 'ಇ' ವರ್ಗಕ್ಕೆ ಸೇರಿದ 32 ಕೆರೆಗಳ ನೀರಿನ ಗುಣಮಟ್ಟವನ್ನು ಸುಧಾರಿಸಲು ಕ್ರಮ ಕೈಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯ ಕೆ-100 ರಾಜಕಾಲುವೆ, ಕ್ಲಾಸ್ 'ಇ' ವರ್ಗಕ್ಕೆ ಸೇರಿರುವ ಕೆರೆಗಳು ಹಾಗೂ ರಸ್ತೆ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸಭೆ ನಡೆಸಿದ ಅವರು, ನಗರದಲ್ಲಿ ಪಾಲಿಕೆ ಒಡೆತನದ 182 ಕೆರೆಗಳಿದ್ದು, ಅವುಗಳಲ್ಲಿ 32 ಕೆರೆಗಳ ನೀರಿನ ಗುಣಮಟ್ಟವು ಕ್ಲಾಸ್ 'ಇ' ವರ್ಗಕ್ಕೆ ಸೇರಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಏಪ್ರಿಲ್-2026ರಲ್ಲಿ ನೀಡಿರುವ ವರದಿಯಲ್ಲಿ ಉಲ್ಲೇಖಿಸಿದೆ. ಈ ಸಂಬಂಧ ಆಯಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಕ್ಲಾಸ್ 'ಇ' ವರ್ಗದ ಕೆರೆಗಳನ್ನು ಪರಿಶೀಲಿಸಿ, ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಕೇಂದ್ರ ನಗರ ಪಾಲಿಕೆಯಲ್ಲಿ 1, ಉತ್ತರ ನಗರ ಪಾಲಿಕೆಯಲ್ಲಿ 8, ದಕ್ಷಿಣ ನಗರ ಪಾಲಿಕೆಯಲ್ಲಿ 7 , ಪೂರ್ವ ನಗರ ಪಾಲಿಕೆಯಲ್ಲಿ 12 ಹಾಗೂ ಪಶ್ಚಿಮ ನಗರ ಪಾಲಿಕೆಯಲ್ಲಿ 4 ಕೆರೆಗಳು ಸೇರಿದಂತೆ ಒಟ್ಟು 32 ಕೆರೆಗಳು ಕ್ಲಾಸ್ 'ಇ' ವರ್ಗದಲ್ಲಿವೆ. ಈ ಸಂಬಂಧ ಪಾಲಿಕೆ ಹಾಗೂ ಜಲಮಂಡಳಿ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದು ವರದಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದರು.



ರಾಜಕಾಲುವೆ ಮೇಲಿರುವ ಕಟ್ಟಡ ತೆರವುಗೊಳಿಸಿ

ಕೆ-100 ಮಾರ್ಗದ ಜೆಸಿ ರಸ್ತೆ ಸಮೀಪದ ರಾಜಕಾಲುವೆ ಮೇಲಿರುವ ಎರಡು ಕಟ್ಟಡಗಳನ್ನು ತೆರವುಗೊಳಿಸಬೇಕು. ಈ ಸಂಬಂಧ ಕೇಂದ್ರ ನಗರ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡಗಳನ್ನು ನೆಲಸಮಗೊಳಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಮಹೇಶ್ವರ್ ರಾವ್ ತಿಳಿಸಿದರು.

ಇಂದು ನಗರದಲ್ಲಿ...

- ದಿ ರಾಮಕೃಷ್ಣಾಶ್ರಮ ಯೋಗ ಸೆಂಟರ್ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ : ಉದಯಭಾನು ಕಲಾಸಂಘ, ಬೆಳಗ್ಗೆ 6.15
- ರಾಮಕೃಷ್ಣಾಶ್ರಮ ಯೋಗ ವಿದ್ಯಾ ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ : ಚಂದ್ರಗುಪ್ತ ಮೌರ್ಯ ಆಟದ ಮೈದಾನ, ಜಯನಗರ, ಬೆಳಗ್ಗೆ 6.15
- ಸರ್ ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವತಿಯಿಂದ 100 ಕಲಾವಿದರ ಕೋಲಾಟ ವಾದನದೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ : ಸರ್. ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಗ್ಗೆ 6.30

CHANGE IN NAME

I, **KIRAN KULKARNI** (Old Name) S/o.Prabhakar,R/o.42/1,SFHS Nandini Layout, Bengaluru-560 096. have changed my name from **KIRAN KULKARNI** to **KIRAN P KULKARNI** (New Name) as per Aadhar Card,vide Affidavit sworn before Smt.C.K.Anupama, Notary Government Of India, Bengaluru on 19th June 2026.

[illegible]

ಸಾರ್ವಜನಿಕ ಪ್ರಕಟಣೆ

[illegible]

ಶೆಡ್ಯೂಲ್ ಸ್ವತ್ತಿನ ವಿವರ

SCHEDULE

Landed properties situated at Kanasandra Village, Malur Hobli, Channapatna Taluk as follows:

1. Landed property bearing Sy.No. 121 measuring 3.00 acre, assessed as Rs.5-67 paisa bounded on East by Garden Land of Kaveramma, West by Land of Chirman Narasimhegowda, North by - Bevur Road, South by - Land of Gundaiah.
2. Landed property bearing Sy.No.209/5 measuring 0.26.00 assessed as Rs.1.00 paisa bounded on: East by Hebbahalla and Road, West by Land of C.K.Kariyappa, North by Land of Darathi Naganna, South by - Land of C.K. Kariyappa.
3. The landed property bearing Sy.No.58/2 measuring 0.15.00 gutnas assessed as Rs. 0.70 paisa bounded on East by Garden- land of patel Rajanna West by- Kivudamuddana Ramanna and Shivalingaiah, North by C.K.Kariyappa, South by Urveyor Girigowda.
4. The landed property bearing Sy. No. 146/2 measuring 0.37.00 guntas as Rs.1.85 paisa bounded on: East by - Land of Chikkegowa, West by - Land of Kadalahna Manchaiah, North by-C.K.Kariyappa, South by - Master Rangaiah.
5. Landed property bearing Sy.No.No:145/3 measuring 0.08.00 guntas, assesed as Rs.0.40 paisa bounded on: Esat by- Land of Chikkegowda West by: Land of Kadalahana Manchaiah, North by C.K.Kariyappa's land South by- Master Rangah's land.
6. The landed property bearing Sy.No 86/7-p2 measuring 0.01.08.00 guntas,assessed as Rs.0.12paisa.
7. The landed property bearing Sy.No 86/7 measuring0.00.08 guntas assessed as Rs.0.12 paisa. Both properties are commonly bounded on: Esat by-Road, West by: Land of Sudhakara North by-Basavaiah,South by-House of Sudhakara.
8. Site property bearing Belur Grama Panchayath Katha No.53, and property No.72 measuring 60X40 feet bounded on: East by B.N.Manjula and G.Geetha, West by - Chikkahydegowda, North by - Government Primary School, South by - Road.
9. Site property bearing Belur Grama Panchayath katha No.53/1 property No. 135/1 measuring 30X40 bounded on: East by Road, West by Shobha, North by - B.N.Manjula, South by - Road.
10. Site property bearing Belur Grama Panchayath katha No.53/2 property No.135/2 measuring 30X40 bounded on: East by - Road, West by - Shobha, North by - Govt. Primary School, South by - G.Geetha.
11. House property situated at Ward No. 14. Shankar Nagar. 5th Cross.Mandya City bearing Municipal katha No. 14-1-542-369, old Katha No.KT-311/12 Assessment katha No.D4/3020/KT-311/12 measuring 12.192024 X 18.288017 meters consisting R.C.C. House bounded on: East by House of Nanjundaswamy, West by - House of Mohankumar, North by House of Mudlagiriyappa and G.puttaswamy, South by -Road.

BY ORDER OF THE COURT
Chief Administrative Officer, District & Sessions Court, Mandya.

IN THE COURT OF THE PRINCIPAL SENIOR CIVIL JUDGE & JMFC AT ANEKAL
O.S. No. 1373/2024

BETWEEN: Smt. Rathnamma @ Nagarathna... Plaintiff
AND: Sri. Krishnappa & others... Defendants

NOTICE TO DEFENDANT NO.4

[illegible] ... Hence, this Hon'ble court was pleased to fix the date of your appearance on **15/10/2026** at **11.00 AM** in person or through the pleader failing which the above said case will be heard and disposed of in your absence.

Given under my hand and the seal of the court on this 13/06/2026.

By order of the Court, Chief Ministerial Officer, Senior Civil Judge & JMFC Court, Anekal

Advocate for Plaintiff: **LAW CHAMBERS**
M. SUBRAMANYA
Near Grama Jyothi, Vijaya Kumar Layout, Attibele Road, Anekal Town & Taluk, Bangalore District

---

[illegible]

By Order of the Court
SD- SENIOR SHERISTEDAR
XV ADDL. CHIEF JUDICIAL MAGISTRATE COURT, BENGALURU CITY

IN THE COURT XXIV ADDL. CITY CIVIL & SESSIONS JUDGE AT BANGALORE CITY (CCCH-6)
O.S. 944/2015

BETWEEN: 1. K. ANANDA, S/o late S Krishnappa, **2. SMT. K. VISHALAKSHAMMA,** D/o late S.Krishnappa, Both residents of No.55/B, 2nd B Main, Bapujinagar, Mysore Road, Bangalore-560 026. ... **PLAINTIFFS**

AND: HONNASIDDAIAH ANOTHER. ... **DEFENDANTS.**

SUIT SUMMONS TO THE DEFENDANT NO.2 UNDER ORDER 5 RULE 20 (1-A) OF THE CODE OF CIVIL PROCEDURE

DEFENDANT No.2: D. RAJU, S/o Daniel, No.14, 4th Cross, 11th Main, Hongasandra Silk Board Colony, Hongasandra, Bommanahalli, Bangalore South Taluk.

WHEREAS the above suit is filed by the plaintiffs against the defendants Declaration and Injunction, relating to the Schedule property hereunder, you the defendant No.2 are summoned to appear before this Court on **20-07-2026** to answer the claim of the plaintiffs either personally or through a pleader duly appointed in this behalf, to answer the claim of the plaintiffs, failing which the suit will be decided in your absence.

SCHEDULE

House property bearing Assessment No.44/4, property No.44/4A, Dubasipalya, Valagerehalli village, Kengeri Hobli, Bangalore South Taluk, measuring East to West: 35 feet and North to South: 45 feet and bounded on the: EAST BY: REMAINING PROPERTY OF NO.44/4A, WEST BY: REMAINING PROPERTY OF NO.44/4A, NORTH BY: PRIVATE PROPERTY, SOUTH BY: ROAD AND PROPERTY NO.44/4.

Given under my hand and the seal of this court on 17-06-2026.

By order of the court, Senior Sheristedar, City Civil Court, Bangalore.

T.N. ARAKESWARA, Advocate
#232, Kadri Nivas, 68th Cross, 5th block, Rajajinagar, Bangalore-560010.

IN THE COURT OF III ADDL. CIVIL JUDGE AND JMFC AT ANEKAL
Cmisc No. 959/2026

BETWEEN: Sri. Jayaram, S/o late Muniswamy Rao @ Jaganath Rao, aged about 59 years, R/at: Shivanahalli Village, Jigani Hobli, Anekal Taluk, Bengaluru Dist.... **PETITIONER**
AND: Thahasildar, Anekal... **RESPONDENT**

PUBLIC NOTICE

Whereas the petitioner has filed above petition for the relief of issue of death certificate of petitioner Father namely Muniswamy Rao @ Jaganath Rao, S/o Venkata Rao who was died on 09-09-1989 at Shivanahalli Village, Jigani Hobli, Anekal Taluk, Bengaluru Dist. the Petitioner has filed c misc No. 959/2026 before the Hon'ble III ADDL. CIVIL Judge and JMFC at Anekal. If any person having any objections in respect of the death of petitioner Father may file their objections before this court in person of by pleader on dt: **30/07/2026** at **11:00 A.M** to answer the same, failing which the petition will be disposed of ex party.

Given under my hand and seal of the court on this 20/06/2026

By order of the Court, Sheristadar, Prl. Civil Judge Dn Division & J.M.F.C Court, Anekal

VINAY .K, Advocate
Office at: STB Complex, Near Court, Anekal Town, Bengaluru Dist.

IN THE COURT OF III ADDL. CIVIL JUDGE AND JMFC AT ANEKAL
Cmisc No. 958/2026

BETWEEN: Sri. Jayaram, S/o late Muniswamy Rao @ Jaganath Rao, aged about 59 years, R/at: Shivanahalli Village, Jigani Hobli, Anekal Taluk, Bengaluru Dist. ... **PETITIONER**
AND: Thahasildar, Anekal ... **RESPONDENT**

PUBLIC NOTICE

Whereas the petitioner has filed above petition for the relief of issue of death certificate of petitioner Grand Father namely Shejirao @ Shivaji Rao S/o late Tukojirao who was died on 08-10-1983 at Shivanahalli Village, Jigani Hobli, Anekal Taluk, Bengaluru Dist. the Petitioner has filed c misc No. 958/2026 before the Hon'ble III ADDL. CIVIL Judge and JMFC at Anekal. If any person having any objections in respect of the death of petitioner Grand Father may file their objections before this court in person of by pleader on dt: **30/07/2026** at **11:00 A.M** to answer the same, failing which the petition will be disposed of ex-party.

Given under my hand and seal of the court on this 20/06/2026

By order of the Court, Sheristadar, Prl. Civil Judge Dn Division & J.M.F.C Court, Anekal

VINAY .K, Advocate
Office at: STB Complex, Near Court, Anekal Town, Bengaluru Dist.

ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ...

ಪ್ರಕರಣ ಸಂಖ್ಯೆ: ಅಸಲು ದಾವೆ 010/2024

[illegible]

ಸಾರ್ವಜನಿಕ ಪ್ರಕಟಣೆ

[illegible]

ಮಾನ್ಯ ಪ್ರಧಾನ ನ್ಯಾಯಾಲಯ, ಮೈಸೂರು

ಅರ್.ಪಿ. ಸಂಖ್ಯೆ : 42/2026

[illegible]

ಸಾರ್ವಜನಿಕ ಪ್ರಕಟಣೆ

[illegible] 30-06-2026 [illegible]

ಶೆಡ್ಯೂಲ್ ಸ್ವತ್ತಿನ ವಿವರ

[illegible] 520/2023 [illegible]

ಅರ್ಜಿದಾರರ ಪರ ವಕೀಲರು : [illegible] ನಂ. 1563/1ಎ, ... ಮೈಸೂರು

ವಾಸ್ತು, ಹೂವು ಮತ್ತು ತರಕಾರಿ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ...

ಸಂಖ್ಯೆ: [illegible]/299/2026-27

ದಿನಾಂಕ: 20-06-2026

ಸಾರ್ವಜನಿಕ ಪ್ರಕಟಣೆ

[illegible]

ಸಹಿ/- ಕಾರ್ಯದರ್ಶಿ

IN THE COURT OF THE PRINCIPAL CIVIL JUDGE & JMFC AT ANEKAL
Crl. Mis.No. 989/2026

BETWEEN: Sri. N. Prakash, S/o late Narayanappa K, aged about 47 years, R/at No.F-714, Near Ganesha Temple, Thimmagondanahalli Village, Neraluru Post, Anekal Taluk, Bengaluru-562107. ... **PETITIONER**

AND: The Tahasildhar, Registrar of Births & Death, Anekal Taluk, Bangalore. ... **RESPONDENT**

NOTICE

Whereas, the petitioner has filed the above petition U/s. 13(3) of the birth and death acts seeking direction to The Tahasildhar, Anekal Taluk, Bangalore, to register the death of the deceased grandfather of petitioner named Sri.Kenchappa S/o. Angappa, died on 14/02/1982 at Thimmagondanahalli Village, Neraluru Post, Anekal Taluk, Bengaluru-562107.

If any person interested in the matter may appear before Hon'ble Principal civil judge & JMFC at Anekal, either personally or through an Advocate duly instructed at **11:00 A.M.** on **01/08/2026** to which date the case is posted for hearing.

Given under my hand and the seal of the court on this 20/06/2026

By order of the Court, Sheristadar, Prl. Civil Judge Dn. Division & J.M.F.C Court, Anekal

SUJAY .B, Advocate
LAW GALAXY
Gulla Reddy Building, Chandapura, Anekal Main Road, Bangalore-562107. Mob No 9964487721
Email: sujayr2020@gmail.com

ಮಾನ್ಯ 3 ನೇ ಅಪರ ಹಿರಿಯ ಸಿವಿಲ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ...

ಸಿವಿಲ್ ... ನಂ. 1014/2026

[illegible]

ನ್ಯಾಯಾಲಯದ ಆದೇಶದ ಮೇರೆಗೆ

[illegible]

ಸಿವಿಲ್ ... 22 ರಂದು ...

... 60/2019 ... 8099/2022

[illegible]

ಸಿ.ಮಿಸ್.ನಂ. 4688/2026

[illegible]

IN THE COURT OF III ADDL. CIVIL JUDGE AND JMFC AT ANEKAL
Cmisc No. 957/2026

BETWEEN: Sri. Jayaram, S/o late Muniswamy Rao @ Jaganath Rao, aged about 59 years, R/at: Shivanahalli Village, Jigani Hobli, Anekal Taluk, Bengaluru Dist. ... **PETITIONER**
AND: Thahasildar, Anekal ... **RESPONDENT**

PUBLIC NOTICE

Whereas the petitioner has filed above petition for the relief of issue of death certificate of 1st petitioner Mother namely Reuu Bai W/o Muniswamy Rao @ Jaganath Rao D/o late Shivaji Rao who was died on 06-07-1997 at Shivanahalli Village, Jigani Hobli, Anekal Taluk, Bengaluru Dist. the Petitioner has filed c misc No. 957/2026 before the Hon'ble III ADDL. CIVIL Judge and JMFC at Anekal. If any person having any objections in respect of the death of petitioner Mother may file their objections before this court in person of by pleader on dt: **30/07/2026** at **11:00 A.M** to answer the same, failing which the petition will be disposed of ex-party.

Given under my hand and seal of the court on this 20/06/2026

By order of the Court, Sheristadar, Prl. Civil Judge Dn Division & J.M.F.C Court, Anekal

VINAY .K, Advocate
Office at: STB Complex, Near Court, Anekal Town, Bengaluru Dist.

BEFORE THE MOTOR ACCIDENT CLAIMS TRIBUNAL AT BANGALORE
MVC. No.1426/2026

BETWEEN: Babli Devi and other ... **PETITIONERS**
-V/s-
AND: Bajaj Allianz General Insurance Co Ltd and another ... **RESPONDENTS**

NOTICE TO RESPONDENT No.2

To **Prasanna,** S/o. Late Venkatappa, aged about 42 years, Rajanakunte Village and Post, Yelahanka, Bangalore-560064. (RC owner of motor cycle bearing No.KA 50 K-1318)

Whereas the petitioners has presented the above claim petition before the Hon'ble Tribunal u/s 166 of the M.V Act seeking compensation for injury case of Rs.40,00,000/- (Rupees Forty lakhs only) against the Respondents on account of the Injury Caused in a motor vehicle accident which occurred on 25/01/2026 at about 08.20 PM on Doddaballapura-Bangalore road, near KEB compound, Chamundeshwari road, Doddaballapura Town, Bangalore District, Involving your Vehicle Motor Cycle bearing registration No.KA 50 K 1318.

You are hereby summoned to appear before this Tribunal in person or by an Advocate duly instructed and able to answer all material questions relating to the claim at **11:00 A.M.** on the forenoon of **23/07/2026** to answer the claim.

Take notice that in default of your appearance on the said date and time, the petitioner will be heard and determined in your absence.

Given under by hand and seal of court on this 17/06/2026

By order of the Court, Assistant Registrar, Court of Small Causes, Bangalore

Advocate for petitioner: **SRI. V. SOMASHEKAR**
No.1/A, Classmate Enclave, Vidyanagar Cross, Bettahalasur Post, Bengaluru-562157

IN THE COURT OF THE SENIOR CIVIL JUDGE AT MAGADI
O.S. No. 143/2015

PLAINTIFF: Smt.Giriyamma -V/s-
DEFENDANTS: Smt. Chikkamma and others

NOTICE/SUMMONS TO THE DEFENDANT No.2(a) (i) TO (iii)

2(a)(i). Smt. Sunanda, W/o late G.K. Maruthi, aged about 49 years, **2(a)(ii). Nanditha B.N,** D/o late G.K. Maruthi, aged about 25 years, **2(a)(iii). Naveen Kumar B.M,** aged about 23 years, All are R/at No. 75, Rangabhoomi Mandira Layout, 5th Cross, Sagahalli Gate, Bangalore-560091

Where the above named plaintiff has filed the suit for the relief of Partition and other relief against you and others defendants over the suit schedule property and in spite of all kinds of steps taken against you for service of notice, you are avoids to receive the same and returned as un-served.

Now the above matter has been posted on **01/08/2026** at **11:00 A.M** to take notice/summons and to appear before the Hon'ble Prl. Senior Division court at Magadi on the said dated and time either personally or through counsel and defend the case. If you fail to appear before the court on said date, the case will be decided exparte.

SCHEDULE

1. The land bearing Sy.No.29/1, measuring to an extent of 6 acres 25 guntas and land bearing Sy No.29/2, measuring to an extent of 5 acres 30 guntas: **East by:** land of Venkatappa, Krishnappa, Maruthi's, **West by:** Govt. Road, Thorehalla and others land, **North by:** Land of Ramanna, Maregowda and Thorehalla, **South by:** Govt. Road.
2. The land bearing Sy.No.36/3, measuring to an extent of 1 acres 17 guntas and land bearing Sy No.36/1, measuring to an extent of 1 acres 18 guntas and land bearing Sy.No.36/2, measuring to an extent of 1 acres 10 guntas: **East by:** Thorehalla, **West by:** Road, **North by:** Land of Rangaswamy's, Chaluvaiah's and Govt. Road, **South by:** Thorehalla.
3. The land bearing Sy.No.38 measuring to an extent of 8 acres 15 guntas: **East by:** Thorehalla, **West by:** Land of Narasimhaiah and Krishnappa, **North by:** Land of Narasimhaiah, Chaluvaiah's, **South by:** Govt. Road and Land of Narasimhaiah. Item No. 1 to 3 are situated at Mallasandra village, Thippasandra hobli, Magadi Taluk, Bangalore South District.
4. The land bearing Sy.No.98/2, measuring to an extent of 14 guntas and land bearing Sy.No.96/3, measuring to an extent of 14 guntas and land bearing Sy.No.96/5, measuring to an extent of 20 guntas. **East by:** land of Chikkarangaiah, Papaiah and Govindaiah, **West by:** land of Ganganna, Shivaram and Hosathimmaiah, **North by:** Land of Govindaiah, **South by:** Kere En
5. The land bearing Sy.No.95/1A, measuring to an extent of 22 guntas and land bearing Sy No.97/1, measuring to an extent of 15 guntas and land bearing Sy.No.97/1A, measuring to an extent of 1 acres 14 guntas: **East by:** land of Hanumaiah, Govindaiah, Holerangaiah, Chandrashekaraiah and Puttalakshmamma's, **West by:** land of Boraiah, Boranna, Ganganna, **North by:** Thorehalla, **South by:** Sarkari Bande.
6. The land bearing Sy.No.98/1, measuring to an extent of 15 guntas: **East by:** Sarkari Bande, **West by:** land of Annaiah, **North by:** land of Boraiah, **South by:** land of Bettaswamy.
Item No. 4 to 6 are situated at Janigere village, Thippasandra hobli, Magadi Taluk, Bangalore South District.
7. The land bearing Sy.No.19/2, measuring to an extent of 2 acres 08 guntas. **East by:** Govt. Road, **West by:** land of Bhagyamma, **North by:** land of Munirappa, **South by:** land of Kalyanamma.
8. The land bearing Sy.No.35, measuring to an extent of 7 acres 11guntas: **East by:** land of Chikkamma Murthy, **West by:** Govt. Road, land of Jigraiah and Hanumanthaiah, **North by:** Govt. Road, land of Narasimhaiah, **South by:** land of Ajjrappa
Item No. 7 and 8 are situated at Shivanasandra village, Thippasandra hobli, Magadi Taluk, Bangalore South District.

Issued as per the orders of the Hon'ble court on this 16/06/2026 with seal of this Hon'ble court.

By order of the Court, Sheristadar, Senior Civil Judge & J.M.F.C Court, Magadi

SRI. CHETAN .M, Advocate
Magadi Main Road, Magadi Town, Bengaluru South District-562120

IN THE COURT OF THE HON'BLE 1st ADDITIONAL CIVIL JUDGE AND J.M.F.C. AT MAGADI
C. Mis. No. 134/2026

PETITIONER: [illegible]

RESPONDENTS: 1. The Registrar of Birth and Death, [illegible]

NOTICE

[illegible] ... on **22-07-2026** at 11:00 AM before the Hon'ble 1st Additional Civil Judge Junior Division and JMFC at Magadi. [illegible]

Given under my hand and the seal of court on 18-06-2026

By order of the court, Sheristadar, Civil Judge & JMFC Court, Magadi

Sri. M.S. SIDDALINGAPPA, Advocate
[illegible], Magadi Town, Bangalore South District

IN THE COURT OF THE I ADDL. CITY CIVIL AND SESSIONS JUDGE, AT BANGALORE CITY (CCCH-2)
O.S. 7661/2016

BETWEEN: SRI. K. ANANDA, aged about 52 years, S/o Late S. Krishnappa, No.44/8, Dubasipalya, Valagerehalli, Kengeri Hobli, Bangalore South Taluk, Bangalore-560 059. ... **PLAINTIFF**

AND: SMT. SHANTHA & OTHERS ... **DEFENDANTS**

SUIT SUMMONS ISSUED TO THE DEFENDANTS NO.6 & 7 UNDER ORDER 5 RULE 20 (1-A) OF THE CODE OF CIVIL PROCEDURE.

DEFENDANT No.6: ALLAH BAKSH .S, S/o Fakruddin Sab, No.11-C, Kote-C street, Kote Badavane, Kalasipalyam, Bangalore-560 002.

DEFENDANT No. 17: SMT. C. MUTHAMMA, W/o Muniyellappa, No.89, Yamalur, Bangalore-560 039.

WHEREAS the plaintiff has filed the above suit against the defendants for declaration, permanent injunction, possession and mandatory injunction relating to the property mentioned in the schedule hereunder on the file of this Court and the above suit is posted to **13/07/2026** and you the defendants Nos.6 and 7 are warned to appear before this court on the said date **11:00 A.M** in the forenoon to answer the claims of the plaintiff, either personally or through a pleader duly appointed in this behalf to answer the claims of the plaintiff, with all documents in support of your defence if any in the said behalf, failing which the suit will be heard and decided in your absence.

A-SCHEDULE

Central portion of the Immovable property bearing assessment No.44/8, situated at Valagerehalli Village, Dubasipalya, Kengeri Hobli, Bangalore South Taluk, measuring East to West:35 feet and North to South: 80 feet and bounded on the: East by: REMAINING PROPERTY OF No.44/8, West by: REMAINING PROPERTY OF No.44/8, North by : PASSAGE LEFT FOR APPROACH IN No.44/8, South by : PASSAGE LEFT FOR APPROACH IN No.44/8.

B-SCHEDULE

Portion of the Immovable property bearing assessment No.44/8, situated at Valagerehalli Village, Dubasipalya, Kengeri Hobli, Bangalore South Taluk, measuring East to West:33 feet and North to South: 30 feet and bounded on the: East by : REMAINING PROPERTY OF No.44/8, West by: REMAINING PROPERTY OF No.44/8, North by: PASSAGE LEFT FOR APPROACH IN No.44/8, South by: ROAD.

Given under my hand and the seal of the Court on this 19/06/2026

By order of the Court, Senior Sheristadar, City Civil Court, Bengaluru

T.N. ARAKESWARA, Advocate
#232, Kadri Nivas, 68th Cross, 5th block, Rajajinagar, Bangalore-560010.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕರನೀಸ ಮತ್ತು ಒ.ಚ.ಮಂಡಳಿ,
ವಿಭಾಗ ಕಛೇರಿ, ಧಾರವಾಡ, ಜಲಮಂಡಳಿ ಆವರಣ, ಸರ್.ಎಂ.ವಿಶ್ವೇಶ್ವರಯ್ಯ ರಸ್ತೆ,
ಧಾರವಾಡ-580 001 ದೂರವಾಣಿ : 0836-2213836 ಇ-ಮೇಲ್: eedwdm@gmail.com

ದರ ವಿಚಾರಣೆ ಅಧಿಸೂಚನೆ

[illegible] ದರ ವಿಚಾರಣೆ ಅಧಿಸೂಚನೆ ಸಂಖ್ಯೆ: 365 ದಿನಾಂಕ : 19/06/2026 ರಂತೆ **Sealed quotations** ಗಳನ್ನು ಕರೆಯಲಾಗಿದೆ.

Sl No	Description	Qnty	Unit	Rate in Rs.	Rate in Words
1	Rate enquiry for mango hapus, Nati is invited by this office. Location: Kanavihonnapur village, Dhumwad village and Neersagar Dam premises. The minimum rates stated by the Department of agricultural marketing and Karnataka State agricultural marketing Board Dharwad are as below				
1.1	Mango hapus	Quintal	1		
1.2	Mango Nati	Quintal	1		

Sl no	Product	Minimum Rs/ Quintal	Maximum RS/ Quintal	Modal price Rs / Quintal
1	Hapus Mango	14000	16000	15000
2	Mango Nati	5000	8000	6000

Participants advised to visit the site before quoting the rates and also advised to quote the rate in accordance with the rates of Karnataka State agricultural marketing Board Dharwad

(1) The rates quoted shall be inclusive of all taxes except GST. (2) The sealed envelopes containing quoted rates shall reach to this office on or before **25/06/2026** up to 5.30 PM. (3) Right to accept any quotation and to reject any or all the quotations rests with the Competent Authority

ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಕರನೀಸ ಮತ್ತು ಒಚ ಮಂಡಳಿ, ಧಾರವಾಡ ಕಛೇರಿಯನ್ನು ಸಂಪರ್ಕಿಸಬಹುದು.
[illegible]/335/[illegible]/2026-27 ಸಹಿ/- ಕಾರ್ಯಪಾಲಕ ಅಭಿಯಂತರರು, ಕರನೀಸ ಮತ್ತು ಒಳಚರಂಡಿ ವಿಭಾಗ, ಧಾರವಾಡ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ:[illegible]: 14/2026-27 ದಿನಾಂಕ: 18.06.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

[illegible] 1999 ರ [illegible] ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ [illegible] ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಪರಿಶಿಷ್ಟ ಜಾತಿ (SC) [illegible]: INDENT 59488 & 59456
2) ಪರಿಶಿಷ್ಟ ಪಂಗಡ (ST) [illegible]: INDENT 59713
3) ಪ್ರವರ್ಗ - I [illegible]: INDENT 58900
4) ಪ್ರವರ್ಗ - II (A) [illegible]: INDENT 58911, 58916 & 57347/CALL-2
5) [illegible] : INDENT 59027,59195,59447,58498, 59426, 59678 & 59688
6) ಕೆಪಿಪಿ ಪೋರ್ಟಲ್ ಮುಖಾಂತರ ಇಂಡೆಂಟ್ ಸಂಖ್ಯೆ : 59488,59207, 59195, 58900, 59447, 58916, 59456, 58498, 59426, 59713, 59678, 59688 & 57347/CALL-2, [illegible] ದಿನಾಂಕ: 03.07.2026 (ಸಂಜೆ: 4.00 ಗಂಟೆಗೆ) [illegible] ದಿನಾಂಕ:04.07.2026 (ಸಂಜೆ: 04.30 ಗಂಟೆಗೆ). ಇಂಡೆಂಟ್ ಸಂಖ್ಯೆ: 59488 &57347/CALL-2 [illegible] ದಿನಾಂಕ: 06.07.2026 (ಮಧ್ಯಾಹ್ನ: 12.00 ಗಂಟೆಗೆ).
7) ಕೆಪಿಪಿ ಪೋರ್ಟಲ್ ಮುಖಾಂತರ ಇಂಡೆಂಟ್ ಸಂಖ್ಯೆ :58911 [illegible] ದಿನಾಂಕ:25.06.2026 (ಸಂಜೆ: 4.00 ಗಂಟೆಗೆ) [illegible] ದಿನಾಂಕ:29.06.2026 (ಅಪರಾಹ್ನ: 04.30 ಗಂಟೆಗೆ).
8) [illegible]: 2026-27 ನೇ [illegible]

[illegible]

ಮ.ಶಿ.ಕಾ.ಪ್ರ./[illegible]/92.06/ ಟೆಂಡರ್/2026-27

ಸಹಿ/- ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯಡಿಯೂರು ವಿಭಾಗ,
4ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್, ಬೆಂಗಳೂರು - 560 070.
ಇ-ಮೇಲ್:eeyediyurdivision@gmail.com

ಸಂಖ್ಯೆ:[illegible](ಯಡಿಯೂರು)/ಟೆಂಡರ್/03/2026-27 ದಿನಾಂಕ:18-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಟೆಂಡರ್ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

[illegible] ಟೆಂಡರ್ ದಾಖಲೆಗಳನ್ನು ಕಡ್ಡಾಯ-2 & ಕಡ್ಡಾಯ-3ರಂತೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಗಳ ಹೆಸರು/ವರ್ಗೀಕರಣ
1.	ವಾರ್ಡ್ ಸಂಖ್ಯೆ-167 ಯಡಿಯೂರು (ಹೊಸ ವಾರ್ಡ್ ಸಂ:105)ರ [illegible] (ಸಾಮಾನ್ಯರಿಗೆ) ಅಂದಾಜು ಮೊತ್ತ: ರೂ.38.90 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ: ರೂ.32.94 ಲಕ್ಷಗಳು, ಇಎಂಡಿ ಮೊತ್ತ: ರೂ.65,880/-
2.	ವಾರ್ಡ್ ಸಂಖ್ಯೆ-167 ಯಡಿಯೂರು (ಹೊಸ ವಾರ್ಡ್ ಸಂ:105)ರ [illegible] (ಸಾಮಾನ್ಯರಿಗೆ) ಅಂದಾಜು ಮೊತ್ತ: ರೂ.46.97 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ: ರೂ.39.80 ಲಕ್ಷಗಳು, ಇಎಂಡಿ ಮೊತ್ತ: ರೂ.79,600/-
3.	ವಾರ್ಡ್ ಸಂಖ್ಯೆ-167 ಯಡಿಯೂರಿನ (ಹೊಸ ವಾರ್ಡ್ ಸಂ:105) [illegible] (ಸಾಮಾನ್ಯರಿಗೆ) ಅಂದಾಜು ಮೊತ್ತ: ರೂ.60.33 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ: ರೂ.51.12 ಲಕ್ಷಗಳು, ಇಎಂಡಿ ಮೊತ್ತ: ರೂ.1,02,240/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ:22-06-2026, 4:30 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ 03-07-2026ರ ಸಂಜೆ 4:00 ಗಂಟೆಯವರೆಗೆ. (3) ಕ್ರ.ಸಂ.1ಕ್ಕೆ ಪ್ರಿ ಬಿಡ್ ಸಭೆಯನ್ನು ದಿನಾಂಕ:25-06-2026ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್ಡನ್ನು ದಿನಾಂಕ:04-07-2026ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಕ್ರ.ಸಂ.1ಕ್ಕೆ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ನಂತರ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. (6) ಕ್ರ.ಸಂ. 1 & 2ರ ಆರ್ಥಿಕ ಬಿಡ್ಡನ್ನು ದಿನಾಂಕ:04-07-2026ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಯಡಿಯೂರು ವಿಭಾಗ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ಚನ್ನಗಿರಿ

ಅಸಲುದಾವಾ ಸಂಖ್ಯೆ : 31/2026

[illegible]

ಪತ್ರಿಕಾ ಪ್ರಕಟಣೆ

[illegible] ದಿನಾಂಕ:23-07-2026 ರ ಬೆಳಿಗ್ಗೆ 11 ಗಂಟೆಗೆ [illegible] 2026 ಜೂನ್ [illegible]

ವಿಜಯ್.ಕೆ.
ಸ್ಥಳ: ಚನ್ನಗಿರಿ
ದಿನಾಂಕ:20-06-2026

ನ್ಯಾಯಾಲಯದ ಆಜ್ಞೆ ಮೇರೆಗೆ
ಸಹಿ/-(ಶಿರಸ್ತೇದಾರರು),
ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚನ್ನಗಿರಿ

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1907

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ☎ 26678572 : 26600512 : 26609066 : 57765582
ವೆಬ್: bccbl.co.in, ಇ-ಮೇಲ್ ವಿಳಾಸ : recovery@bccbl.co.in

ಸ್ಥಿರ ಸ್ವತ್ತುಗಳ ಸ್ವಾಧೀನದ ಬಗ್ಗೆ ಪ್ರಕಟಣೆ (ವಾಸ್ತವಿಕ)

[illegible]

ಸ್ಥಿರ ಆಸ್ತಿಗಳ ವಿವರಣೆ

ಕ್ರ.ಸಂ	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ವತ್ತುಗಳ ವಿವರ ಮತ್ತು ಅಳತೆ
ಪ್ರಧಾನ ಕಛೇರಿ ಶಾಖೆ:-			
01	[illegible]	ಡಿಮಾಂಡ್ ನೋಟೀಸ್ ದಿನಾಂಕ : 11.03.2026 ಸ್ವಾಧೀನತೆ ನೋಟೀಸ್ ದಿನಾಂಕ : 15.06.2026 ಬಾಕಿ ಇರುವ ಮೊತ್ತ : ರೂ. 6,66,379/- ದಿನಾಂಕ : 15.06.2026 ಕ್ಕೆ ಇದ್ದಂತೆ	[illegible] ನಂ. 43, [illegible] ನಂ. 82/1, [illegible] ನಂ. 197, [illegible] ನಂ. 359/362/43/82/1, [illegible] ಬೆಂಗಳೂರು. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ & ಉತ್ತರದಿಂದ ದಕ್ಷಿಣಕ್ಕೆ 50 ಅಡಿ ಪೂರ್ವಕ್ಕೆ : ಸೈಟ್ ಸಂಖ್ಯೆ 44, ಪಶ್ಚಿಮಕ್ಕೆ : ಸೈಟ್ ಸಂಖ್ಯೆ 42, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : [illegible]
02	[illegible]	ಡಿಮಾಂಡ್ ನೋಟೀಸ್ ದಿನಾಂಕ : 11.03.2026 ಸ್ವಾಧೀನತೆ ನೋಟೀಸ್ ದಿನಾಂಕ : 15.06.2026 ಬಾಕಿ ಇರುವ ಮೊತ್ತ : ರೂ.4,25,40,395/- ದಿನಾಂಕ : 15.06.2026 ಕ್ಕೆ ಇದ್ದಂತೆ	[illegible]
ಆರ್ ಟಿ ನಗರ ಶಾಖೆ			
03	[illegible]	ಡಿಮಾಂಡ್ ನೋಟೀಸ್ ದಿನಾಂಕ : 04.03.2026 ಸ್ವಾಧೀನತೆ ನೋಟೀಸ್ ದಿನಾಂಕ : 15.06.2026 ಬಾಕಿ ಇರುವ ಮೊತ್ತ : ರೂ. 12,76,230/- ದಿನಾಂಕ : 15.06.2026 ಕ್ಕೆ ಇದ್ದಂತೆ	[illegible]
ಕೋರಮಂಗಲ ಶಾಖೆ			
04	[illegible]	ಡಿಮಾಂಡ್ ನೋಟೀಸ್ ದಿನಾಂಕ : 27.01.2026 ಸ್ವಾಧೀನತೆ ನೋಟೀಸ್ ದಿನಾಂಕ : 15.06.2026 ಬಾಕಿ ಇರುವ ಮೊತ್ತ : ರೂ. 27,50,930/- ದಿನಾಂಕ : 15.06.2026 ಕ್ಕೆ ಇದ್ದಂತೆ	[illegible]

ಸ್ಥಳ : ಬೆಂಗಳೂರು
ದಿನಾಂಕ : 20.06.2026

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ಕಾಲ್ಚೆಂಡಿನ ಸಮರ

ಫಿಫಾ ವಿಶ್ವಕಪ್ | ಯುಎಸ್ಎ, ಮೆಕ್ಸಿಕೋ, ಕೆನಡಾ | ಜೂನ್ 11-ಜುಲೈ 19

FIFA

ಭಾನುವಾರದ ಪಂದ್ಯಗಳು

- ಎಕ್ವೆಡಾರ್-ಕುರಾಕಾವೊ, (ಬೆಳಗ್ಗೆ 5:30)
- ಟ್ಯುನೀಷ್ಯಾ-ಜಪಾನ್, (ಬೆಳಗ್ಗೆ 9:30)
- ಸ್ಪೇನ್-ಸೌದಿ ಅರೇಬಿಯಾ, (ರಾತ್ರಿ 9:30)
- ಬೆಲ್ಜಿಯಂ-ಇರಾನ್, (ಮಧ್ಯರಾತ್ರಿ 12:30)
- ಉರುಗ್ವೆ-ಕೇಪ್ ವರ್ಡೆ, (ಮಧ್ಯರಾತ್ರಿ 3:30)

ಆಸ್ಟ್ರೇಲಿಯಾ ವಿರುದ್ಧ ಆತಿಥೇಯರಿಗೆ ಭರ್ಜರಿ ಗೆಲುವು

32ರ ಸುತ್ತಿಗೆ ಅಮೆರಿಕ

• **ಸಿಯಾಟಲ್:** ಸ್ಟಾರ್ ಆಟಗಾರ ಕ್ರಿಶ್ಚಿಯನ್ ಪುಲಿಸಿಕ್ ಗಾಯದ ಕಾರಣದಿಂದ ಪಂದ್ಯದಿಂದ ಹೊರಗುಳಿದರೂ, ಆತಿಥೇಯ ಅಮೆರಿಕ ತಂಡ ಆಸ್ಟ್ರೇಲಿಯಾವನ್ನು 2-0 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ.

ಮೊದಲ ಎರಡು ಪಂದ್ಯಗಳಲ್ಲೇ ನಾಕೌಟ್ ಸ್ಥಾನ ಖಚಿತಪಡಿಸಿಕೊಂಡ ಅಮೆರಿಕ, ತನ್ನ ಅಭಿಯಾನವನ್ನು ಅತ್ಯಂತ ಯಶಸ್ವಿಯಾಗಿ ಮುಂದುವರಿಸಿದೆ. ಅಮೆರಿಕ ಪಂದ್ಯದ 11ನೇ ನಿಮಿಷದಲ್ಲೇ ಮುನ್ನಡೆ ಸಾಧಿಸಿತು. ಫೋಲರಿನ್ ಬಾಲೋಗುನ್ ಎಡಭಾಗದಿಂದ ನೀಡಿದ ಪಾಸ್‌ನ್ನು ತಡೆಯಲು ಯತ್ನಿಸಿದ ಆಸ್ಟ್ರೇಲಿಯಾ ರಕ್ಷಣಾಪಟು ಕ್ಯಾಮರೂನ್ ಬರ್ಗೆಸ್ ತಪ್ಪಾಗಿ ಚೆಂಡನ್ನು ತನ್ನದೇ ಗೋಲ್‌ಪೋಸ್ಟ್‌ಗೆ ತಳ್ಳಿದರು. ಇದರಿಂದ ಅಮೆರಿಕ 1-0 ಮುನ್ನಡೆ ಪಡೆಯಿತು.

ಆಸ್ಟ್ರೇಲಿಯಾಗೆ ಶಾಕ್: 43ನೇ ನಿಮಿಷದಲ್ಲಿ ಅಮೆರಿಕ ತನ್ನ ಮುನ್ನಡೆಯನ್ನು ದ್ವಿಗುಣಗೊಳಿಸಿತು. ಸೆಟ್‌ಪೀಸ್ ಸಂದರ್ಭದಲ್ಲಿನ ಸರ್ಜಿನೊ ಡೆಸ್ಟ್ ಅವರ ಶಾಟ್ ಡಿಫ್ಲೆಕ್ಟ್ ಆದ ನಂತರ, 21 ವರ್ಷದ ಅಲೆಕ್ಸ್ ಫ್ರೀಮನ್ ಹೆಡರ್ ಮೂಲಕ ಗೋಲು ದಾಖಲಿಸಿದರು. ವಿಡಿಯೋ ಪರಿಶೀಲನೆಯ ಬಳಿಕ ಗೋಲು ಮಾನ್ಯಗೊಂಡಿತು. ದ್ವಿತೀಯಾರ್ಧದಲ್ಲಿ ಆಸ್ಟ್ರೇಲಿಯಾ ಹೋರಾಟ ನಡೆಸಿದರೂ ಅಮೆರಿಕದ ರಕ್ಷಣಾ ವಿಭಾಗವನ್ನು ಭೇದಿಸಲು ವಿಫಲವಾಯಿತು. ಪರಿಣಾಮ ಅಮೆರಿಕ 2-0 ಅಂತರದ ಸುಲಭ ಜಯ ದಾಖಲಿಸಿತು.



- 11ನೇ ನಿಮಿಷ ಕ್ಯಾಮರೂನ್ ಬರ್ಗೆಸ್ ಆತ್ಮಹತ್ಯಾ ಗೋಲು (ಅಮೆರಿಕ 1-0)
- 43ನೇ ನಿಮಿಷ ಅಲೆಕ್ಸ್ ಫ್ರೀಮನ್ ಹೆಡರ್ ಗೋಲು (ಅಮೆರಿಕ 2-0)
- ಕ್ರಿಶ್ಚಿಯನ್ ಪುಲಿಸಿಕ್ ಗಾಯದ ಕಾರಣ ಪಂದ್ಯದಿಂದ ಹೊರಗುಳಿದರೂ ಅಮೆರಿಕದ ಪ್ರದರ್ಶನಕ್ಕೆ ಧಕ್ಕೆಯಾಗಲಿಲ್ಲ.
- ಸತತ ಎರಡನೇ ಜಯದೊಂದಿಗೆ ನಾಕೌಟ್ ಹಂತಕ್ಕೆ ಅಮೆರಿಕ

ಅಮೆರಿಕ 2-0 ಆಸ್ಟ್ರೇಲಿಯಾ

ಅಂಕಿಅಂಶ
- ಆತ್ಮಹತ್ಯಾ ಗೋಲು: ಕ್ಯಾಮರೂನ್ ಬರ್ಗೆಸ್ (11ನೇ ನಿಮಿಷ)
- ಅಲೆಕ್ಸ್ ಫ್ರೀಮನ್ (43ನೇ ನಿಮಿಷ)

ನಾಕೌಟ್ ಹಂತದಿಂದ ಹೈಟಿ ಹೊರಕ್ಕೆ

ಬ್ರೆಜಿಲ್‌ಗೆ ಗೆಲುವು

• **ಫಿಲಡೆಲ್ಫಿಯಾ:** ಸ್ಟಾರ್ ಆಟಗಾರ ವಿನಿಸಿಯಸ್ ಜೂನಿಯರ್ ಅವರ ಗೋಲು ಹಾಗೂ ಅಸಿಸ್ಟ್, ಮಥೆಯುಸ್ ಕುನ್ಹಾ ಗಳಿಸಿದ ಎರಡು ಗೋಲುಗಳ ಬಲದಿಂದ 5 ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್ ತಂಡ ಹೈಟಿಯನ್ನು 3-0 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್‌ನಲ್ಲಿ ತನ್ನ ಮೊದಲ ಗೆಲುವು ದಾಖಲಿಸಿತು. ಈ ಸೋಲಿನೊಂದಿಗೆ 1974ರ ನಂತರ ಮೊದಲ ಬಾರಿಗೆ ವಿಶ್ವಕಪ್‌ಗೆ ಅರ್ಹತೆ ಪಡೆದ ಹೈಟಿ, ನಾಕೌಟ್ ಹಂತದ ಸ್ಪರ್ಧೆಯಿಂದ ಹೊರಬಿದ್ದ ಮೊದಲ ತಂಡ ಎನಿಸಿತು.

ಬ್ರೆಜಿಲ್, ಈ ಬಾರಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು.

ಅಂಕಿ-ಅಂಶ
- 28: ಮಥೆಯುಸ್ (ಬ್ರೆಜಿಲ್)
- 42: ಮಥೆಯುಸ್ (ಬ್ರೆಜಿಲ್)

ಪಂದ್ಯ ಆರಂಭದಲ್ಲೇ ರಫಿನ್ಹಾ ಗೋಲು ಗಳಿಸಿದ್ದರೂ ಆಫ್‌ಸೈಡ್ ಕಾರಣದಿಂದ ಅದು ತಿರಸ್ಕೃತವಾಯಿತು.

ಆದರೆ 28ನೇ ನಿಮಿಷದಲ್ಲಿ ಮಥೆಯುಸ್ ಕುನ್ಹಾ ರಿಬೌಂಡ್ ಚೆಂಡನ್ನು ಗೋಲಾಗಿ ಪರಿವರ್ತಿಸಿ ಬ್ರೆಜಿಲ್‌ಗೆ ಮುನ್ನಡೆ ತಂದುಕೊಟ್ಟರು. ಬಳಿಕ 42ನೇ ನಿಮಿಷದಲ್ಲಿ ಎಡ ಕಾಲಿನ ಅದ್ಭುತ ಶಾಟ್ ಮೂಲಕ ಮತ್ತೊಂದು ಗೋಲು ದಾಖಲಿಸಿ ತಂಡದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಬ್ರೆಜಿಲ್ ಸುಲಭ ಜಯ ದಾಖಲಿಸಿತು.

ಸ್ಕಾಟ್ಲೆಂಡ್ ಮಣಿಸಿದ ಮೊರಾಕೊ

• **ಫಾಕ್ಸ್‌ಬರೋ (ಮ್ಯಾಸಚೂಸೆಟ್ಸ್):** ಪಂದ್ಯ ಆರಂಭವಾಗಿ ಕೇವಲ 72 ಸೆಕೆಂಡುಗಳಲ್ಲೇ ಇಸ್ಮಾಯಿಲ್ ಸೈಬಾರಿ ಗಳಿಸಿದ ಅದ್ಭುತ ಗೋಲಿನ ನೆರವಿನಿಂದ ಮೊರಾಕೊ ತಂಡ ಸ್ಕಾಟ್ಲೆಂಡ್ ವಿರುದ್ಧ 1-0 ಅಂತರದ ಮಹತ್ವದ ಗೆಲುವು ದಾಖಲಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಕತಾರ್ ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದ ಮೊರಾಕೊ, ಮೊದಲ ಪಂದ್ಯದಲ್ಲಿ ಬ್ರೆಜಿಲ್ ವಿರುದ್ಧ 1-1 ಸಮಬಲ ಸಾಧಿಸಿತ್ತು. ಪಂದ್ಯದ ಎರಡನೇ ನಿಮಿಷದಲ್ಲೇ ಬ್ರಹಿಮ್ ಡಿಯಾಸ್ ನೀಡಿದ ಅದ್ಭುತ ಪಾಸ್‌ನ್ನು ಸದುಪಯೋಗಪಡಿಸಿಕೊಂಡ ಸೈಬಾರಿ, ಗೋಲು ಬಾರಿಸಿದರು. ಮತ್ತೊಂದು ಪಂದ್ಯದಲ್ಲಿ ಪರಾಗ್ವೆ ಜಯ ಸಾಧಿಸಿತು.

- ಮೊರಾಕೊ 1-0 ಸ್ಕಾಟ್ಲೆಂಡ್
- ಗೋಲು: ಇಸ್ಮಾಯಿಲ್ ಸೈಬಾರಿ (2ನೇ ನಿಮಿಷ)

ಕಿರುಸುದ್ದಿ

ಶೂಟಿಂಗ್: ಭಾರತಕ್ಕೆ 5 ಪದಕ

• **ಸೂಹ್ಲ್ (ಜರ್ಮನಿ):** ಜೂನಿಯರ್ ಶೂಟಿಂಗ್ ವಿಶ್ವ ಚಾಂಪಿಯನ್‌ಶಿಪ್ ಕೂಟದಲ್ಲಿ ಭಾರತೀಯರು 5 ಪದಕಗಳನ್ನು ಗೆದ್ದರು. 25 ಮೀ. ರ‍್ಯಾಪಿಡ್ ಫೈಯರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ರೋಹಿತ್ ಕನ್ಯಾನ್ ಕೂಡ ಚಿನ್ನದ ಪದಕ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಪ್ರಾಚಿ ಗಾಯಕ್ವಾಡ್ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ರೋಹಿತ್, ವೇದಾಂತ್ ಮತ್ತು ಹಿತೇಶ್ ಕಂಚಿನ ಪದಕ ಮುಡಿಗೇರಿಸಿಕೊಂಡರು. 25 ಮೀ. ರ‍್ಯಾಪಿಡ್ ಫೈಯರ್ ಪಿಸ್ತೂಲ್ ವಿಭಾಗದಲ್ಲಿ ಸಮೀರ್, ಅಭಿನವ್ ಮತ್ತು ಸಾಹಿಲ್ ಮತ್ತೊಂದು ಕಂಚಿನ ಪದಕ ಗಿಟ್ಟಿಸಿಕೊಂಡರು.

ಅಶ್ಮಿತಾಗೆ ಸೋಲು

• **ಹೊಸದಿಲ್ಲಿ:** ಭರವಸೆಯ ಆಟಗಾರ್ತಿ ಅಶ್ಮಿತಾ ಚಲಿಹಾ ಅವರ ಸೆಮಿಫೈನಲ್ ಸೋಲಿನೊಂದಿಗೆ ಪ್ರತಿಷ್ಠಿತ ಮಕಾವು ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಅಭಿಯಾನ ಅಂತ್ಯಗೊಂಡಿದೆ. ಶನಿವಾರದ ಸೆಮಿಫೈನಲ್ ಪಂದ್ಯದಲ್ಲಿ ಕೊರಿಯಾದ ಪಾರ್ಕ್ ಗಾ ಅವರೊಂದಿಗೆ ಆಡಿದ ಅವರು, 17-21, 9-21ರಿಂದ ಸೋತರು.

ಬೆಂಗಳೂರು ಬ್ಲಾಸರ್ಸ್ ಶುಭಾರಂಭ

• **ಮೈಸೂರು:** ಒಟ್ಟು ಸಾಂಘಿಕ ಪ್ರದರ್ಶನದೊಂದಿಗೆ ಮಿಂಚಿರುವ ಕಲ್ಯಾಣಿ ಬೆಂಗಳೂರು ಬ್ಲಾಸರ್ಸ್ ತಂಡವು ಶನಿವಾರ ಶುರುವಾದ ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಗೆಲುವಿನಾರಂಭ ಮಾಡಿತು.

ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲಿತ ಪ್ರದರ್ಶನ ನೀಡಿದ ಬೆಂಗಳೂರು 200+ ಸ್ಕೋರ್ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದೆ. ಇಲ್ಲಿನ ಶ್ರೀಕಂಠದತ್ತ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿತು. ಪ್ರವೀರ್ 38 ಬಾಲ್‌ಗಳಲ್ಲಿ 64 ರನ್ ಗಳಿಸಿದರು. ಆರವ್ ಮಹೇಶ್ 41 ಬಾಲ್‌ಗಳಲ್ಲಿ 63 ರನ್ ಗಳಿಸಿದರು. ಶುಭಾಂಗ್ ಹೆಗ್ಡೆ ಮತ್ತು ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಬೆಂಗಳೂರು 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿತು. ಆರಂಭಿಕ ಭುವನ್ 56 ರನ್‌ಗಳಿಸಿದರು. ರೋಹನ್ ಪಾಟೀಲ್ 31, ಕೃಷ್ಣನ್ 22 ರನ್ ಗಳಿಸಿದರು. ಶುಭಾಂಗ್ 36 ರನ್ ಗಳಿಸಿದರೆ, ಪ್ರವೀಣ್ ದುಬೆ 32 ರನ್ ಗಳಿಸಿ ಪಂದ್ಯ ಮುಗಿಸಿದರು.



ದಿನದ ಮತ್ತೊಂದು ಪಂದ್ಯದಲ್ಲಿ ಶಿವಮೊಗ್ಗ ಹಾಗೂ ಮೈಸೂರು ತಂಡಗಳು ಎದುರಾಗಿದ್ದವು. ಉತ್ತಮ ಬ್ಯಾಟಿಂಗ್ ಮಾಡಿದ ಶಿವಮೊಗ್ಗ 190 ರನ್ ಗಳಿಸಿತು. ಭಾನುವಾರದಂದು ಕೋಸ್ಟಲ್ ಕಿಂಗ್ಸ್ ಮಂಗಳೂರು ಮತ್ತು ಹುಬ್ಬಳ್ಳಿ ಟೈಗರ್ಸ್ ಎದುರಾಗಲಿದ್ದರೆ, ಎರಡನೇ ಪಂದ್ಯದಲ್ಲಿ ಬೆಂಗಳೂರು ಮತ್ತು ಶಿವಮೊಗ್ಗ ತಂಡಗಳು ಮುಖಾಮುಖಿಯಾಗಲಿವೆ.

ಕ್ಲೀನ್‌ಸ್ವೀಪ್ ಗುರಿ ಯಶಸ್ವಿ

• **ಚೆನ್ನೈ:** ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಶತಕ, ರೋಹಿತ್ ಶರ್ಮಾ ಅವರ ಕರಾರುವಾಕ್ ಬ್ಯಾಟಿಂಗ್ ಮತ್ತು ಪ್ರಸಿದ್ಧ ಕೃಷ್ಣ ಅವರ ಫೈಫರ್ ಬಲದೊಂದಿಗೆ ಭಾರತ ತಂಡವು ಪ್ರವಾಸಿ ಅಫ್ಘಾನಿಸ್ತಾನ ತಂಡದ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸಿ ಸರಣಿ ಕ್ಲೀನ್‌ಸ್ವೀಪ್ ಮಾಡಿತು.

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಆಯ್ದುಕೊಂಡಿದ್ದ ಅಫ್ಘಾನಿಸ್ತಾನ ತಂಡವನ್ನು 218 ರನ್‌ಗಳಿಗೆ ಆಲೌಟ್ ಮಾಡಿತು. ನಾಯಕ ಹಶ್ಮತುಲ್ಲಾ ಶತಕ ಬಾರಿಸಿದರು. ಅಜ್ಮತುಲ್ಲಾ ಒಮರ್‌ಝೈ ಅರ್ಧಶತಕ ಬಾರಿಸಿದರು. ಉಳಿದ ಬ್ಯಾಟರು 10ರ ಗಡಿಯೇ ದಾಟಲಿಲ್ಲ.

ಗುರಿ ಬೆನ್ನತ್ತುವಾಗ ಯಾವುದೇ ಅಡೆತಡೆಗಳನ್ನು ಎದುರಿಸದ ಭಾರತ 28.4 ಓವರ್‌ಗಳಲ್ಲೇ ಪಂದ್ಯವನ್ನು ಮುಗಿಸಿತು. ಯಶಸ್ವಿ ಜೈಸ್ವಾಲ್ ತಮ್ಮ ಮೊದಲ ಏಕದಿನ ಶತಕ ಬಾರಿಸಿದರು. ಅತ್ತ ರೋಹಿತ್ ಶರ್ಮಾ ಕಂಬ್ಯಾಕ್ ಮಾಡಿದ್ದು 79 ರನ್ ಗಳಿಸಿದರು. ಪಂದ್ಯ ಗೆಲ್ಲುವುದಕ್ಕೆ ಉಳಿದ ಬ್ಯಾಟರ ಕೊಡುಗೆ ಅವಶ್ಯಕತೆಯೇ ಬೀಳಲಿಲ್ಲ.

ಜೈಸ್ವಾಲ್ ಅಬ್ಬರ: ಗುರಿ ಬೆನ್ನತ್ತುವಾಗ ಜೈಸ್ವಾಲ್ ಮತ್ತು ರೋಹಿತ್ ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುತ್ತಾ ಸಾಗಿದರು. 38 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಯಶಸ್ವಿ 83 ಬಾಲ್‌ಗಳಲ್ಲಿ ಶತಕ ಪೂರೈಸಿದರು. ಅವರ ಇನ್ನಿಂಗ್ಸ್‌ನಲ್ಲಿ 14 ಬೌಂಡರಿ, 3 ಸಿಕ್ಸರ್‌ಗಳು ಸೇರಿವೆ. ಅತ್ತ ರೋಹಿತ್ ಕೂಡ ಅರ್ಧಶತಕ ಬಾರಿಸಿದರು. 79 ರನ್‌ಗೆ ರೋಹಿತ್ ವಿಕೆಟ್ ಒಪ್ಪಿಸಿದರು.

ಆಫ್ಘನ್‌ಗೆ 5 ರನ್ ಪೆನಾಲ್ಟಿ

ಅಫ್ಘಾನಿಸ್ತಾನ ತಂಡಕ್ಕೆ 5 ರನ್‌ಗಳ ಪೆನಾಲ್ಟಿ ನೀಡಿದ ಅಪರೂಪದ ಸಂಗತಿ ನಡೆಯಿತು. ಅಫ್ಘಾನ್ ತಂಡದ ನಾಯಕ ಹಶ್ಮತುಲ್ಲಾ ಬ್ಯಾಟಿಂಗ್ ಮಾಡುವ ವೇಳೆ ಪಿಚ್‌ನ ಪ್ರೊಟೆಕ್ಟೆಡ್ ಪ್ರದೇಶದಲ್ಲಿ ಎರಡು ಬಾರಿ ಓಡಿದರು. ಪರಿಣಾಮ ಮೊದಲಿಗೆ ಒಂದು ಬಾರಿ ಎಚ್ಚರಿಕೆ ಕೊಟ್ಟ ನಿರ್ಣಾಯಕರು ಎರಡನೇ ಬಾರಿ ಮಾಡಿದಾಗ 5 ರನ್ ಪೆನಾಲ್ಟಿ ಕೊಟ್ಟರು. ಪರಿಣಾಮ ಭಾರತ 5 ರನ್‌ಗಳೊಂದಿಗೆ ಬ್ಯಾಟಿಂಗ್ ಶುರು ಮಾಡಿತು.

ಸಂಕ್ಷಿಪ್ತ ಸ್ಕೋರ್

ಅಫ್ಘಾನಿಸ್ತಾನ 44.2 ಓವರ್‌ಗಳಲ್ಲಿ 218: ಹಶ್ಮತುಲ್ಲಾ 102, ಒಮರ್‌ಝೈ 50; ಪ್ರಸಿದ್ಧ ಕೃಷ್ಣ 23/5
ಭಾರತ 28.4 ಓವರ್‌ಗಳಲ್ಲಿ 224/1: ಜೈಸ್ವಾಲ್ 110★, ರೋಹಿತ್ 79

ಇಂದು ಭಾರತ-ಆಫ್ರಿಕಾ ಪಂದ್ಯ

• **ಮ್ಯಾಂಚೆಸ್ಟರ್:** ಸತತ ಎರಡು ಪಂದ್ಯಗಳಲ್ಲಿ ಜಯ ಸಾಧಿಸಿರುವ ಭಾರತ ಮಹಿಳಾ ತಂಡವು ಹ್ಯಾಟ್ರಿಕ್ ಗೆಲುವಿನ ಕನಸಿನೊಂದಿಗೆ ಮೂರನೇ ಪಂದ್ಯವಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಬಲಿಷ್ಠ ದ.ಆಫ್ರಿಕಾ ತಂಡವನ್ನು ಎದುರಿಸಬೇಕಿರುವುದರಿಂದ ಭಾರತ ಕಠಿಣ ಅಭ್ಯಾಸವನ್ನು ಕಳೆದ ಎರಡು ದಿನಗಳಿಂದಲೂ ನಡೆಸಿತು. ಮಂಧಾನ ಅವರ ಬ್ಯಾಟಿಂಗ್ ಬಲ ಮತ್ತು ಬೌಲರುಗಳ ಸಾಂಘಿಕ ಆಟದೊಂದಿಗೆ ಭಾರತ ಮೊದಲಿಗೆ ಪಾಕಿಸ್ತಾನ ನಂತರ ನೆದರ್ಲೆಂಡ್ಸ್ ತಂಡಗಳನ್ನು ಸೋಲಿಸಿ ಅಜೇಯವಾಗಿದೆ. ಏಕದಿನ ವಿಶ್ವಕಪ್ ಗೆದ್ದ ನಂತರ ಭಾರತದ ಪಾರುಪತ್ಯ ಅಚಲವಾಗಿದ್ದು ಮೂರನೇ ಗೆಲುವಿನೊಂದಿಗೆ ಸೂಪರ್ 8ಗೆ ಲಗ್ಗೆ ಹಾಕಲು ಮುಂಚೂಣಿಯಲ್ಲಿದೆ.

ಬ್ಯಾಟಿಂಗ್‌ನಲ್ಲಿ ಸ್ಮೃತಿ ಮಂಧಾನ ಎರಡು ಪಂದ್ಯಗಳಲ್ಲಿ 142 ರನ್ ಗಳಿಸಿ ಲಯದಲ್ಲಿದ್ದಾರೆ. ಶೆಫಾಲಿ ವರ್ಮಾ ಕೂಡ ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಹರ್ಮನ್ ಪ್ರೀತ್ ಕೌರ್ ಅವರು ಜವಾಬ್ದಾರಿಯುತ ಬ್ಯಾಟಿಂಗ್ ಮಾಡುತ್ತಿದ್ದಾರೆ. ಫಿನಿಶಿಂಗ್ ವೇಳೆ ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್ ಮಾಡುತ್ತಿರುವುದು ತಂಡದ ಬಲ ಹೆಚ್ಚಿಸಿದೆ. ಶ್ರೀ ಚರಣಿ ಬೌಲಿಂಗ್ ಭಾರತ ತಂಡದ ದೊಡ್ಡ ಬಲ. ದೀಪ್ತಿ ಶರ್ಮ ಅವರ ಅನುಭವ ಕೂಡ ಪಂದ್ಯ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅತ್ತ ದ.ಆಫ್ರಿಕಾ ಕೂಡ ಗೆಲುವಿನ ನಾಗಾಲೋಟದ ಮೇಲೆ ಕಣ್ಣಿಟ್ಟಿದೆ.

ಪಂದ್ಯದ ವಿವರ:
ಯಾವಾಗ: ಭಾನುವಾರ
ಎಲ್ಲಿ: ಮ್ಯಾಂಚೆಸ್ಟರ್
ಸಮಯ: ಸಂಜೆ 7:00

ICC WOMEN'S T20 WORLD CUP ENGLAND & WALES 2026

ಖಾತೆ ತೆರೆದ ಕಿವೀಸ್

• **ಲೀಡ್ಸ್:** ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಪಂದ್ಯದಲ್ಲಿ ಮೊದಲ ಗೆಲುವು ಸಾಧಿಸಿದೆ. ಚೊಚ್ಚಲ ಪಂದ್ಯದಲ್ಲಿ ಸೋತಿದ್ದ ಕಿವೀಸ್ ಎರಡನೇ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಿತ್ತು.


ಶುಕ್ರವಾರ ತಡರಾತ್ರಿಯ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 40 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 140 ರನ್ ಗಳಿಸಿದರು. ಮೆಲ್ಲಿ ಕೇರ್ 30, ಬ್ರೂಕ್ 34 ಮತ್ತು ಇಝಿ ಶಾರ್ಪ್ 36 ರನ್ ಗಳಿಸಿದರು. ಐರ್ಲೆಂಡ್ ಪರ ಓರ್ಲಾ, ಕಾರಾ 2, ಕೆಲ್ಲಿ, ಐಮಿ 1 ವಿಕೆಟ್ ಕಿತ್ತರು.

ಗುರಿ ಬೆನ್ನತ್ತಿದ ಐರ್ಲೆಂಡ್ 136 ರನ್ ಗಳಿಸಿತು. 4 ವಿಕೆಟ್ ಮಾತ್ರ ಕಳೆದುಕೊಂಡರೂ ಐರ್ಲೆಂಡ್ ಡಾಟ್ ಮಾಡಿ ಸೋತಿತು. ಗ್ಯಾಬಿ 58, ಓರ್ಲಾ 59 ರನ್ ಗಳಿಸಿದರು. ಕಿವೀಸ್ ಪರ ಕೇರ್ 2, ಇಲ್ಲಿಂಗ್, ಮೈರ್ 1 ವಿಕೆಟ್ ಕಿತ್ತರು. ಶನಿವಾರದ ಪಂದ್ಯದಲ್ಲಿ 216 ರನ್ ಗಳಿಸಿದ್ದ ಆಸ್ಟ್ರೇಲಿಯಾ ನೆದರ್ಲೆಂಡ್ಸ್ ತಂಡವನ್ನು 123 ರನ್‌ಗಳಿಗೆ ಕಟ್ಟಿಹಾಕಿ ಜಯ ಸಾಧಿಸಿದೆ. ಆ ಮೂಲಕ ಬಹುತೇಕ ಸೂಪರ್ 8ಕ್ಕೆ ಲಗ್ಗೆ ಹಾಕಿದೆ. ಭಾನುವಾರ ಶ್ರೀಲಂಕಾ ಹಾಗೂ ವಿಂಡೀಸ್ ತಂಡಗಳು ಮುಖಾಮುಖಿಯಾಗಲಿವೆ.

ಪದಬಂಧ

6021

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಮರದ ನಡುವೆ ರತ್ನಪತಿ ವ್ಯಾಪಾರಿಯಿದ್ದಾನೆ (4)
3.ಮದವನ್ನೊಳಗೊಂಡ ಸಮದರ್ಶಿ (4)
5.ಉಲ್ಕಾ ಚಲಿಸುವ ಎಂಬರ್ಥದ ಶಬ್ದ (3)
6.ಜಾವ-ನಡ ಒಳಗೊಂಡ ಇದಿಗ ಹಾಡೆ ಜನಿಸಿದ್ದು (4)
8.ಪಾಳಿ-ಅನುಕ್ರಮದ ಸಮಾನಪದ (3)
9.ಕಾಡು, ಒಂದು ಚಲನಚಿತ್ರವಾಗಿ ಬಂದಿದೆ (3)
11.ವಿಘ್ನನಿವಾರಕ-ಶಿವಪುತ್ರ (4)
13.ಸೌಂದರ್ಯ ಬಣ್ಣಿಸಲು ಬಳಸುವ ಶಬ್ದ (3)
14.ರುಚಿಕರ,ನಾಲಿಗೆಗೆ ಹಿತವೆನಿಸುವ ಭೋಜನ (4)
15.ಇದ್ದುದ್ದನ್ನು ಕಳೆದುಕೊಂಡವರು-ನಿರ್ಭಾಗ್ಯ (4)

ಮೇಲಿನಿಂದ ಕೆಳಕ್ಕೆ
1.ಮನದ ನಡುವೆ ಸ್ನಾನವಡಗಿದೆ (3)
2.ಇಲ್ಲದ-ಮುಕ್ತವಾದ ಎಂಬರ್ಥದ ಶಬ್ದ (3)
3.ಮುಖ ಸಣ್ಣಗೆ ಮಾಡಿಕೊಂಡಿರುವ ಗೆಳೆಯ (2)
4.ದರದ ನಡುವೆ ಸಂಯುಕ್ತಾಕ್ಷರವಿದೆ (4)
7.ಕುವೆಂಪು ಅವರ ಪ್ರಸಿದ್ಧ ಸಾಮಾಜಿಕ ನಾಟಕ (4)
8.ಪವಿತ್ರಮನ, ಗೌರವದಿಂದ ಇನ್ನೊಬ್ಬರಿಗೆ ನೀಡುವುದು (4)
10.ಹೊಂದಾಣಿಕೆ ಎಂಬರ್ಥದ ಶಬ್ದ (4)
11.ಭಾರತದ ರಾಷ್ಟ್ರಧ್ವಜ ತಯಾರಿಸುವ ಅಧಿಕೃತ ಕೇಂದ್ರ (3)
12.ಮೂರು ಮೂಲೆಗಳುಳ್ಳ ಆಕೃತಿ (3)
13.ತೆರಿಗೆ-ಕರದ ಸಮಾನಪದ (2)

6020 ಉತ್ತರ

ಎಡದಿಂದ ಬಲಕ್ಕೆ:
1.ಸಹಿತ 5.ಕರುಣಾಳು
6.ಗಿರಿಧರ 7.ರಮಣಿ
9.ಬೇಡಿ 10.ಧರೆ
11.ಪಾರಿಜ
13.ದಂಡಪಿಂಡ
14.ಪರಿಣತಿ 15.ರಾಜಿ

ಮೇಲಿನಿಂದ ಕೆಳಕ್ಕೆ :
1.ಸಮಾಚಾರ 2.ತರಂಗಿಣಿ
3.ಶಂಕರ 4.ಕಾಳರಾತ್ರಿ
8.ಮದಿರೆ 9.ಬೇಸರ
10.ಧನಪತಿ 11.ಜಲಧರ
13.ಪಾರಂಗತ 13.ದಂಡಿಸಿ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ: ಬದುಕಿನ ದಿನಗಳಿಗೆ ಸಾರ್ಥಕತೆಯ ಸ್ಪರ್ಶ

• ಸಿ.ಪಿ. ರಾಧಾಕೃಷ್ಣನ್



ಬಹಳ ಹಿಂದಿನಿಂದಲೂ, ಇಡೀ ಪ್ರಪಂಚವನ್ನು ಒಂದು ದೊಡ್ಡ ಕುಟುಂಬ ಎಂದು ಭಾವಿಸುವ ಮತ್ತು ಎಲ್ಲಾ ಜೀವಿಗಳನ್ನು ಒಂದೇ ಎಂದು ಕಾಣುವ ವಸುಧೈವ ಕುಟುಂಬಕಂ ಎಂಬ ಉದಾತ್ತ ಆಲೋಚನೆಯೇ ಭಾರತದ ಹೆಮ್ಮೆಯ ಗುರುತಾಗಿದೆ. ಭಾರತದ ಆಧ್ಯಾತ್ಮಿಕ ಜ್ಞಾನದಿಂದ ಬಂದಿರುವ ಯೋಗವು ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಒಂದಕ್ಕೊಂದು ಜೋಡಿಸುವ ಪ್ರಾಚೀನ ಪದ್ಧತಿಯಾಗಿದೆ. ಯೋಗದ ಮುಖ್ಯ ಭಾಗಗಳೆಂದರೆ ಆಸನಗಳು (ದೈಹಿಕ ಕಸರತ್ತುಗಳು), ಪ್ರಾಣಾಯಾಮ (ಉಸಿರಾಟದ ಕ್ರಿಯೆಗಳು) ಮತ್ತು ಧ್ಯಾನ. ಇವೆಲ್ಲವೂ ಸೇರಿದಾಗ ನಮ್ಮ ದೇಹಕ್ಕೆ ಗಟ್ಟಿಮುಟ್ಟಾದ ಶಕ್ತಿ, ಮನಸ್ಸಿಗೆ ಸ್ಪಷ್ಟತೆ ಮತ್ತು ಭಾವನೆಗಳ ಮೇಲೆ ಹತೋಟಿ ಸಿಗುತ್ತದೆ.

ನಮ್ಮ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಅವರು 2014ರ ಸೆಪ್ಟೆಂಬರ್ 27ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಇಡೀ ಜಗತ್ತು ಚೆನ್ನಾಗಿರಲು ಮತ್ತು ಬದುಕಲು ಯೋಗ್ಯವಾಗಲು ಜನರ ಜೀವನಶೈಲಿ ಬದಲಾಗಬೇಕು ಎಂದು ಒತ್ತಿ ಹೇಳಿದರು. ಯೋಗವು ಮನಸ್ಸು ಮತ್ತು ದೇಹವನ್ನು ಒಂದು ಮಾಡುತ್ತದೆ; ಆಲೋಚನೆ ಮತ್ತು ಕೆಲಸವನ್ನು ಜೋಡಿಸುತ್ತದೆ; ಹತೋಟಿ ಮತ್ತು ಪರಿಪೂರ್ಣತೆಯನ್ನು ತರಲು ನೆರವಾಗುತ್ತದೆ; ಮನುಷ್ಯ ಮತ್ತು ಪ್ರಕೃತಿಯ ನಡುವೆ ಒಳ್ಳೆಯ ಸಂಬಂಧವನ್ನು ಬೆಳೆಸುತ್ತದೆ; ಹಾಗೂ ಆರೋಗ್ಯವಾಗಿರಲು ಒಂದು ಉತ್ತಮ ಮಾರ್ಗವಾಗಿದೆ ಎಂದು ಅವರು ತಿಳಿಸಿದರು. ಪ್ರಧಾನಮಂತ್ರಿಯವರ ಮನವಿಯ ಮೇರೆಗೆ, ವಿಶ್ವಸಂಸ್ಥೆಯು 2014ರ ಡಿಸೆಂಬರ್ 11ರಂದು, ದಾಖಲೆಯ 174ಕ್ಕೂ ಹೆಚ್ಚು ದೇಶಗಳು ಬೆಂಬಲಿಸಿದ ಪ್ರಸ್ತಾವನೆಯನ್ನು ಒಪ್ಪಿಕೊಂಡು, ಜೂನ್ 21 ಅನ್ನು ಅಂತಾರಾಷ್ಟ್ರೀಯ ಯೋಗ ದಿನ ಎಂದು ಘೋಷಿಸಿತು. 2015ರಿಂದ, ಪ್ರಪಂಚದಾದ್ಯಂತ ಲಕ್ಷಾಂತರ ಜನರು ಒಟ್ಟಿಗೆ ಯೋಗ ಮಾಡಲು ಸಾರ್ವಜನಿಕ ಜಾಗಗಳಲ್ಲಿ ಸೇರುತ್ತಿದ್ದಾರೆ. ಇದರಿಂದಾಗಿ ನಮ್ಮ ಪ್ರಾಚೀನ ಜ್ಞಾನವು ಒಂದು ಜಗತ್ತಿನಾದ್ಯಂತ ದೊಡ್ಡ ಆಂದೋಲನವಾಗಿ ಬದಲಾಗಿದೆ.

ಈ ವರ್ಷದ ಜೂನ್ 21ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದಲ್ಲಿ ಯೋಗ ದಿನದ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರೆ, ನಾನು ಅದೇ ಸಂಭ್ರಮದಲ್ಲಿ ಭಾಗವಹಿಸಲು ಲಡಾಖ್‌ಗೆ ಹೋಗುತ್ತಿದ್ದೇನೆ. ನನಗೆ ವೈಯಕ್ತಿಕವಾಗಿ, ಹಲವು ವರ್ಷಗಳಿಂದ ಯೋಗ ಮತ್ತು ಪಂಚಕರ್ಮದಿಂದ ತುಂಬಾ ಅನುಕೂಲಗಳಾಗಿವೆ. ಇವೆರಡನ್ನೂ ಒಂದಕ್ಕೊಂದು ಸಂಬಂಧವಿರುವ 'ಸಹೋದರ ವಿಜ್ಞಾನಗಳು'(sister sciences) ಎಂದು ಕರೆಯುತ್ತಾರೆ. ಯೋಗದಿಂದ ಮನುಷ್ಯನ ಆರೋಗ್ಯಕ್ಕೆ ಎಷ್ಟು ಒಳ್ಳೆಯದಾಗುತ್ತದೆ ಎಂಬ ಬಗ್ಗೆ ನನ್ನ ಆಲೋಚನೆಗಳನ್ನು ಬರೆಯಲು ನನ್ನ ಈ ಸ್ವಂತ ಅನುಭವವೇ ಕಾರಣ.

ಯೋಗ: ಭಾರತದ ಕಾಲಾತೀತ ಪರಂಪರೆ

ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಆರೋಗ್ಯವಾಗಿಡುವ ಯೋಗವು ನಮ್ಮ ಸಂಸ್ಕೃತಿಯ ಆರಂಭದಲ್ಲೇ ಶುರುವಾಯಿತು ಎಂದು ನಂಬಲಾಗಿದೆ. ಪುರಾಣ ಕಥೆಗಳಲ್ಲಿ ಶಿವನನ್ನು ಮೊದಲ ಯೋಗಿ ಅಥವಾ 'ಆದಿ ಯೋಗಿ' ಮತ್ತು ಮೊದಲ ಗುರು ಅಥವಾ 'ಆದಿಗುರು' ಎಂದು ಕರೆಯಲಾಗುತ್ತದೆ. ಇನ್ನು ಮಹರ್ಷಿ ಪತಂಜಲಿ ಅವರು ಯೋಗದ ನಿಯಮಗಳನ್ನು ಅಚ್ಚುಕಟ್ಟಾಗಿ ಜೋಡಿಸಿಕೊಟ್ಟಿದ್ದರಿಂದ ಅವರನ್ನು ಯೋಗದ ಪಿತಾಮಹ ಎಂದು ಗೌರವಿಸಲಾಗುತ್ತದೆ. ಮಹರ್ಷಿ ಪತಂಜಲಿ ಅವರಿಗೂ ತಮಿಳುನಾಡಿಗೂ ಆಳವಾದ ಆಧ್ಯಾತ್ಮಿಕ ಸಂಬಂಧವಿದೆ. ಅವರ ಭೌತಿಕ ಜೀವ ಸಮಾಧಿಯು ತಿರುಪತ್ತೂರಿನಲ್ಲಿದೆ ಎಂದು ನಂಬಲಾಗಿದೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಪ್ರತಿ ವರ್ಷ ಅಂತಾರಾಷ್ಟ್ರೀಯ ಯೋಗ ದಿನವನ್ನು ನಮ್ಮ ದೇಶದಲ್ಲಿ ಒಂದು ಒಳ್ಳೆಯ ಸಂದೇಶದೊಂದಿಗೆ ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಈ ವರ್ಷದ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ವಿಷಯವು ತುಂಬಾ ಮುಖ್ಯವಾದುದಾಗಿದೆ. ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಉತ್ತಮಗೊಂಡಿರುವುದರಿಂದ ಮತ್ತು ಸಾವಿನ ಪ್ರಮಾಣ ಕಡಿಮೆ ಆಗಿರುವುದರಿಂದ, ಜಗತ್ತಿನಾದ್ಯಂತ ಜನರ ಜೀವಿತಾವಧಿ (ಬದುಕುವ ವಯಸ್ಸು) ಹೆಚ್ಚಾಗಿದೆ. ಭಾರತದಲ್ಲೂ ಈ ದೊಡ್ಡ ಬದಲಾವಣೆ ಕಾಣಿಸುತ್ತಿದೆ. ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (UNFPA) ನೀಡಿದ 'ಇಂಡಿಯಾ ಏಜಿಂಗ್ ರಿಪೋರ್ಟ್ 2023' ರ ಪ್ರಕಾರ, 2050ರ ವೇಳೆಗೆ ಭಾರತದಲ್ಲಿ ಪ್ರತಿ ಐದು ಜನರಲ್ಲಿ ಒಬ್ಬರು 60 ವರ್ಷ ದಾಟಿದ ಹಿರಿಯರಿರುತ್ತಾರೆ.

ಹೆಚ್ಚು ಕಾಲ ಬದುಕುವುದು ಒಂದು ಅದ್ಭುತ ಕೊಡುಗೆ. ಆದರೆ, ಬದುಕಿನ ವರ್ಷಗಳು ಹೆಚ್ಚಾಗುವುದರ ಜೊತೆಗೆ, ಆ ದಿನಗಳು ನೆಮ್ಮದಿಯಿಂದ ಮತ್ತು ಸಾರ್ಥಕತೆಯಿಂದ ಕಳೆಯುವಂತೆ ನೋಡಿಕೊಳ್ಳುವ ದೊಡ್ಡ ಜವಾಬ್ದಾರಿ ನಮ್ಮ ಸಮಾಜದ ಮೇಲಿದೆ. ಈ ಕಾರಣಕ್ಕಾಗಿಯೇ, 2026ರ ಅಂತಾರಾಷ್ಟ್ರೀಯ ಯೋಗ ದಿನದ ವಿಷಯವಾದ "ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ" ಎಂಬುದು ಈಗಿನ ಕಾಲಕ್ಕೆ ತಕ್ಕ ಸೂಕ್ತ ಸಂದೇಶವಾಗಿದೆ.

ಹಿರಿಯರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಭಾರತದಲ್ಲಿ ಹಿರಿಯ ನಾಗರಿಕರ ಆರೋಗ್ಯ ಮತ್ತು ಅವರ ಅಗತ್ಯ ವಸ್ತುಗಳಿಗೆ ಸಂಬಂಧಿಸಿದ 'ಸಿಲ್ವರ್ ಎಕಾನಮಿ' (ಬೆಳ್ಳಿ ಆರ್ಥಿಕತೆ) ಮಾರುಕಟ್ಟೆ ದೊಡ್ಡದಾಗುತ್ತಿದೆ. ತಜ್ಞರ ಪ್ರಕಾರ, ಈಗಲೇ ಈ ಮಾರುಕಟ್ಟೆಯ ಮೌಲ್ಯ ಸುಮಾರು 73,000 ಕೋಟಿ ರೂಪಾಯಿಗಳಷ್ಟಿದೆ. ಮುಂಬರುವ ದಿನಗಳಲ್ಲಿ ಇದು ಇನ್ನೂ ದೊಡ್ಡದಾಗಿ ಬೆಳೆಯುವ ನಿರೀಕ್ಷೆಯಿದೆ.

ಜನರಿಗೆ ಚಿಕ್ಕವಯಸ್ಸಿನಲ್ಲೇ ಯೋಗವನ್ನು ಕಲಿಸುವುದು ಇವತ್ತಿನ ಅಗತ್ಯವಾಗಿದೆ. ಎಷ್ಟು ಬೇಗ ಯೋಗ ಮಾಡಲು ಶುರು ಮಾಡುತ್ತಾರೋ, ಅದರ ಲಾಭ ಇಡೀ ಜೀವನದುದ್ದಕ್ಕೂ ಅಷ್ಟೇ ಹೆಚ್ಚಾಗಿ ಸಿಗುತ್ತಾ ಹೋಗುತ್ತದೆ. ನಮ್ಮ 'ರಾಷ್ಟ್ರೀಯ ಶಿಕ್ಷಣ ನೀತಿ 2020' ಯೋಗಕ್ಕೆ ಆರೋಗ್ಯ ಮತ್ತು ಮೌಲ್ಯದ ಶಿಕ್ಷಣದ ಮುಖ್ಯ ಭಾಗವಾಗಿ ಒಳ್ಳೆಯ ಸ್ಥಾನ ಕೊಟ್ಟಿದೆ ಎಂದು ಹೇಳಲು ನನಗೆ ಖುಷಿಯಾಗುತ್ತದೆ. ಯುವಜನರಿಗೆ ಯೋಗವನ್ನು ಪರಿಚಯಿಸಲು ಇದು ಒಂದು ಒಳ್ಳೆಯ ಹೆಜ್ಜೆ. ಇದು ವಿದ್ಯಾರ್ಥಿಗಳಲ್ಲಿ ಶಿಸ್ತು, ಏಕಾಗ್ರತೆ, ಮನಸ್ಸಿನ ಹತೋಟಿ ಮತ್ತು ಒಳ್ಳೆಯ ಜೀವನಶೈಲಿಯನ್ನು ಬೆಳೆಸಲು ಖಂಡಿತ ನೆರವಾಗುತ್ತದೆ.

ಹಾಗಾಗಿ, ಜಗತ್ತಿನಾದ್ಯಂತ ವಯಸ್ಸಾಗುತ್ತಿರುವ ಜನರ ಸಂಖ್ಯೆಯನ್ನು ಸರಿಯಾಗಿ ನಿಭಾಯಿಸಲು ಭಾರತವು ಇಡೀ ಪ್ರಪಂಚಕ್ಕೆ ಒಂದು ಅಪರೂಪದ ಮಾದರಿಯನ್ನು ತೋರಿಸಿಕೊಡುತ್ತಿದೆ. ಅದುವೇ ನಮ್ಮ ಹಳೆಯ ಕಾಲದ ಜ್ಞಾನವನ್ನು ಇಂದಿನ ವಿಜ್ಞಾನದ ಒಪ್ಪಿಗೆಯೊಂದಿಗೆ ಜೋಡಿಸುವ ಯೋಗ.

ಯೋಗ - ಇಂದಿನ ಕಾಲದ ವಯಸ್ಸಾದವರಿಗೆ ಒಂದು ಪರಿಹಾರ

ನಿಯಮಿತ ಜೀವನ, ಯೋಗ ಮತ್ತು ಧ್ಯಾನದ ಮೂಲಕ ನಮ್ಮ ಋಷಿಮುನಿಗಳು ಹೇಗೆ ದೀರ್ಘಕಾಲ ಬದುಕಿದರು, ಶಕ್ತಿಶಾಲಿಯಾಗಿದ್ದರು ಮತ್ತು ಚುರುಕಾಗಿದ್ದರು ಎಂಬುದನ್ನು ಇಂದಿನ ವಿಜ್ಞಾನವೂ ಒಪ್ಪಿಕೊಳ್ಳುತ್ತಿದೆ. ಯೋಗದಿಂದ ಕಾಯಿಲೆಗಳನ್ನು ಗುಣಪಡಿಸುವ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ಲೋಕದಲ್ಲಿ ಆಸಕ್ತಿ ತುಂಬಾ ಹೆಚ್ಚಾಗಿದೆ.

'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್', 'ಹಾರ್ವರ್ಡ್ ಮೆಡಿಕಲ್ ಸ್ಕೂಲ್' ಮತ್ತು 'ಲ್ಯಾನ್ಸೆಟ್' ನಂತಹ ದೊಡ್ಡ ಸಂಸ್ಥೆಗಳ ಸಂಶೋಧನೆಗಳ ಪ್ರಕಾರ, ದಿನವೂ ಯೋಗ ಮಾಡುವುದರಿಂದ ಹಿರಿಯರಲ್ಲಿ ದೇಹದ ಸಮತೋಲನ, ನರಗಳ ಸಡಿಲತೆ ಮತ್ತು ನಡಿಗೆ ಸುಲಭವಾಗುತ್ತದೆ. ಇದರಿಂದ ಅವರು ಆಯತಪ್ಪಿ ಬೀಳುವ ಭಯ ಮತ್ತು ಅಪಾಯ ತುಂಬಾ ಕಡಿಮೆಯಾಗುತ್ತದೆ. ಮೂಳೆಗಳನ್ನು ಬಲಪಡಿಸಲು, ಕೀಲು ನೋವು ಕಡಿಮೆ ಮಾಡಲು, ಉಸಿರಾಟ ಸುಲಭವಾಗಿಸಲು, ರಕ್ತದೊತ್ತಡವನ್ನು ಹತೋಟಿಯಲ್ಲಿಡಲು ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿಡಲು ಯೋಗ ಸಹಾಯ ಮಾಡುತ್ತದೆ ಎಂದು ಸಂಶೋಧನೆಗಳು ಸಾಬೀತುಪಡಿಸಿವೆ. ಅಷ್ಟೇ ಅಲ್ಲದೆ, ಧ್ಯಾನ ಮತ್ತು ಉಸಿರಾಟದ ಕ್ರಿಯೆಗಳು ವಯಸ್ಸಾದವರಲ್ಲಿ ಒಳ್ಳೆಯ ನಿದ್ರೆ, ಮಾನಸಿಕ ಧೈರ್ಯ ಮತ್ತು ನೆನಪಿನ ಶಕ್ತಿಯನ್ನು ಹೆಚ್ಚು ಮಾಡುತ್ತವೆ ಎಂದು ತಿಳಿದುಬಂದಿದೆ.

ಹಾಗೆಯೇ ಮನೆಯಲ್ಲಿರುವ ವಯಸ್ಸಾದವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿರುವ ಕುಟುಂಬದ ಸದಸ್ಯರಿಗೆ ಆ ದೈಹಿಕ ಮತ್ತು ಮಾನಸಿಕ ಹೊರೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಯೋಗ ನೀಡುತ್ತದೆ. ಈ ಎಲ್ಲಾ ಲಾಭಗಳನ್ನು ನೋಡಿ, ನಮ್ಮ ಆಯುಷ್ ಸಚಿವಾಲಯವು ಕೆಲವು ಕಾಯಿಲೆಗಳು ಮತ್ತು ಹಿರಿಯ ನಾಗರಿಕರಿಗಾಗಿ ವಿಶೇಷವಾದ 10 ಯೋಗ ನಿಯಮಗಳನ್ನು ತಂದಿದೆ. ಇದರಲ್ಲಿ ವಯಸ್ಸಾದವರ ಆರೋಗ್ಯಕ್ಕೆಂದೇ ಸಂಶೋಧನೆ ಮಾಡಿ ಸಿದ್ಧಪಡಿಸಿದ ಯೋಗದ ಭಾಗವೂ ಇದೆ. ಅಷ್ಟೇ ಅಲ್ಲದೆ, ವರ್ಷದ 365 ದಿನಗಳೂ ಉಚಿತವಾಗಿ 100 ದಿನಗಳ ಆನ್‌ಲೈನ್ ಯೋಗ ತರಬೇತಿ ನೀಡುವ 'ಯೋಗ 365' ಎಂಬ ದೇಶವ್ಯಾಪಿ ಅಭಿಯಾನವನ್ನು ಶುರು ಮಾಡಲಾಗಿದೆ. ಇದು ಎಲ್ಲಾ ವಯಸ್ಸಿನವರಿಗೂ ಯೋಗ ಸುಲಭವಾಗಿ ಸಿಗುವಂತೆ ಮತ್ತು ಅವರ ದೈನಂದಿನ ಸಂಗಾತಿಯಾಗುವಂತೆ ಮಾಡಲು ಸಹಾಯ ಮಾಡುತ್ತದೆ.

ಎರಡು ಸಾವಿರ ವರ್ಷಗಳಿಗಿಂತಲೂ ಮುಂಚೆ, ತಮಿಳಿನ ಪ್ರಸಿದ್ಧ ಸಂತ ಮತ್ತು ವಿದ್ವಾಂಸ ತಿರುವಳ್ಳುವರ್ ಅವರು ತಮ್ಮ ಕುರಳ್ (949) ನಲ್ಲಿ ಹೀಗೆ ಹೇಳಿದ್ದರು: ಚಿಕಿತ್ಸೆ ಕೊಡುವ ಮೊದಲು ರೋಗಿಯ ಪರಿಸ್ಥಿತಿ, ರೋಗದ ರೀತಿ ಮತ್ತು ಸರಿಯಾದ ಸಮಯವನ್ನು ಯೋಚಿಸಬೇಕು.

ಈ ಹಳೆಯ ಮಾತು ಇಂದಿನ ಆರೋಗ್ಯಕರ ವೃದ್ಧಾಪ್ಯದ ಯೋಗದ ನಿಯಮಗಳಿಗೂ ಹೊಂದಿಕೆಯಾಗುತ್ತದೆ. ಇಲ್ಲಿ ಯೋಗದ ಅಭ್ಯಾಸಗಳನ್ನು ವ್ಯಕ್ತಿಯ ವಯಸ್ಸು, ಆರೋಗ್ಯ ಮತ್ತು ಅವರ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲಾಗುತ್ತದೆ. ಇದರಿಂದ ಹಿರಿಯರು ತಮ್ಮ ವಯಸ್ಸಾದ ಕಾಲದಲ್ಲೂ ಹೆಚ್ಚು ಆರೋಗ್ಯವಾಗಿ, ಸಕ್ರಿಯವಾಗಿ ಮತ್ತು ಗೌರವದ ಬದುಕು ನಡೆಸಲು ಸಾಧ್ಯವಾಗುತ್ತದೆ.

ನಾವು 2026ರ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿರುವ ಈ ಸಮಯದಲ್ಲಿ, ಪ್ರತಿಯೊಬ್ಬ ನಾಗರಿಕರು, ಶಾಲೆ-ಕಾಲೇಜುಗಳು, ಸಂಘ-ಸಂಸ್ಥೆಗಳು, ವೈದ್ಯರು ಮತ್ತು ಸಮಾಜದ ಮುಖಂಡರು ಯೋಗವನ್ನು ಬರೀ ಆಚರಣೆಗೆ ಮಾಡುವ ಕಸರತ್ತು ಎಂದು ತಿಳಿಯದೆ, ಇಡೀ ಜೀವನದ ಒಳ್ಳೆಯ ಹವ್ಯಾಸವನ್ನಾಗಿ ಮಾಡಿಕೊಳ್ಳಬೇಕು ಎಂದು ನಾನು ವಿನಂತಿಸುತ್ತೇನೆ. ಒಂದು ಸಮಾಜವು ತನ್ನ ಹಿರಿಯರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದರ ಮೇಲೆಯೇ ಆ ಸಮಾಜದ ಯೋಗ್ಯತೆ ತಿಳಿಯುತ್ತದೆ. ಆದ್ದರಿಂದ, ನಮ್ಮ ಹಿರಿಯ ನಾಗರಿಕರು ಯಾವುದೇ ಭಯ, ಬೇರೆಯವರ ಮೇಲಿನ ಅವಲಂಬನೆ ಅಥವಾ ಒಂಟಿತನವಿಲ್ಲದೆ ಗೌರವ, ಉತ್ಸಾಹ, ನೆಮ್ಮದಿಯಿಂದ ಬದುಕುವಂತಹ ವಾತಾವರಣವನ್ನು ನಿರ್ಮಿಸಲು ನಾವೆಲ್ಲರೂ ಶ್ರಮಿಸೋಣ. ಯೋಗವನ್ನು ನಮ್ಮ ದಿನನಿತ್ಯದ ಬದುಕಿನ ಭಾಗವಾಗಿಸಿಕೊಳ್ಳುವ ಮೂಲಕ, ನಮ್ಮ ಹಿರಿಯರ ಜೀವನದ ಕೊನೆಯ ದಿನಗಳು ನಿಜವಾಗಿಯೂ ಆರೋಗ್ಯ, ಶಾಂತಿ ಮತ್ತು ತೃಪ್ತಿಯ ದಿನಗಳಾಗುವಂತೆ ನಾವೆಲ್ಲರೂ ಒಟ್ಟಾಗಿ ನೋಡಿಕೊಳ್ಳೋಣ!

(ಭಾರತದ ಉಪರಾಷ್ಟ್ರಪತಿ)



ರೋಮ್‌ಕಾಮ್ ಪಾರ್ಟ್ನರ್ ಫಸ್ಟ್‌ಲುಕ್

ಈ ಹಿಂದೆ ಕೃಷ್ಣ ಅಜಯ್‌ರಾವ್ ಅಭಿನಯದ ಮಳೆ, ಧೈರ್ಯಂ ಅಲ್ಲದೆ ದಿಲ್ ಪಸಂದ್‌ನಂಥ ವಿಭಿನ್ನ ಶೈಲಿಯ ಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿಕೊಂಡಿದ್ದ ಶಿವತೇಜಸ್ ಅವರು ಇದೀಗ ಮತ್ತೊಂದು ಫ್ಯಾಮಿಲಿ ಎಂಟರ್‌ಟೈನರ್ ಚಿತ್ರವನ್ನು ಕನ್ನಡಿಗರ ಮಡಿಲಿಗೆ ಹಾಕಲು ಸಿದ್ಧತೆ ನಡೆಸಿದ್ದಾರೆ. ಆ ಚಿತ್ರದ ಹೆಸರು ಪಾರ್ಟ್ನರ್. ಇದೀಗ ಸಿನಿಮಾದ ಫಸ್ಟ್ ಲುಕ್ ರಿಲೀಸ್ ಮಾಡುವ ಮೂಲಕ ಚಿತ್ರದ ಪ್ರಚಾರಕ್ಕೆ ಚಿತ್ರತಂಡ ಚಾಲನೆ ನೀಡಿದೆ.

ಈಗಿನ ಜನರೇಶನ್‌ನಲ್ಲಿ ಲವ್, ಬ್ರೇಕಪ್, ಲಿವಿಂಗ್ ಟುಗೆದರ್ ಇದೆಲ್ಲ ಕಾಮನ್ ಆಗಿಬಿಟ್ಟಿದೆ. ಇಂಥದ್ದೆಲ್ಲ ಇಟ್ಟುಕೊಂಡು ಇದಲ್ಲ ಜೀವನ, ಅದು ಬೇರೆಯೇ ಇದೆ. ಪಾರ್ಟ್ನರ್ ಅಂದ್ರೆ ಜೀವನಪೂರ್ತಿ ನಂಬಿಕೆ ಇಟ್ಟುಕೊಂಡು ಜತೆಗಿರುವಂಥ ಜೀವನ ಸಂಗಾತಿ. ನಮ್ಮ ಮೇಲೆ ನಂಬಿಕೆ ಇರುವ ಪಾರ್ಟನರ್ ಇರಬೇಕು ಅಂತ ನಿರ್ದೇಶಕ ಶಿವತೇಜಸ್ ಅವರು ತಮ್ಮ ನಿರ್ದೇಶನದ ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ನಿರ್ಮಾಪಕ ದೇವಿಶಂದ್ರ ಅವರು ಚಿತ್ರರಂಗಕ್ಕೆ ಹೊಸಬರಾದರೂ ಒಂದೊಳ್ಳೇ ಸದಭಿರುಚಿಯ ಚಿತ್ರವನ್ನು ಕನ್ನಡಿಗರಿಗೆ ಕೊಡಬೇಕೆಂಬ ಉದ್ದೇಶದಿಂದ ಯಾವುದಕ್ಕೂ ಕೊರತೆ ಮಾಡದಂತೆ ಅದ್ದೂರಿಯಾಗಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ರೋಮ್ ಕಾಮ್ ಜತೆಗೆ ಎಮೋಷನಲ್ ಸಬ್ಜೆಕ್ಟ್ ಇಟ್ಟುಕೊಂಡು ನಿರ್ದೇಶಕ ಶಿವತೇಜಸ್ ಅವರು ಪಾರ್ಟನರ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಈಗಿನ ಕಾಲದಲ್ಲಿ ಹುಡುಗರಿಗೆ ಮದುವೆಯಾಗಲು ಹೆಣ್ಣೇ ಸಿಗ್ತಿಲ್ಲ, ಎಲ್ಲರೂ ಸರ್ಕಾರಿ ಕೆಲಸ, ಸಾಫ್ಟ್‌ವೇರ್ ಎಂಜಿನಿಯರ್ ಆದವರನ್ನೇ ಹುಡುಕುತ್ತಾರೆ. ಇದೆಲ್ಲವನ್ನೂ ಸೇರಿಸಿಕೊಂಡು ಸುಂದರ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರವನ್ನು ಕಟ್ಟಿಕೊಡುತ್ತಿದ್ದಾರೆ. ಈ ಚಿತ್ರದಲ್ಲಿ ನಟ ಕೃಷ್ಣ ಅಜೇಯ್‌ರಾವ್ ಹಾಗೂ ಬೃಂದಾ ಆಚಾರ್ಯ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಹಿರಿಯ ನಟ ರಂಗಾಯಣ ರಘು ಅವರು ಒಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

> ಶಿವತೇಜಸ್ - ಅಜಯ್‌ರಾವ್ ಕಾಂಬಿನೇಷನ್‌ನ 3ನೇ ಚಿತ್ರ

ಈಗಾಗಲೇ ಪಾರ್ಟ್ನರ್ ಚಿತ್ರಕ್ಕೆ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿ, ಶೂಟಿಂಗ್ ಮುಗಿಸಿರುವ ಚಿತ್ರತಂಡ, ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ಈ ಚಿತ್ರವನ್ನು ಹೆಚ್.ಪಿ.ಆರ್. ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ಹರೀಶ್ ದೇವಿಶಂದ್ರ ಅವರು ನಿರ್ಮಿಸಿದ್ದಾರೆ. ಸುಜ್ಞಾನ್ ಅವರ ಛಾಯಾಗ್ರಹಣ, ನಕುಲ್ ಅಭಯಂಕರ್ ಅವರ ಸಂಗೀತ ಸಂಯೋಜನೆ, ಕೆ.ಎಂ.ಪ್ರಕಾಶ್ ಅವರ ಸಂಕಲನ, ಈ ಚಿತ್ರಕ್ಕಿದೆ. ಪಾರ್ಟನರ್ ಚಿತ್ರದಲ್ಲಿ 4 ಹಾಡುಗಳಿದ್ದು, ಕವಿರಾಜ್, ಪ್ರಮೋದ್ ಮರವಂತೆ, ನಾಗಾರ್ಜುನ ಶರ್ಮ ಅವರುಗಳು ಸಾಹಿತ್ಯ ರಚಿಸಿದ್ದಾರೆ.

ಜೂನ್ 26ಕ್ಕೆ ಸಸ್ಪೆನ್ಸ್ ಥ್ರಿಲ್ಲರ್ ರಕ್ಷಕ 2



ಪೊಲೀಸ್ ಇನ್‌ವೆಸ್ಟಿಗೇಷನ್ ಸುತ್ತ ನಡೆಯುವ ಥ್ರಿಲ್ಲರ್ ಕಥೆಯ ಚಿತ್ರಗಳನ್ನು ಕನ್ನಡ ಸಿನಿಪ್ರೇಕ್ಷಕರು ಯಾವತ್ತೂ ಪ್ರೋತ್ಸಾಹಿಸುತ್ತಲೇ ಬಂದಿದ್ದಾರೆ, ಅದಕ್ಕೆ ಈ ಹಿಂದೆ ತೆರೆಕಂಡು ಸೂಪರ್ ಹಿಟ್ ಆದ ಪೊಲೀಸ್ ಸ್ಟೋರಿ, ಲಾಕಪ್ ಡೆತ್, ಕಿರಣ್ ಬೇಡಿ ಹೀಗೆ ಅನೇಕ ಚಿತ್ರಗಳು ಸಾಕ್ಷಿಯಾಗಿವೆ, ಇತ್ತೀಚೆಗೆ ಅಂಥದೇ ಕಥಾಹಂದರ ಒಳಗೊಂಡ ರಕ್ಷಕ ಚಿತ್ರವು ಯಶಸ್ವಿಯಾಗಿ ಪ್ರದರ್ಶನಗೊಂಡು 100 ದಿನಗಳನ್ನು ಸಹ ಪೂರೈಸಿತ್ತು. ಈಗಿನ ಸಮಾಜದಲ್ಲಿ ಪೊಲೀಸ್ ವ್ಯವಸ್ಥೆ ಹೇಗಿದೆ, ಅದರ ಸಾಧಕ ಬಾಧಕಗಳೇನು ಎನ್ನುವುದರ ಸುತ್ತ ನಡೆಯುವ ಕಥೆ ಈ ಚಿತ್ರದಲ್ಲಿತ್ತು. ಡಾ.ಆರ್. ವಿಜಯಕುಮಾರ್ ಅವರು ಈ ಚಿತ್ರದಲ್ಲಿ ಒಬ್ಬ ದಕ್ಷ ಪೊಲೀಸ್ ಅಧಿಕಾರಿಯಾಗಿ ನಟಿಸುವ ಜತೆಗೆ ನಿರ್ಮಾಣ ಹಾಗೂ ನಿರ್ದೇಶನದ ಜವಾಬ್ದಾರಿಯನ್ನೂ ನಿರ್ವಹಿಸಿದ್ದರು, ಕಳೆದ 30 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ತೊಡಗಿಕೊಂಡಿರುವ ವಿಜಯ ಕುಮಾರ್ ಅವರು ಶಿವಣ್ಣ ಅಭಿನಯದ ಓಂ, ಅನುರಾಗ ಸಂಗಮ ಚಿತ್ರಗಳಲ್ಲೂ ನಟಿಸಿದ್ದಾರೆ, ಇದೀಗ ಅದೇ ವಿಜಯ್‌ಕುಮಾರ್ ಅವರು ರಕ್ಷಕ ಚಿತ್ರದ ಮುಂದುವರಿದ ಭಾಗವಾಗಿ ರಕ್ಷಕ -2 ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಅವರ ನಿರ್ದೇಶನದ ಮೂರನೇ ಚಿತ್ರವೂ ಇದಾಗಿದ್ದು, ಇದೇ ಶುಕ್ರವಾರ (ಜೂ.26) ಈ ಚಿತ್ರ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆ ಕಾಣುತ್ತಿದೆ.


ರಕ್ಷಕ ಚಿತ್ರದ ಮುಂದುವರಿದ ಭಾಗ

ಲವ್, ಆಕ್ಷನ್, ಥ್ರಿಲ್ಲರ್, ಸಸ್ಪೆನ್ಸ್, ಹಾರರ್, ಫ್ಯಾಮಿಲಿ ಸೆಂಟಿಮೆಂಟ್ ಜತೆಗೆ ಕಾಮಿಡಿ ಹೀಗೆ ಎಲ್ಲಾ ಥರದ ಮನರಂಜನಾತ್ಮಕ ಅಂಶಗಳನ್ನೂ ಒಳಗೊಂಡಿರುವ ಈ ಚಿತ್ರಕ್ಕೆ ಬೆಂಗಳೂರು ನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಫ್ಯಾಮಿಲಿ ಆಡಿಯನ್ಸ್ ಇಷ್ಟಪಡುವಂಥ ಚಿತ್ರವನ್ನು ಮಾಡಿದ್ದೇವೆ, ಒಟಿಟಿ ಬಿಟ್ಟು ಥೇಟರಿಗೇ ಬಂದು ಸಿನಿಮಾ ನೋಡಿ ಅದರ ಅನುಭವವೇ ಬೇರೆ ಎಂದು ವಿಜಯಕುಮಾರ್ ಅವರು ಪ್ರೇಕ್ಷಕರಲ್ಲಿ ಮನವಿ ಮಾಡಿದ್ದಾರೆ.

ಸರ್ವೆ ಸ್ಟುಡಿಯೋಸ್ ಬ್ಯಾನರ್ ಅಡಿ ಶಿವುಸರ್ವೇಶ್ ಅವರು ಈ ಚಿತ್ರವನ್ನು ನಿರ್ಮಿಸಿದ್ದು, ಡಾ.ಆರ್. ವಿಜಯಕುಮಾರ್ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನದ ಜತೆಗೆ ಇದೇ ಮೊದಲಬಾರಿಗೆ ಸಂಗೀತ ಸಂಯೋಜನೆಯ ಜವಾಬ್ದಾರಿಯನ್ನೂ ಸಹ ನಿರ್ವಹಿಸಿದ್ದಾರೆ. ಚಿತ್ರದಲ್ಲಿ ಒಟ್ಟು 3 ಹಾಡುಗಳಿವೆ, ವ್ಯಾಲೆಂಟ್ ವೇಲು ಅವರ ಸಾಹಸ, ವಿಜಯ್ ಮಧಾಳೇ ಅವರ ಛಾಯಾಗ್ರಹಣ ಹಾಗೂ ಸಂಕಲನ ಈ ಚಿತ್ರಕ್ಕಿದೆ. ರಕ್ಷಕ-2 ಚಿತ್ರದಲ್ಲೂ ಸಹ ವಿಜಯ್‌ಕುಮಾರ್ ಅವರು ದಕ್ಷ ಪೊಲೀಸ್ ಅಧಿಕಾರಿಯ ಪಾತ್ರ ಕಂಟಿನ್ಯೂ ಆಗಿದೆ, ಹಾಸ್ಯನಟ ಲಯಕೋಕಿಲ ಅವರು ಪೊಲೀಸ್ ಕಾನ್ಸ್ಟೇಬಲ್ ಪಾತ್ರವನ್ನು ನಿರ್ವಹಿಸಿದ್ದಾರೆ. ರಾಜವಂಶಿ, ರಾಧಿಕಾ ಈ ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಉಳಿದ ಪಾತ್ರಗಳಲ್ಲಿ ಮಧುಶ್ರೀ, ಖಳನಾಯಕನಾಗಿ ಹಿರಿಯನಟ ಸುರೇಂದ್ರಕುಮಾರ್, ಮುರಳಿಕೃಷ್ಣ, ವಿಜಯ್ ಮಧಾಳೇ, ಅರವಿಂದ್, ರೋಹಿಣಿ ಮುಂತಾದವರು ನಟಿಸಿದ್ದಾರೆ. ಎ.ಎಸ್.ಕೆ. ಸಿನಿ ಕ್ರಿಯೇಷನ್ಸ್ ಸಂಸ್ಥೆಯ ಮೂಲಕ ಈ ಚಿತ್ರವು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ಮೋಡ ಕವಿದ ವಾತಾವರಣ ಸಿಂಗಪೂರ್‌ನಲ್ಲಿ ಪ್ರೀಮಿಯರ್



ಒಂದು ಸರಳ ಪ್ರೇಮಕಥೆ ಚಿತ್ರದ ನಂತರ ನಿರ್ದೇಶಕ ಸಿಂಪಲ್ ಸುನಿ ಬತ್ತಳಿಕೆಯಿಂದ ಹೊರಬರುತ್ತಿರುವ ಮತ್ತೊಂದು ಸೊಗಸಾದ ಪ್ರೇಮಕಥಾನಕ ಮೋಡ ಕವಿದ ವಾತಾವರಣ. ಇದೇ ತಿಂಗಳ 26ರ ಶುಕ್ರವಾರ ಬಿಡುಗಡೆಯಾಗುತ್ತಿರುವ ಈ ಚಿತ್ರದ ಪ್ರಚಾರವೂ ಭರದಿಂದ ನಡೆದಿದೆ. ವಿಶೇಷವಾಗಿ ಕಳೆದ ಶುಕ್ರವಾರ ಈ ಚಿತ್ರದ ವರ್ಲ್ಡ್ ಪ್ರೀಮಿಯರ್ ಶೋ ಸಾಗರದಾಚೆಯ ಸೊಬಗಿನ ನಾಡು ಎಂದೇ ಹೆಸರಾದ ಸಿಂಗಪೂರ್‌ನಲ್ಲಿ ನಡೆದಿದೆ, ಈವೇಳೆ ಅಲ್ಲಿನ ಪ್ರೇಕ್ಷಕರಿಂದ ಚಿತ್ರಕ್ಕೆ ಭರ್ಜರಿ ಪ್ರತಿಕ್ರಿಯೆ ದೊರಕಿದೆ, ಈ ಕುರಿತು ಮಾತನಾಡಿದ ನಿರ್ಮಾಪಕರ ಮೈಸೂರು ರಮೇಶ್, ಪ್ರೇಕ್ಷಕರು ನಮ್ಮ ಚಿತ್ರದ ಪ್ರೀಮಿಯರ್ ಶೋ ನೋಡಲು ಥೇಟರಿಗೆ ಬರುವಾಗ ಸಾಧಾರಣವಾಗಿದ್ದ ಅವರ ಮುಖಭಾವ, ಸಿನಿಮಾ ವೀಕ್ಷಿಸಿ ಹೊರ ಬರುವಾಗ ಮುಖದಲ್ಲಿ ಮಂದಹಾಸ ಕಾಣುತ್ತಿತ್ತು, ಬಹಳ ದಿನಗಳ ನಂತರ ಒಂದೊಳ್ಳೇ ಸದಭಿರುಚಿಯ ಸಿನಿಮಾ ನೋಡಿದ ತೃಪ್ತಿ ಅದರಲ್ಲಿ ಕಾಣುತ್ತಿತ್ತು, ಅಲ್ಲೇ ನಮ್ಮ ಸಿನಿಮಾ ಗೆದ್ದಿದೆ ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ, ಈ ಹಿಂದೆ ನಮ್ಮ ಬ್ಯಾನರ್ ಅಡಿ ಒಂದು ಸರಳ ಪ್ರೇಮಕಥೆ ಚಿತ್ರ ಮಾಡಿದಾಗ ನಿರೀಕ್ಷಿಸಿರದಂಥ ಪ್ರತಿಕ್ರಿಯೆ ದೊರಕಿತ್ತು. ಆ ಚಿತ್ರವನ್ನು ದೊಡ್ಡ ಮಟ್ಟದ ನಿರೀಕ್ಷೆ ಇಟ್ಟುಕೊಂಡೇ ಅದ್ದೂರಿಯಾಗಿ ಮಾಡಿದ್ದೇವೆ. ಹಾಗಾಗಿ ಅಭೂತಪೂರ್ವ ರೆಸ್ಪಾನ್ಸ್ ಖಂಡಿತ ದೊರಕಲಿದೆ, ಅದು ಈಗಾಗಲೇ ಸಾಬೀತಾಗಿದೆ ಎಂದವರು ಹೇಳಿದ್ದಾರೆ,

ನಿರ್ದೇಶಕ ಸಿಂಪಲ್ ಸುನಿ ಮಾತನಾಡಿ ಮೋಡಕವಿದ ವಾತಾವರಣ ನನ್ನ ಜೀವನದ ಸ್ಪೆಷಲ್ ಸಿನಿಮಾಆಗಿದೆ, ನಾನು ಟ್ರೈಲರ್ ಚೆನ್ನಾಗಿ ಕಟ್ ಮಾಡುತ್ತೇನೆ ಎಂದು ಎಲ್ಲರೂ ಹೇಳುತ್ತಾರೆ. ಆದ್ರೆ, ಈ ಚಿತ್ರದ ಚಾಲೆಂಜ್ ಏನು ಅಂದರೆ, ಇದರ ಟ್ರೈಲರನ್ನು ಚೆನ್ನಾಗಿ ಕಟ್ ಮಾಡಲು ಆಗುವುದಿಲ್ಲ, ಏಕೆಂದರೆ ಚಿತ್ರದ ಪ್ರಥಮಾರ್ಧ ಭಾಗವನ್ನು ನಾನು ಥಿಯೇಟರ್‌ನಲ್ಲೇ ರಿವೀಲ್ ಮಾಡಬೇಕಿದ್ದು, ಉಳಿದರ್ಧದಲ್ಲೇ ಟ್ರೈಲರ್ ಮಾಡಬೇಕಿತ್ತು. ಕಥೆಯಲ್ಲಿ ಏನೋ ಒಂದು ಅಂಶವಿದೆ. ಅದನ್ನು ಥಿಯೇಟರ್‌ನಲ್ಲೇ ನೋಡಬೇಕು. ಹಾಗಾಗಿ ಅರ್ಧ ಸಿನಿಮಾದಲ್ಲೇ ಟ್ರೈಲರ್ ಕಟ್ ಮಾಡೋದು ದೊಡ್ಡ ಸಾಹಸವೇ ಆಗಿತ್ತು. ಒಂದು ಸರಳ ಪ್ರೇಮ ಕಥೆ ನಂತರ ನಿರ್ಮಾಪಕ ರಮೇಶ್ ಅವರು ನಮ್ಮ ತಂಡದ ಜೊತೆ ಕೈಜೋಡಿಸಿರುವುದಕ್ಕೆ ಪಾಸಿಟಿವ್ ವೈಬ್ಸ್ ಇದೆ ಎಂದವರು ಹೇಳಿದರು. ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಒಳಗೊಂಡ ಮೋಡ ಕವಿದ ವಾತಾವರಣ ಚಿತ್ರದಲ್ಲಿ ನಾಯಕ ಶೀಲಮ್ ಜೋಡಿಯಾಗಿ ಸಾತ್ವಿಕಾ ಹಾಗೂ ಮೋಕ್ಷಾ ಕುಶಾಲ್ ನಟಿಸಿದ್ದಾರೆ. ಹಿಂದೆ ಒಂದು ಸರಳ ಪ್ರೇಮಕಥೆ ಚಿತ್ರ ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಈ ಚಿತ್ರವನ್ನೂ ನಿರ್ಮಾಣ ಮಾಡಿದೆ. ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೇವಾಡಿ ಹಾಗೂ ಗೋವಾ ರಮೇಶ್ ಸೇರಿ ಬಂಡವಾಳ ಹೂಡಿದ್ದಾರೆ. ಮೋಡ ಕವಿದ ವಾತಾವರಣ ಚಿತ್ರಕ್ಕೆ ಸಂತೋಷ್ ರೈ ಪಾತಾಜೆ ಅವರ ಕ್ಯಾಮೆರಾ ವರ್ಕ್, ಜುಡಾ ಸ್ಯಾಂಡಿ ಅವರ ಸಂಗೀತ ನಿರ್ದೇಶನ ಹಾಗೂ ಆದಿತ್ಯ ಕಶ್ಯಪ್ ಸಂಕಲನವಿದೆ.







Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26